ಸಂಪುಟ 15
ಸಂಚಿಕೆ 19

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

19 ಮೇ 1993
ರೂ. 2.00

ಎಲ್ಲಿ? ದೇಶದ ಪ್ರಥಮ ವಿರೋಧಪಕ್ಷವೆಲ್ಲಿ??

ಬಜೆಟ್ ವಿರುದ್ಧ ಮತ ಹಾಕುವಂದು ಎಲ್ಲಿ, ಅವರೆಲ್ಲಿ???

- ಜಿ.ಎನ್. ನಾಗರಾಜ್

1992ರ ಬಜೆಟ್ ಅಧಿವೇಶನ. ರಾಷ್ಟ್ರಪತಿಗಳ ವಂದನಾ ನಿರ್ಣಯದ ಬಗ್ಗೆ ಮತ ನೀಡಿಕೆಯ ದಿನ ಹತ್ತಿರ ಬರುತ್ತಿದ್ದಂತೆ ನರಸಿಂಹರಾಯರಿಗೆ ಎದೆಯಲ್ಲಿ ಡವಡವ. ನಿದ್ದೆಯಿಲ್ಲದ ರಾತ್ರಿಗಳು. ಅವರ ಮಂತ್ರಿಗಳೆಲ್ಲರಿಗೂ ಹಗಲೂ ಇರುಳೂ ಪರದಾಟ. ಎಲ್ಲ ರೀತಿಯ ಕೊಳಚೆ ತಂತ್ರಗಳೂ ಬೇಕಾಯಿತು. ಉಸಿರು ಬಿಗಿಹಿಡಿದು ಆತಂಕದಿಂದ ಮುಳ್ಳಿನ ಮೇಲೆ ನಿಂತಂತೆ ಒದ್ದಾಡಿದ ನಂತರ ಕೇವಲ 38 ಮತಗಳಿಂದ "ಪಾರಾದವಪ್ಪಾ" ಎಂದು ನರಸಿಂಹರಾಯರೂ ಅವರ ಸಂಪುಟಿಗರು ನಿಟ್ಟುಸಿರು ಬಿಟ್ಟರು. ಇದಕ್ಕೆ ಹಿನ್ನೆಲೆಯಾಗಿ ಘಟನೆಗಳ ಒಂದು ಸರಮಾಲೆಯೇ ಇದೆ.

ಬಂತಲ್ಲಪ್ಪಾ ಪೀಕಲಾಟ

ನರಸಿಂಹರಾಯರ ಸರಕಾರ ಒಂದರ ಮೇಲೊಂದರಂತೆ ಹೊಸ ಆರ್ಥಿಕ ನೀತಿಯ ಬಾಣಗಳನ್ನು ಬಿಡುತ್ತಾ ಭಾರತದ ಬಡಬಗ್ಗರನ್ನು ಬೀದಿಗೆ ತಳ್ಳುತ್ತಿದ್ದಾಗ ಲೋಕಸಭೆಯಲ್ಲಿ ಪ್ರಮುಖ ವಿರೋಧ ಪಕ್ಷ, ಮುಂದಿನ ಆಡಳಿತಕ್ಕೆ ವಾರಸುದಾರ ಎಂದು ಕೊಚ್ಚಿಕೊಳ್ಳುವ ಬಿಜೆಪಿ ಬಾಯಿ ಬಿಡದೆ ಕುಳಿತಿತ್ತು. ಆಗ ನರಸಿಂಹರಾಯರ ಸರಕಾರದ ವಿರುದ್ಧ ರಾಮ ಬಾಣ ತೊಟ್ಟವರು ರಾಮನ ಭಂಟರೆಂಬ ಅದ್ವಾನಿಯವರಲ್ಲ. ಎಡ-ರಾಷ್ಟ್ರೀಯ ರಂಗದವರು. ಆಗ ಎರಡು ರಂಗಗಳ ನಾಯಕರೂ ಯಾವ ರಾಷ್ಟ್ರಪತಿಗಳ ಭಾಷಣದಲ್ಲಿ ದೇಶವನ್ನು ದಿವಾಳಿಯೆಬ್ಬಿಸಿ ಪರಕೀಯರಿಗೆ ಮಾರುವ ನೀತಿಗಳನ್ನೆಲ್ಲಾ ಸಮರ್ಥಿಸಲಾಗಿದೆಯೋ ಆ ಭಾಷಣದ ವಿರುದ್ಧ ಮತ ಹಾಕುತ್ತೇವೆಂದು ಘೋಷಿಸಿದರು. ಆಗ ಬಂತು ಬಿಜೆಪಿಗೆ ಪೀಕಲಾಟ. ಕೊನೆಗೂ ನಾವೂ ರಾಷ್ಟ್ರಪತಿಗಳ ಭಾಷಣಕ್ಕೆ ತಿದ್ದುಪಡಿ ತರುತ್ತೇವೆ. ಅದರ ವಿರುದ್ಧ ಮತ ಹಾಕುತ್ತೇವೆ ಎಂದು ಅವರು ಹೇಳಲೇಬೇಕಾಯಿತು. ಅವರು ಎಣಿಸಿದ್ದರು: ನಾವು ತರುವ ತಿದ್ದುಪಡಿಗೆ ಎಡರಂಗ ರಾಷ್ಟ್ರೀಯ ರಂಗ ಮತ ಹಾಕುವುದಿಲ್ಲ ಅವರು ತರುವ ತಿದ್ದುಪಡಿಗೆ ನಾವು ಮತ ಹಾಕಬೇಕಾದ್ದಿಲ್ಲ ಎಂದು. ಆದರೆ ಕೂಡಲೇ ಬಂತು ಎಡರಂಗ-ರಾಷ್ಟ್ರೀಯ ರಂಗಗಳ ಘೋಷಣೆ. ನಾವು ತಿದ್ದುಪಡಿ ತಂದವರು ಯಾರು ಎಂದು ಯೋಚಿಸುವುದಿಲ್ಲ ದೇಶದ, ಜನರ ಹಿತಾಸಧನೆಯಾಗುವಂತಿದ್ದರೆ ಯಾರು ತಂದ ತಿದ್ದುಪಡಿಗೂ ಮತ ಹಾಕುತ್ತೇವೆ ಎಂದು. ಸರಿ ಬಂತಲ್ಲಪ್ಪಾ ಪೀಕಲಾಟ. ಆಳುವ ಕಾಂಗ್ರೆ ಪಕ್ಷಕ್ಕೆ ಮತ್ತು ಆರ್ಥಿಕ ನೀತಿಯಲ್ಲಿ ಅವರ ನೆಚ್ಚಿನ ಬೆಂಬಲಿಗರಾಗಿದ್ದ ಬಿಜೆಪಿಗೆ.

ಗುಮ್ಮನಗುಸುಕನಂತೆ ಸುಮ್ಮನಿದ್ದುಬಿಟ್ಟಿತು

ಕೊನೆಗೆ ಲೋಕಸಭೆಯಲ್ಲಿ ಮತದಾನವಾಯಿತು. ಒಂದು ಬಾರಿಯ ಅನುಭವವೇ ಸಾಕು ಬೇಕಾಯಿತು ಬಿಜೆಪಿಗೆ. ಅವರಿಗೆ ಯಾಲು ಎಲ್ಲಿ ಗುದ್ದಿದರೋ ಗೊತ್ತಿಲ್ಲ. ಮರುದಿನ ಬಿಜೆಪಿಯವರ ತಿದ್ದುಪಡಿಗಳಿಗೇ ನಾವು ಮತ ಹಾಕುತ್ತೇವೆಂದರೂ ಅವರು ಮತಗಣನೆ ಮಾಡಬೇಕೆಂದು ಕೇಳದೆ ಮತದಾನವೇ ಆಗದಂತೆ ನೋಡಿಕೊಂಡರು. ಅದೇ ಸಮಯದಲ್ಲಿ ಎಡ-ರಾಷ್ಟ್ರೀಯ ರಂಗಗಳ ಕೂಟ ಕೆಲಸದ ಹಕ್ಕು, ಆರ್ಥಿಕ ಸಾರ್ವಭೌಮತೆ, ಕಾರ್ಮಿಕರನ್ನು ಹೊರತಳ್ಳುವ ನೀತಿಗಳ ಬಗ್ಗೆ ತಂದಂತ ತಿದ್ದುಪಡಿಗಳಿಗೆ ಬಿಜೆಪಿ ಮತ ಹಾಕದೇ ಅವರು ಯಾರ ಪರ ಎಂದು ತೋರಿಸಿಕೊಟ್ಟರು.

ಮುಂದೆ ಬಜೆಟ್‌ಗೆ ಅಂಗೀಕಾರ ನೀಡುವ ಪ್ರಶ್ನೆ ಬಂದಾಗಲೂ ಗುಮ್ಮನಗುಸುಕನಂತೆ ಬಿಜೆಪಿ ಸುಮ್ಮನಿದ್ದುಬಿಟ್ಟಿತು.

93-94ರ ಬಜೆಟ್

ಈ ಎಲ್ಲಾ ಪ್ರಸಂಗಗಳಾಗಿ ಒಂದು ವರ್ಷ ಕಳೆದಿದೆ. ಈ ಒಂದು ವರ್ಷದಲ್ಲಿ ಗಂಗೆಯಲ್ಲಿ ಬಹಳ ನೀರು-ನೀರಲ್ಲ ರಕ್ತವೇ ಹರಿದಿದೆ. ಮಧ್ಯೆ ಡಿ. 6ರ ಕರಾಳ ದಿನ ಇದೆ. ಕಾಂಗ್ರೆ ಸರಕಾವನ್ನುರುಳಿಸಿ ಮಧ್ಯಂತರ ಚುನಾವಣೆ ನಡೆಸಿಯೇಬಿಡಬೇಕು ಎಂದು ಬಿಜೆಪಿಯ ಅಬ್ಬರ. ಅಣ್ಣಾ ಡಿಎಂಕೆ ಪಕ್ಷ ಹಾಗೂ ಕಾಂಗ್ರೆ ನಡುವಿನ ಸಂಬಂಧದಲ್ಲಿ ಬಿರುಕು ಇತ್ಯಾದಿ ಇತ್ಯಾದಿ.

ಕಾಂಗ್ರೆ ಮತ್ತಷ್ಟು ದುರ್ಬಲವಾಗಿದೆ

ಇಂತಹ ಸಂದರ್ಭದಲ್ಲಿಯೂ ರಾಷ್ಟ್ರದ ಸ್ವಾತಂತ್ರ್ಯ, ಸಾರ್ವಭೌಮತೆ, ಸ್ವಾವಲಂಬನೆಗೆ ಧಕ್ಕೆಯಾಗುವಂತಹ ದೇಶದ ಜನಸಾಮಾನ್ಯರೆಲ್ಲರ ಜೀವನ ನಾಶ ಮಾಡುವಂತಹ ಬಜೆಟ್. ಬಿಜೆಪಿ ಇದು ಜನವಿರೋಧಿ ಬಜೆಟ್ ಎಂದು ಸಾರಿ ತಾವೇ ಒಂದು ಪರ್ಯಾಯ ಬಜೆಟ್ ಕೂಡ ಬಿಡುಗಡೆ ಮಾಡಿದರು.

ಸಿಪಿಐ(ಎಂ) ಮತ್ತು ಇತರ ಎಡರಂಗ

ಪುಟ 5ನೋಡಿ

ಕರ್ನಾಟಕದ ರಾಜಕೀಯದಲ್ಲಿ ಮಹತ್ವದ ದಿಕ್ಸೂಚಿ

ಯಲಹಂಕ ಚುನಾವಣೆ

ದೇಶದ ಈಗಿನ ದುಸ್ಥಿತಿಗೆ ಕಾಂಗ್ರೆಸ್(ಐ), ಬಿಜೆಪಿ ಎರಡೂ ಕಾರಣ. ಒಂದುಕಡೆ ಕಾಂಗ್ರೆನ ಹೊಸ ಆರ್ಥಿಕ ನೀತಿಗಳು ಜನಗಳ ಮೇಲೆ ಭಾರೀ ಹೊರೆ ಹಾಕುತ್ತಿವೆ. ಇನ್ನೊಂದು ಕಡೆ ಬಿಜೆಪಿ ನೇತೃತ್ವದ ಧರ್ಮದ ಹೆಸರಲ್ಲಿ ಕೋಮುವಾದಿಗಳು ದೇಶವನ್ನು ಒಡೆಯುತ್ತಿದ್ದಾರೆ. ಮುಂಬೈ ಸ್ಫೋಟ ಮತ್ತಿತರ ಭಯೋತ್ಪಾದಕ ಕೃತ್ಯಗಳಲ್ಲಿ ಪಾಕಿಸ್ತಾನದ ಕೈವಾಡವಿದ್ದರೂ ಇವೆಲ್ಲದಕ್ಕೆ ಮೂಲಕಾರಣ ಕಾಂಗ್ರೆ, ಬಿಜೆಪಿ ನಿಲುವುಗಳೇ. ಈ ಹಿನ್ನೆಲೆಯಲ್ಲಿ ಮುಂಬರುವ ಯಲಹಂಕ ವಿಧಾನಸಭಾ ಉಪಚುನಾವಣಾ ಹೋರಾಟ ಮಹತ್ವದ್ದಾಗುತ್ತದೆ ಈ ಚುನಾವಣೆಯಲ್ಲಿ ಈ ಎರಡು ಪಕ್ಷಗಳನ್ನು ಸೋಲಿಸುವುದು ಅಗತ್ಯ ಎಂದು ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಎಸ್. ಸೂರ್ಯನಾರಾಯಣರಾವ್ ತಿಳಿಸಿದ್ದಾರೆ. ರಾಜ್ಯದ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಲು ಈ ಸವಾಲನ್ನು ಎದುರಿಸಲು ಒಂದಾಗಬೇಕು. ಜನತಾದಳದ ಅಭ್ಯರ್ಥಿಯವನ್ನು ಗೆಲ್ಲಿಸುವ ಸರ್ವಪ್ರಯತ್ನ ನಡೆಸಬೇಕು. ಈ ನಿಟ್ಟಿನಲ್ಲಿ ಜನತಾದಳ ಹಾಗೂ ಸ.ಜ.ಪ. ಒಟ್ಟಾಗಿ ಚುನಾವಣಾ ಪ್ರಚಾರ ನಡೆಸಲು ಸಿದ್ಧರಾಗಿರುವುದು ಸ್ವಾಗತಾರ್ಹ ಎಂದ ಕಾಂ. ಸೂರಿಯವರು ಸಿಪಿಐ(ಎಂ) ಜನತಾದಳ ಅಭ್ಯರ್ಥಿಗೆ ಬೆಂಬಲ ನೀಡುತ್ತದೆ ಅಲ್ಲದೆ ಕಾಂಗ್ರೆನ ಹೊಸ ಆರ್ಥಿಕ ನೀತಿಗಳನ್ನು ಬಿಜೆಪಿಯ ಕೋಮುವಾದೀ ಅಬ್ಬರವನ್ನು ಸೋಲಿಸಿ ಜನತಾದಳ ಅಭ್ಯರ್ಥಿಯ ಗೆಲುವಿಗೆ ಈ ವಿಧಾನ ಸಭಾ ಕ್ಷೇತ್ರದ ಕಾರ್ಮಿಕರು, ನೌಕರರು, ಇತರ ದುಡಿಯುವ ಜನಗಳ ನಡುವೆ ಸ್ವತಂತ್ರಪ್ರಚಾರ ಕಾರ್ಯ ನಡೆಸುತ್ತದೆ ಎಂದು ಕಾಂ. ಸೂರಿ ಹೇಳಿದರು. ಜನತಾಪಕ್ಷದಿಂದ ಸ್ಪರ್ಧಿಸಿರುವ ನಾರಾಯಣಸ್ವಾಮಿಯವರು ಜನತಾದಳದ ಪರವಾಗಿ ಹಿಂತೆಗೆದುಕೊಳ್ಳಬೇಕೆಂದು ಅವರು ವಿನಂತಿಸಿದರು.

ವ್ಯಾನ್ ಪ್ರಚಾರ, ಕರಪತ್ರಗಳು, ಪೋಸ್ಟರುಗಳ ಮೂಲಕ ಈ ವಿಧಾನಸಭಾ ಕ್ಷೇತ್ರದಲ್ಲಿ ವ್ಯಾಪಕ ಪ್ರಚಾರ ನಡೆಸಲು ಸಿಪಿಐ(ಎಂ) ಸಿದ್ಧತೆ ನಡೆಸಿದೆ.

ಸಮಾಜವಾದಕ್ಕಾಗಿ ಹೋರಾಟ ದೀರ್ಘ ಕಾಲದ್ದು ಕ್ಲಿಷ್ಟವಾದದ್ದು ಆದರೆ

ಅಂತಿಮವಾಗಿ ವಿಶ್ವದಲ್ಲೆಲ್ಲಾ ಸಮಾಜವಾದ ಗೆಲ್ಲುತ್ತದೆ

ಒಂದು ಸರಳ ಹಾಗೂ ಹೃದಯಸ್ಪರ್ಶಿ ಸಮಾರಂಭದಲ್ಲಿ ನಿರೀಕ್ಷೆ ಮತ್ತು ದೃಢ ನಿರ್ಧಾರದ ವಾತಾವರಣದಲ್ಲಿ ವಿಶ್ವದ ಹಲವಾರು ದೇಶಗಳಿಂದ ಬಂದ ಕಮ್ಯುನಿಸ್ಟ್ ಮುಖಂಡರು ಮಹಾನ್ ಕ್ರಾಂತಿಕಾರಿ ಹಾಗೂ ಚಿಂತಕ ಕಾರ್ಲ್ ಮಾರ್ಕ್ಸ್‌ರವರ 175 ನೇ ಜನ್ಮ ವಾರ್ಷಿಕದ ಸಂದರ್ಭದಲ್ಲಿ ಮೇ 5 ರಂದು ಕಲ್ಕತ್ತೆಯ ಮಾರ್ಕ್ಸ್ ಪ್ರತಿಮೆಯ ಮುಂದೆ ಹೂಮಾಲೆ ಅರ್ಪಿಸಿ ಮಾರ್ಕ್ಸ್‌ವಾದಕ್ಕೆ ತಾವು ಬದ್ಧರು ಎಂದು ಮತ್ತೊಮ್ಮೆ ಪಣತೊಟ್ಟರು.

ಮಾರ್ಕ್ಸ್-ಎಂಗೆಲ್ಸ್ ಪ್ರತಿಮೆಯೆದುರು ಹೂಮಾಲೆ ಅರ್ಪಣೆ ಸಮಾರಂಭದೊಂದಿಗೆ ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಏರ್ಪಡಿಸಿದ್ದ ಆತಿಥ್ಯ ಮೂರು ದಿನಗಳ ಅಂತರರಾಷ್ಟ್ರೀಯ ವಿಚಾರಸಂಕಿರಣ "ಸಮಕಾಲೀನ ವಿಶ್ವ ಸನ್ನಿವೇಶದಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆ" ಆರಂಭವಾಯಿತು. "ಮಾರ್ಕ್ಸ್‌ವಾದ ಚಿರಾಯುವಾಗಲಿ", "ಕಾರ್ಲ್‌ಮಾರ್ಕ್ಸ್ ಚಿರಾಯು", "ಲಾಲ್ ಸಲಾಂ"ನ ಘೋಷಣೆಗಳು ಗಗನ ಮುಟ್ಟಿದವು.

ವಿಚಾರ ಸಂಕಿರಣಕ್ಕೆ ಬಂದ ಸೋದರ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸುರವರು "ಮಾರ್ಕ್ಸ್‌ವಾದ ಅಥವಾ ವೈಜ್ಞಾನಿಕ ಸಮಾಜವಾದ ಯಾವುದೇ ಕಾಲ್ಪನಿಕ ಸ್ವರ್ಗದ ಕನಸು ಹೆಣೆಯುವುದಿಲ್ಲ ಅದೊಂದು ವಿಜ್ಞಾನ. ಜರ್ಮನ್ ತತ್ವಶಾಸ್ತ್ರ, ಬ್ರಿಟಿಷ್ ರಾಜಕೀಯ ಅರ್ಥಶಾಸ್ತ್ರ ಹಾಗೂ ಫ್ರೆಂಚ್ ಸಮಾಜವಾದೀ ಚಿಂತನೆಯಿಂದ ಮಾರ್ಕ್ಸ್ ರೂಪಿಸಿದ ವಿಜ್ಞಾನ. ಅದು ಕುರುಡು ನಂಬಿಕೆಯಲ್ಲ. ಅದು ಸೃಜನಶೀಲ ಕಾರ್ಯಾಚರಣೆಗೆ ಮಾರ್ಗದರ್ಶಿ. ಮಾರ್ಕ್ಸ್‌ವಾದದ ಅತೀ ಕಷ್ಟಕರ ಭಾಗವೆಂದರೆ ವಿಭಿನ್ನ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅದನ್ನು ಅನ್ವಯಿಸುವ ಕೆಲಸ. ಸಿದ್ಧಾಂತವನ್ನು ಸತತವಾಗಿ ಆಚರಣೆಯ ಒರೆಗಲ್ಲಿನಲ್ಲಿ ಪರೀಕ್ಷಿಸುತ್ತಿರಬೇಕು" ಎಂದರು.

ದೊಡ್ಡ ಶಕ್ತಿ ಹೆಸರಿಲ್ಲದಂತಾಗಿದೆ

ರಷ್ಯಾದಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿ ಹಾಗೂ ನಂತರ ಹಲವೆಡೆ ಸಮಾಜವಾದಿ ಕ್ರಾಂತಿಗಳ ರೂಪದಲ್ಲಿ ಮಾರ್ಕ್ಸ್‌ವಾದೀ ಚಿಂತನೆಯ ಯಶಸ್ಸಿನ ಬಗ್ಗೆ ಪ್ರಸ್ತಾಪಿಸುತ್ತಾ ಜ್ಯೋತಿಬಸು ಈಗಿನ ಹಿನ್ನಡೆಯ ಬಗ್ಗೆಯೂ ಹೇಳಿದರು. ಸಮಾಜವಾದ ಕಟ್ಟುವಲ್ಲಿ ದೊರೆತ ಯಶಸ್ಸು ಹಾಗೂ ಸೋಲು ಎರಡರಿಂದಲೂ ನಾವು ಪಾಠ ಕಲಿಯಬೇಕು ಎಂದರು. "ದುರದೃಷ್ಟವಶಾತ್ ಸೋವಿಯೆತ್ ಒಕ್ಕೂಟ, ಪೂರ್ವ ಯುರೋಪ್ ದೇಶಗಳಲ್ಲಿ ಸಮಾಜವಾದದ ಕುಸಿತವನ್ನು ನಾವು ವಿವರಿಸಬೇಕಾಗಿದೆ. ಒಂದು ದೊಡ್ಡ ಶಕ್ತಿ ಹೇಳ ಹೆಸರಿಲ್ಲದಂತಾಗಿದೆ. ಅದರ ಭಾಗವಾಗಿದ್ದ ದೇಶಗಳು ಹರಿದು ಹಂಚಿಹೋಗಿವೆ. ಇಂತಹ ಹಿನ್ನಡೆ ಹಲವು ವರ್ಷಗಳ ತಪ್ಪು ನಡವಳಿಕೆ, ರಾಜಕೀಯ ಆರ್ಥಿಕ, ಸೈದ್ಧಾಂತಿಕ ವಲಯಗಳಲ್ಲಿನ ತಪ್ಪುಗಳನ್ನು ಅರ್ಥಮಾಡಿಕೊಂಡು ಸರಿಪಡಿಸುವಲ್ಲಿನ ಅಸಮರ್ಥತೆಯಲ್ಲದೆ ಬೇರೆ ರೀತಿಯಿಂದ ಸಾಧ್ಯವಾಗುತ್ತಿರಲಿಲ್ಲ. ಈ ದುರಂತವನ್ನು ಅರಿಯಲು ಇನ್ನಷ್ಟು ಆಳವಾದ ಅಧ್ಯಯನ ಅಗತ್ಯ" ಎಂದು ಜ್ಯೋತಿ ಬಸು ಹೇಳಿದರು.

"ನಾವು ಕಮ್ಯುನಿಸ್ಟರು ಮಾರ್ಕ್ಸ್‌ವಾದಕ್ಕೆ ನಮ್ಮ ಬದ್ಧತೆಯನ್ನು ಈಗಲೂ ಒತ್ತಿಹೇಳುತ್ತೇವೆ. ಆದರೆ ನಾವು ಯಶಸ್ಸುಗಳಿಂದ, ಸೋಲುಗಳಿಂದ, ವಿಭಿನ್ನ ದೇಶಗಳ ಅನುಭವಗಳಿಂದ ಪಾಠ ಕಲಿಯಬೇಕು. ಹೀಗೆ ಕಲಿತ ಪಾಠಗಳನ್ನ ಪ್ರತಿಯೊಂದು ದೇಶದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾಗಿ ಅನ್ವಯಿಸುವುದು ಅಗತ್ಯ. ಶೋಷಣೆ ವರ್ಗ ವಿಭಜನೆಯ ಆಧಾರದ ಮೇಲೆ ನಿಂತ ಬಂಡವಾಳಶಾಹಿ ಮಾನವ ನಾಗರಿಕತೆಯ ಚರಮ ವ್ಯವಸ್ಥೆ ಎಂದು ನಾವೆಂದೂ ಒಪ್ಪುವುದಿಲ್ಲ" ಎಂದು ಮುಂದುವರೆದು ಜ್ಯೋತಿಬಸು ಹೇಳಿದರು.

ಸಮಾಜವಾದ ಗೆದ್ದೇಗೆಲ್ಲುತ್ತದೆ

"ಚರಿತ್ರೆ ಮುಂದೆ ಸಾಗಿಯೇ ಸಾಗುತ್ತದೆ ಅಂತಿಮವಾಗಿ ಬಂಡವಾಳಶಾಹಿ ಪತನಗೊಂಡು ವಿಶ್ವಾದ್ಯಾಂತ ಒಂದು ಹೊಸ ಶೋಷಣಾರಹಿತ, ವರ್ಗರಹಿತ, ಮಾನವೀಯ ಸಮಾಜವಾದಿ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತದೆ. ಸಮಾಜವಾದಕ್ಕಾಗಿ ಹೋರಾಟ ದೀರ್ಘಕಾಲದ್ದು, ಕ್ಲಿಷ್ಟವಾದದ್ದು ಹಾಗೂ ಕಷ್ಟಕರವಾದದ್ದು. ಇನ್ನೂ ಬಹು ಕಾಲ ಬಂಡವಾಳಶಾಹಿ ಹಾಗೂ ಸಮಾಜವಾದ ಒಟ್ಟೊಟ್ಟಿಗೇ ಪಕ್ಕಪಕ್ಕದಲ್ಲೇ ಮುಂದುವರಿಯುತ್ತವೆ. ಹಲವು ಏಳು-ಬೀಳುಗಳು, ಹಿಂಜರಿಕೆಯ ಪ್ರವೃತ್ತಿ ಕಾಣಬಹುದು. ಆದರೆ ಅಂತಿಮವಾಗಿ ವಿಶ್ವದಲ್ಲೆಲ್ಲಾ ಸಮಾಜವಾದ ವಿಜಯಶಾಲಿಯಾಗುತ್ತದೆ" ಎಂದು ಜ್ಯೋತಿ ಬಸು ದೃಢದನಿಯಲ್ಲಿ ಹೇಳಿದರು.

ಜ್ಯೋತಿ ಬಸುರವರ ಭಾಷಣದ ನಂತರ ವಿಚಾರಸಂಕೀರಣದ ಸ್ವಾಗತ ಸಮಿತಿಯ ಸಂಯೋಜಕ ಬುದ್ಧದೇವ್ ಭಟ್ಟಾಚಾರ್ಯ ವಿವಿಧ ದೇಶಗಳಿಂದ ಬಂದ ಮುಖಂಡರು ಮುಂದೆ ಬಂದು ಮಾರ್ಕ್ಸ್-ಎಂಗೆಲ್ಸ್ ಪ್ರತಿಮೆಯ ಮುಂದೆ ಪುಷ್ಪಾಂಜಲಿ

ಪುಟ 5 ನೋಡಿ

ಚೀಣಾ ಕಮ್ಯುನಿಸ್ಟ್ ಪಕ್ಷದ ಸಂದೇಶ

ಚೀಣಾ ಕಮ್ಯುನಿಸ್ಟ್ ಪಕ್ಷ (ಸಿಪಿಸಿ) ಕಲ್ಕತ್ತೆಯ ವಿಚಾರ ಸಂಕಿರಣಕ್ಕೆ ಯಶಸ್ಸು ಕೋರಿ ಕಳಿಸಿದ ಶುಭಾಶಯ ಸಂದೇಶದಲ್ಲಿ ಸಿಪಿಸಿ ಸದಾ ಮಾರ್ಕ್ಸ್‌ವಾದದ ಮೂಲಭೂತ ನಿಲುಮೆಗಳನ್ನು ಚೀಣಾದ ವಾಸ್ತವಿಕ ಸನ್ನಿವೇಶದೊಂದಿಗೆ ಬೆಸೆಯಲು ಪ್ರಯತ್ನಿಸುತ್ತಾ ಬಂದಿದೆ ಎನ್ನುತ್ತಾ ಈಗಿನ ಘಟ್ಟದಲ್ಲಿ ಸಿಪಿಸಿ ನೇತೃತ್ವದಲ್ಲಿ ಚೀಣಾದ ಎಲ್ಲಾ ದೇಸೀ ಗುಂಪುಗಳ ಜನರು ಚೀಣೀ ಗುಣಲಕ್ಷಣಗಳುಳ್ಳ ಸಮಾಜವಾದ ಕಟ್ಟುವ ದೊಡ್ಡ ಕೆಲಸದಲ್ಲಿ ಸಕ್ರಿಯವಾಗಿ ಕಾಣಿಕೆ ನೀಡುತ್ತಿದ್ದಾರೆ ಎಂದಿದೆ. ಪಕ್ಷದ ಹಾಗೂ ಜನರ ನಿರಂತರ ಪ್ರಯತ್ನಗಳಿಂದ ಚೀಣಾದಲ್ಲಿ ಸಮಾಜವಾದದ ಧ್ಯೇಯ ಸಾಧನೆ ಖಂಡಿತಾ ಸಾಧ್ಯ ಎಂದು ಸಂದೇಶ ತಿಳಿಸಿದೆ.

ಕೊರಿಯಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಿಮ್ ಉಲ್ ಸುಂಗ್, ರಷ್ಯನ್ ಕಮ್ಯುನಿಸ್ಟ್ ವರ್ಕರ್ಸ್ ಪಾರ್ಟಿ, ಇಟಲಿ ಕಮ್ಯುನಿಸ್ಟ್ ಪುನರ್‌ಸ್ಥಾಪನ ಪಕ್ಷ, ಸ್ಪೇನ್, ಮಾರಿಷಸ್, ಕೊಲಂಬಿಯಾದ ಕಮ್ಯುನಿಸ್ಟ್ ಪಕ್ಷಗಳು, ಇರಾನ್, ಸೂಡನ್ ಪಾರ್ಟಿಗಳು ಸಂದೇಶ ಕಳಿಸಿವೆ. ಅಮೇರಿಕಾ ಸಂಯುಕ್ತ ಸಂಸ್ಥಾನಗಳು, ಸಿರಿಯಾಗಳ ಕಮ್ಯುನಿಸ್ಟ್ ಪಕ್ಷಗಳು, ಸೈಪ್ರಸ್‌ನ ಪಕ್ಷ ಶುಭಾಶಯ ಸಂದೇಶದ ಜತೆಗೆ ವಿಚಾರ ಸಂಕಿರಣಕ್ಕೆ ಪ್ರಬಂಧ ಕಳಿಸಿವೆ.

ಒಳಪುಟಗಳಲ್ಲಿ

ಇರಾಕಿನಲ್ಲಿ ಕಾಂ. ಸೂರಿ ಸಂದರ್ಶನ
ಪುಟ 8

ಬೀಡಿ ಕಾರ್ಮಿಕರ ಸಮ್ಮೇಳನ
ಪುಟ 2

ಇದಾವನ್ಯಾಯ? ಏನನ್ಯಾಯ??
ಬುದ್ಧಿಮಾರಿ ಡಂಕೆಲ್
ಹಾಲಿನ ಕ್ಷೇತ್ರದಲ್ಲಿ ಹಾಲಾಹಲ
ಪುಟ 4

ಇನ್ನೊಂದು ಶ್ವೇತಪತ್ರ
ಪುಟ 3

ಬೀಡಿ ಕಾರ್ಮಿಕರ ತೀವ್ರ ಶೋಷಣೆ

ಕೊಬ್ಬುತ್ತಿರುವ ಕರ್ನಾಟಕದ ಬೀಡಿಮಾಲಿಕರು

ಇತ್ತೀಚೆಗೆ ಮಂಗಳೂರಿನಲ್ಲಿ ಬೀಡಿ ಕಾರ್ಮಿಕರ ಸಮ್ಮೇಳನದ ಬಗ್ಗೆ ಫೆಡರೇಶನ್ ಅಧ್ಯಕ್ಷ ಕಾಂ. ವಿ.ಜೆ.ಕೆ. ನಾಯರ್



ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿರುವ ಪ್ರತಿನಿಧಿಗಳು

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್‌ನ 6ನೇ ಸಮ್ಮೇಳನ ತಮ್ಮ ಮೂಲಭೂತ ಬೇಡಿಕೆಗಳನ್ನು ಸಾಧಿಸಲು ಹಾಗೂ ಅವನ್ನು ಅಸಂಘಟಿತ ಕಾರ್ಮಿಕರ ಬೇಡಿಕೆಗಳೊಂದಿಗೆ ಬೆಸೆಯಲು ಒಂದು ಶಕ್ತಿಶಾಲೀ ಹೋರಾಟ ಆರಂಭಿಸಲು ನಿರ್ಧರಿಸಿದೆ.

ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಮಸ್ಯೆಗಳು ಹಲವಾರು-ಕಡಿಮೆ ಕೂಲಿ, ಸರಿಯಾದ ದಾಖಲೆಗಳಿಲ್ಲದೆ ಕಾನೂನಿನ ಪ್ರಕಾರ ದೊರೆಯುದೇಕಾದ ಸೌಲಭ್ಯಗಳ ವಂಚನೆ, ಸರಿಯಾದ ಸಂಘಟನೆಯ ಅಭಾವ, ಆದ್ದರಿಂದ ಕಾಂಟ್ರಾಕ್ಟರುಗಳ ತೀವ್ರ ಶೋಷಣೆ, ಮುಖ್ಯವಾಗಿ 'ಎವರೇಜ್' (ಸರಾಸರಿ) ಸಂಬಳದಲ್ಲಿ ಕಾನೂನು ಬಾಹಿರ ಕಡಿತ ಪ್ರಶ್ನೆ ಇತ್ಯಾದಿ.

ಬೀಡಿ ಮಾಲಕರೇ ರಾಜ್ಯದಲ್ಲಿ 5 ಲಕ್ಷಕ್ಕೂ ಹೆಚ್ಚು ಬೀಡಿ ಕಾರ್ಮಿಕರಿದ್ದಾರೆಂದು ಒಪ್ಪಿಕೊಳ್ಳುತ್ತಾರೆ. ಆದರೆ ಸರ್ಕಾರಿ ದಾಖಲೆಗಳ ಪ್ರಕಾರ ಮೂರೂವರೆಲಕ್ಷ ಮಾತ್ರ. ಇವರಲ್ಲಿ ಎಲ್ಲರಿಗೂ ಪಾಸ್‌ಬುಕ್ ಪರಿಚಯ ಕಾರ್ಡ್‌ಗಳನ್ನು ಕೊಟ್ಟಿಲ್ಲ. ಬೀಡಿ ಕಾರ್ಮಿಕರಲ್ಲಿ ಮಹಿಳೆಯರ ಸಂಖ್ಯೆ ಗಮನಾರ್ಹ ಪ್ರಮಾಣದಲ್ಲಿದೆ. ಆದರೆ ದಾಖಲೆಗಳು ಹೇಳುವ ಸುದ್ದಿಯೇ ಬೇರೆ. ಏಕೆಂದರೆ ಮಾಲಕರು ಹೆರಿಗೆ ಸೌಲಭ್ಯ ನೀಡಬೇಕಾದ ಹೊಣೆಗಾರಿಕೆಯಿಂದ ಜಾರಿಕೊಳ್ಳಲು ಬಯಸುತ್ತಾರೆ. ಹಲವಾರು ಕಡೆಗಳಲ್ಲಿ ಪುರುಷ ಸದಸ್ಯನ ಹೆಸರು ಪಟ್ಟಿಯಲ್ಲಿರುತ್ತದೆ ಆತನಿಗೆ ನೀಡಿದ ಪಾಸ್‌ಬುಕ್ ಪಾಸ್‌ಬುಕ್‌ನಲ್ಲಿ ಮಹಿಳೆಯರು, ಮಕ್ಕಳು ಕೆಲಸ ಮಾಡುತ್ತಾರೆ. ಹೀಗೆ ನಿಜವಾದ ಬೀಡಿ ಕಾರ್ಮಿಕರ ಸಂಖ್ಯೆ ಮಾಲಕರು ಒಪ್ಪಿಕೊಂಡುದಕ್ಕಿಂತಲೂ ಜಾಸ್ತಿಯಿರಬಹುದು.

ಕರ್ನಾಟಕ ಸರಕಾರ ನೋಟಿಫೈ ಮಾಡಿದ ಕನಿಷ್ಟಕೂಲಿ 1000 ಬೀಡಿ ಹೊಸೆದಕ್ಕೆ ರೂ. 19.65 (1990 ರ ಮಟ್ಟದಲ್ಲಿ ಅಂದರೆ ಜೀವನವೆಚ್ಚ ಸೂಚ್ಯಂಕ 987 ಪಾಯಿಂಟ್ ಇದ್ದಾಗ ಇದನ್ನು 40 ರೂ.ಗೆ ಹೆಚ್ಚಿಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ. ಈಗಿನ ತುಟ್ಟಿಭತ್ಯೆ 1993-94ರ ಸರಾಸರಿಯಾದ 1309 ಪಾಯಿಂಟ್ ಮಟ್ಟದಲ್ಲಿ ದಿನಕ್ಕೆ ರೂ. 3.66 (967 ಪಾಯಿಂಟಿಗಿಂತ ಪ್ರತಿ ಹೆಚ್ಚು ಪಾಯಿಂಟ್‌ಗೆ 2 ಪೈಸೆ ಲೆಕ್ಕದಲ್ಲಿ) ಪ್ರತಿ ಪಾಯಿಂಟಿಗೆ 5 ಪೈಸೆ ತುಟ್ಟಿಭತ್ಯೆ ನೀಡಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ. ಇದು 1309 ಪಾಯಿಂಟ್ ಮಟ್ಟದಲ್ಲಿ ರೂ. 16.65 ಆಗುತ್ತದೆ ಅಂದರೆ ಈಗಿನ ಮಟ್ಟದಲ್ಲಿ ಒಟ್ಟು ಕನಿಷ್ಟ ಕೂಲಿ ಸಾವಿರ ಬೀಡಿಗೆ 40 + 16.65 ಅಂದರೆ ರೂ. 56.65 ಆಗುತ್ತದೆ. ಈಗಾಗಲೇ ಕೇರಳಲ್ಲಿ ಬೀಡಿ ಕಾರ್ಮಿಕರು 40 ರೂ ಪಡೆಯುತ್ತಿದ್ದಾರೆ ಕರ್ನಾಟಕದಲ್ಲಿ 14.93 ರಿಂದ 26.31 ರೂ ಮಾತ್ರ.

ಅಂದರೆ ಕೇವಲ ಕೂಲಿಯಲ್ಲೇ ಕರ್ನಾಟಕ್ಕೂ ಕೇರಳಕ್ಕೂ 14 ರೂ ವ್ಯತ್ಯಾಸ. ಇತರ ಸೌಲಭ್ಯಗಳನ್ನು ತಗೊಂಡರೆ ಇದು ಇನ್ನೂ ಹೆಚ್ಚು. ಪಿ.ಎಫ್. ಸಂಬಳ ಸಹಿತ, ಬೋನಸ್ ಇತ್ಯಾದಿಗಳಿಗೆ ಕರ್ನಾಟಕದಲ್ಲಿ ಹೆಚ್ಚಿನ ಖರ್ಚು ಆಗುತ್ತಿದೆ ಕೇರಳದಲ್ಲಿ ಇದು ಶೇ. 30 ಏಕೆಂದರೆ ಅವರು ಶೇ. 15 ರಷ್ಟು ಬೋನಸ್ ಕೊಡುತ್ತಾರೆ. ಒಟ್ಟಾರೆಯಾಗಿ ಕರ್ನಾಟಕದ ಬೀಡಿ ಕಾರ್ಮಿಕರು ಕೇರಳದ ಕಾರ್ಮಿಕರಿಗಿಂತ 1000 ಬೀಡಿಗೆ 20 ರೂ ಕಡಿಮೆ ಪಡೆಯುತ್ತಾರೆ.

ಕರ್ನಾಟಕದಲ್ಲಿ ಬೀಡಿ ಕಾರ್ಮಿಕ ಕಲ್ಯಾಣ ನಿಧಿಗಾಗಿ ವಸೂಲಿ ಮಾಡುವ ಕರ ಸಾವಿರಕ್ಕೆ 30 ಪೈಸೆ ರೀತಿಯಲ್ಲಿ ವಸೂಲು ಮಾಡುತ್ತಿದ್ದು ಕಳೆದ ಕೆಲವು ವರ್ಷಗಳಲ್ಲಿ ಇದು 1-8 ಕೋಟಿರೂಗಳಾಗಿವೆ ಅಂದರೆ ಪ್ರತಿವರ್ಷ 6 ಸಾವಿರ ಕೋಟಿ ಬೀಡಿಗಳ ಉತ್ಪಾದನೆಯಾಗುತ್ತದೆ. ಅಂದರೆ ಕಲ್ಯಾಣ ಆಯುಕ್ತರು (ವೆಲ್‌ಫೇರ್ ಕಮಿಶನರ್) ಬಳಿ ದಾಖಲಾದ ಪ್ರಕಾರ ಒಟ್ಟು ಆದಾಯ 480 ಕೋಟಿ ರೂ ಕರ್ನಾಟಕ-ಕೇರಳಗಳಲ್ಲಿ ಕನಿಷ್ಟ ಕೂಲಿಯ ವ್ಯತ್ಯಾಸವೊಂದರಿಂದಲೇ ಕರ್ನಾಟಕದ ಮಾಲಕರು 120 ಕೋಟಿ ರೂ ಉಳಿಸುತ್ತಾರೆ. ಆದ್ದರಿಂದ ರಾಜ್ಯ ಸಮ್ಮೇಳನದ ಬೇಡಿಕೆ ಅತ್ಯಂತ ನ್ಯಾಯಯುತವಾದದ್ದು. ನಮ್ಮ ಸಂಘಟನೆ ಹಾಗೂ ಹೋರಾಟದ ಬಲದಿಂದ ಈ ಪ್ರಮುಖ ಬೇಡಿಕೆಯನ್ನು ಸಾಧಿಸಬೇಕಾಗಿದೆ.


ಕಂಟ್ರಾಕ್ಟರುಗಳು ಕೀಳು ಮಟ್ಟದ ಸಾಮಗ್ರಿಗಳನ್ನು ಕೊಟ್ಟು ಬೀಡಿ ಕಾರ್ಮಿಕರಿಂದ 'ಎವರೇಜ್' (ಸರಾಸರಿ) ಉತ್ಪಾದನೆ ಕೇಳುವ ವ್ಯವಸ್ಥೆ ಕಾರ್ಮಿಕರನ್ನು ಬಹಳಷ್ಟು ದಮನಕ್ಕೀಡುಮಾಡಿದೆ. ಒಂದು ನಿರ್ದಿಷ್ಟ 'ಸರಾಸರಿ ಬೀಡಿ ಉತ್ಪಾದನೆ ಕೊಡಬೇಕೆಂದು ಕಾಂಟ್ರಾಕ್ಟರುಗಳು ನಿಗದಿಮಾಡುತ್ತಾರೆ. ಒಬ್ಬ ಕಾರ್ಮಿಕ ಅಷ್ಟು ತಯಾರಿಸದಿದ್ದರೆ ಬಾಕಿ ಬೀಡಿಗಳ ಖರ್ಚನ್ನು ಆತನೇ ಭರಿಸಬೇಕು. ಈ ವ್ಯವಸ್ಥೆಯಿಂದಾಗಿ ಒಂದು ವಾರದ ಬೆವರು ಸುರಿಸಿ ದುಡಿದ ನಂತರ ಕಾರ್ಮಿಕನೇ ತನ್ನ ಜೇಬಿನಿಂದ ಹಣ ಕೊಡಬೇಕಾದ ಪರಿಸ್ಥಿತಿಗಳು ಬಂದಿವೆ. ಇದುವರೆಗೂ ಕಾಂಟ್ರಾಕ್ಟ್ ವ್ಯವಸ್ಥೆ ರದ್ದುಮಾಡಬೇಕೆಂಬ ಬೇಡಿಕೆಯನ್ನು ಸರಕಾರ ಒಪ್ಪಿಕೊಂಡಿಲ್ಲ. ಬೀಡಿ ತಯಾರಿಕೆಯಲ್ಲಿ ಕಾಂಟ್ರಾಕ್ಟ್ ವ್ಯವಸ್ಥೆಯನ್ನು ರದ್ದು ಮಾಡುವ ಸಾಧ್ಯತೆಯ ಬಗ್ಗೆ ಪರಿಶೀಲಿಸಬೇಕೆಂದು ಸುಪ್ರೀಂ ಕೋರ್ಟ್ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿತ್ತು. ಕಾರ್ಮಿಕ ಸಂಘಗಳು ಬಲಶಾಲಿಯಾದರೆ ಸೇವಾ ಸಹಕಾರಿಗಳ ಸಂಘಟನೆ ಕಂಟ್ರಾಕ್ಟರ್‌ಗಳನ್ನು ನೇರವಾಗಿ ಪಡೆದು ಮಧ್ಯವರ್ತಿಗಳನ್ನು ಇಲ್ಲದಂತೆ ಮಾಡುವುದು ಸಾಧ್ಯ.'

ತಮ್ಮ ಹೋರಾಟಗಳನ್ನು ಅಖಿಲ ಭಾರತ ಮಟ್ಟದಲ್ಲಿ ಇತರ ಅಸಂಘಟಿತ ಕಾರ್ಮಿಕರ ಹೋರಾಟಗಳ ಜತೆಗೂಡಿಸಬೇಕೆಂದೂ ಸಮ್ಮೇಳನ ನಿರ್ಧರಿಸಿತು. ಸಿ.ಐ.ಟಿ.ಯು ಜುಲೈ 14 ರಂದು ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿದೆ. ಅಗತ್ಯ ಆಧಾರಿತ ಕನಿಷ್ಟ ಮಾಸಿಕ 1050 ರೂ ಇರಬೇಕು (ಜೀವನ ವೆಚ್ಚ ಸೂಚ್ಯಂಕ 800 ಪಾಯಿಂಟ್‌ಗಳ ಮಟ್ಟದಲ್ಲಿ) ಹಾಗೂ 800 ಪಾಯಿಂಟ್‌ಗಳ ನಂತರ ಪ್ರತಿ ಪಾಯಿಂಟಿಗೆ 2ರೂ.ನಂತೆ ತುಟ್ಟಿಭತ್ಯೆ ಇರಬೇಕು ಎಂಬುದು ಈ ಮುಷ್ಕರದ ಬೇಡಿಕೆ. ಈಗಿನ ಬೆಲೆ ಸೂಚ್ಯಂಕ ಮಟ್ಟದಲ್ಲಿ ಇದು 1800 ರೂ ಆಗುತ್ತದೆ. ಕರ್ನಾಟಕದಲ್ಲಿ ನಾವು 908 ಪಾಯಿಂಟ್ ಮಟ್ಟದಲ್ಲಿ 1,250 ರೂ ಕನಿಷ್ಟ ಕೂಲಿ ಒತ್ತಾಯಿಸುತ್ತಿದ್ದೇವೆ. ಇದು ಕೂಡಾ ಸದ್ಯದ 1,309 ಪಾಯಿಂಟ್ ಮಟ್ಟದಲ್ಲಿ 1,802 ರೂ ಆಗುತ್ತದೆ. ಅಂದರೆ ದಿನಗೂಲಿ ಸರಾಸರಿ 26 ದಿನಗಳಿಗಾದರೆ 69 ರೂ ಆಗುತ್ತದೆ. 30 ದಿನಗಳಾದರೆ 60 ರೂ ಆಗುತ್ತದೆ. ಬೀಡಿ ಉದ್ದಿಮೆಯಲ್ಲಿ ಕೇಳಿರುವ ಒಟ್ಟು ಕೂಲಿ ಇದಕ್ಕಿಂತ ಕಮ್ಮಿಯಾಗುವುದರಿಂದ ನಾವು ವಾರದ ಏಳನೇ ದಿನಕ್ಕೂ ಕೂಲಿ ಕೇಳಿದ್ದೇವೆ. ಕನಿಷ್ಟ ಗ್ಯಾರಂಟಿ ದಿನಗೂಲಿ 25 ಇರಬೇಕೆಂದು ರಾಜ್ಯದ ಬೀಡಿ ಕಾರ್ಮಿಕರು ಒತ್ತಾಯಿಸುತ್ತಿದ್ದಾರೆ.

ಅಸಂಘಟಿತ ಕಾರ್ಮಿಕರ ಅಖಿಲ ಭಾರತ ಮುಷ್ಕರ ಇತರ ಬೇಡಿಕೆಗಳನ್ನು ಮುಂದಿಟ್ಟಿವೆ. ಕಲ್ಯಾಣ ಕ್ರಮಗಳ ಜಾರಿ ಮಹಿಳೆಯರ ಕೆಲಸ ರಕ್ಷಣೆ, ಎಲ್ಲಾ ಅಸಂಘಟಿತರಿಗೆ ಕೆಲಸ ಸಿಗುವಂತೆ ವಿಶೇಷ ಅವಕಾಶ, ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕು, ಮೂರು ತಿಂಗಳೊಳಗೆ ಎಲ್ಲಾ ಲೇಬರ್ ಕೇಸುಗಳ ಇತ್ಯರ್ಥ-ಇಲ್ಲದಿದ್ದರೆ ಮಾರುಕಟ್ಟೆಗಳ ನಂತರ ಪೂರ್ಣ ಸಂಬಳ ಎಲ್ಲಾ ಕಾರ್ಮಿಕರಿಗೆ ಇ.ಎಸ್.ಐ., ಪಿ.ಎಫ್. ಬೋನಸ್, ಗ್ರಾಚ್ಯುಟಿ ಕುರಿತಂತೆ ಕಾನೂನಿನಲ್ಲಿ ಅಳವಡಿಕೆ ಇತ್ಯಾದಿ.

ರಾಜ್ಯದಲ್ಲಿ ಅಸಂಘಟಿತರ ಹೋರಾಟವನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಲು ಸಿ.ಐ.ಟಿ.ಯು ನಿರ್ಧರಿಸಿದೆ. ಜುಲೈ 14 ರ ಮುಷ್ಕರವನ್ನು ಹಾಗೂ ಜೂನ್ ತಿಂಗಳ ಸಹಿ ಸಂಗ್ರಹ ಚಳುವಳಿಯನ್ನು ಬೃಹತ್ ರೂಪದಲ್ಲಿ ನಡೆಸಲು ತನ್ನ ಸದಸ್ಯರಿಗೆ ನಿರ್ದೇಶನ ನೀಡಿದೆ.

ರಾಜ್ಯದ ಬೀಡಿ-ಕಾರ್ಮಿಕರು ತಮ್ಮ ಚಟುವಟಿಕೆಗಳನ್ನು ಹೆಚ್ಚಿಸಿ ತಮ್ಮ ಶೋಚನೀಯ ಪರಿಸ್ಥಿತಿಯನ್ನು ಬದಲಿಸಲು ಸವ... ಪ್ರಯತ್ನ ನಡೆಸಬೇಕಾಗಿದೆ. ಇಲ್ಲವಾದ... ಮಾನವೀಯ ಬದುಕು ಅವರಿಗೆ ಸಿಗಲಾ... ರದು. ಇದಕ್ಕಾಗಿ ಶ್ರಮಿಸದಿದ್ದರೆ ಸಿ.ಐ.ಟಿ.ಯು ಕೂಡಾ ಕಾರ್ಮಿಕರನ್ನು ಸಂಘಟಿಸಲು ಬದ್ಧವಾದ ಒಂದು ಸಮರಶೀಲ ಸಂಘಟ... ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ.



ಬಿಜೆಪಿ ಅವರಿಗೆ ಅನ್ನ ನೀಡುತ್ತದೆಯೇ?

ಬೀಡಿ ಕಾರ್ಮಿಕರ ಬಹಿರಂಗ ಸಭೆಯಲ್ಲಿ ಕಾಂ. ಸೂರಿ

ಇಂಕ್ವಿಲಾಬ್ ಜಿಂದಾಬಾದ್, ಸೆಪ್ಟೆಂಬರ್ 9ರ ಭಾರತ್ ಬಂದ್ ಯಶಸ್ವಿಗೊಳಿಸೋಣ.

ಬೀಡಿ ಕಾರ್ಮಿಕರಿಂದ ಕಿಕ್ಕಿರಿದಿದ್ದ ಬೃಹತ್ ಸಾರ್ವಜನಿಕ ಸಭೆ ಅತ್ಯಂತ ಉತ್ಸಾಹದಿಂದ ಹೊಮ್ಮಿಸಿದ ಘೋಷಣೆ ಇದು. ಬೀಡಿ ಕಾರ್ಮಿಕರ ಸಮ್ಮೇಳದ ಉದ್ಘಾಟನಾ ಭಾಷಣದಲ್ಲಿಯೇ ಕಾಂ. ವಿಮಲಾ ರಣದಿವೆ ಈ ಸಮ್ಮೇಳನದಿಂದ ಸೆಪ್ಟೆಂಬರ್ 9 ರ ಬಂದ್ ಯಶಸ್ವಿಗೊಳಿಸುವ ಘೋಷಣೆ ಹೊರಹೊಮ್ಮಬೇಕು ಎಂದು ಆಶಿಸಿದ್ದರು. ಅಂತಯೇ ಚಿಮ್ಮಿ ಬಂತು ಈ ಘೋಷಣೆ.

ಜೆಪ್ಪು ಪ್ರದೇಶದ ಬಹುತೇಕ ಬೀದಿಗಳಿಗೆ ಕೆಂಪುಬಣ್ಣ ಸಿಂಗಾರದ ಬೀಡಿ ಕಾರ್ಮಿಕರ ಉತ್ಸಾಹವನ್ನು ಸಾರಿ ಹೇಳುತ್ತಿತ್ತು. ಜೆಪ್ಪು ಮಾರುಕಟ್ಟೆಯ ವೇದಿಕೆಯಂತೂ ಕೆಂಪಿನ ಓಕಳಿಯಲ್ಲಿ ಆಗತಾನೇ ಎದ್ದುಬಂದಿತ್ತು. ಎಲ್ಲೆಲ್ಲೂ ಕೆಂಬಾವುಟ, ಕೆಂಪು ತೋರಣ.

"ದುಡಿಯುವ ಮಹಿಳೆಯರನ್ನು ಮನೆಗೆ ಹಿಂದಿರುಗಿ ಎಂದು ಬಿಜೆಪಿ ಬೊಬ್ಬೆ ಹಾಕುತ್ತಿದೆ. ಬೀಡಿ ಕಟ್ಟುವ ಮಹಿಳೆಯರು ಬೀಡಿಕಟ್ಟುವುದನ್ನು ನಿಲ್ಲಿಸಿದರೆ ಅವರಿಗೆ ಅನ್ನ ಬಿಜೆಪಿ ನೀಡುತ್ತದೆಯೇ?" ಕಾಂ. ಸೂರಿ ಬಹಿರಂಗ ಸಭೆಯಲ್ಲಿ ಗುಡಿಗಿದರು.

ಕೋಮುವಾದಿಗಳ ಕೈಯಲ್ಲಿ ಸಿಕ್ಕಿನರಳುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಸವಾಲಿನ ಘೋಷಣೆ ಅಪರೂಪವಾಗಿತ್ತು. ಪ್ರಧಾನಿ ಪಿ.ವಿ. ನರಸಿಂಹರಾವ್ ಅವರು ಮಂಗಳೂರಿನ ಬಹಿರಂಗಸಭೆಯಲ್ಲಿ ಬಿಜೆಪಿ ಸಂಘಪರಿವಾರದ ಹೆಸರನ್ನು ಅಪ್ಪಿತಪ್ಪಿಯೂ ಹೇಳದೆ ಕೋಮುವಾದದ ಬಗ್ಗೆ ಮಾತಾಡಲೂ ಹಿಂದು ಮುಂದು ನೋಡಿದಂತಹ ಸಂದರ್ಭದಲ್ಲಿ ಇಡೀ ಬಹಿರಂಗ ಸಭೆ ಬಿಜೆಪಿ ಹಾಗೂ ಕಾಂಗ್ರೆಸ ದ್ವಿಮುಖ ನೀತಿಯನ್ನು ಬಯಲಿಗೆಳೆಯಿತು.

ಇಂದು ಹಳ್ಳಿ-ಹಳ್ಳಿಗಳ ಹೊಲದಲ್ಲಿ ಮಹಿಳೆ ಬೆವರು ಸುರಿಸಿ ದುಡಿಯುತ್ತಿದ್ದಾಳೆ. ಮಹಿಳೆಯರ ಈ ಶ್ರಮವೇ ಗ್ರಾಮೀಣ ಬದುಕಿನ ಬೆನ್ನೆಲುಬು. ಹೀಗಿರುವಾಗ ಕಲ್ಯಾಣಸಿಂಗ್ ನೇತೃತ್ವದ ಸರ್ಕಾರ ಬದಲಾಯಿಸಿರುವ ಪಠ್ಯಪುಸ್ತಕಗಳಲ್ಲಿ ಮಹಿಳೆಯರನ್ನು ಮನೆಗೆ ಹಿಂದಿರುಗುವಂತೆ ತಾಕೀತು ಮಾಡಲಾಗುತ್ತಿದೆ ಎಂದು ನೇರವಾಗಿ ಚುಚ್ಚಿದರು.

ಎರಡು ಕುದುರೆ ಸವಾರಿ

ಪಿ.ವಿ. ನರಸಿಂಹರಾಯರ ಸರ್ಕಾರ ಎರಡು ಕುದುರೆಯ ಮೇಲೆ ಸವಾರಿ ನಡೆಸುತ್ತಿದೆ. ನರಸಿಂಹರಾಯರಿಗೆ ಮಂದಿರವೂ ಬೇಕು. ಮಸೀದಿಯೂ ಬೇಕು. ಚುನಾವಣೆಯತ್ತಲೇ ಕಣ್ಣಿಟ್ಟಿರುವ ಸರ್ಕಾರ ಕೋಮುವಾದದ ವಿರುದ್ಧ ದೃಢ ಕ್ರಮಕೈಗೊಳ್ಳಲು ಹೇಗೆ ಸಾಧ್ಯ ಎಂದರು. ಇಂತಹ ಪರಿಸ್ಥಿತಿಯಲ್ಲಿ ದುಡಿಯುವ ವರ್ಗ ಒಂದಾದರೆ ಮಾತ್ರ ಜಾತ್ಯಾತೀತೆಯ ರಕ್ಷಣೆ ಸಾಧ್ಯ ಎಂದರು.

ಕಾಂ. ವಿ.ಜೆ.ಕೆ. ನಾಯರ್ ಬೀಡಿ ಕಾರ್ಮಿಕರ ಗಣಿತವನ್ನು ಬಿಡಿಸಿಟ್ಟರು. ಬಟ್ಟೆ ವಸತಿಯನ್ನು ಹೊರತುಪಡಿಸಿ ಕೇವಲ ಊಟಕ್ಕಾಗಿಯೇ ದಿನಕ್ಕೆ ಒಂದು ಕುಟುಂಬಕ್ಕೆ 57 ರೂ ಅಗತ್ಯವಿರುವಾಗ ಕೇವಲ 23 ರೂ ಕೂಲಿಯಲ್ಲಿ ಬೀಡಿ ಕಾರ್ಮಿಕರು ಹೇಗೆ ಬದುಕಲು ಸಾಧ್ಯ ಎಂದು ವಿಷಾದಿಸಿದರು.

ಸಿಡಿಲು ಚಿಮ್ಮಲಿ

ಇನ್ನು ಮಳೆಗಾಲದ ದಿನ ಆಕಾಶದಲ್ಲಿ ಹರಡುತ್ತಿರುವ ಮೋಡಗಳ ಮಧ್ಯೆಯಿಂದ ಸಿಡಿಲು ಚಿಮ್ಮುವ ಕಾಲ. ಈ ಸಂದರ್ಭದಲ್ಲಿ ಇಲ್ಲಿ ಈ ಬೀಡಿ ಕಾರ್ಮಿಕರ ನಡುವಿನಿಂದ ಒಂದು ಸಿಡಿಲು, ಬರಸಿಡಿಲು ಹೊಮ್ಮ ಬೇಕು. ಇದಕ್ಕೆ ಆಕಾಶದಲ್ಲಿ ಕುಳಿತು ತೇಲುತ್ತಿರುವವರನ್ನು ಭಸ್ಮ ಮಾಡುವ ಶಕ್ತಿ ಇರಬೇಕು. ಈ ಸಿಡಿಲಿನ ಬೆನ್ನಲ್ಲೆ ಹೊಸ ಹೋರಾಟ ಹುಟ್ಟಬೇಕು ಎಂದು ಕಾಂ. ವಿ.ಜೆ.ಕೆ. ಕಾವ್ಯಮಯ ಸಾಲುಗಳನ್ನು ಬಿಚ್ಚಿದರು.

ಯಾವ ಕೆಂಬಾವುಟ?

ಸಾರ್ವಜನಿಕ ಸಭೆ ನಡೆಯುವ ಜಾಗದ ತುಂಬಾ ಕೆಂಬಾವುಟಗಳು ಪಟಪಟನೆ ರೆಕ್ಕೆ ಬಡಿಯುತ್ತಿತ್ತು. ಕಾಂ. ವಿಮಲಾ ರಣದಿವೆ ಭಾಷಣ ಮಾಡುತ್ತಾ ಕೆಂಬಾವುಟವನ್ನು ಕಂಡು ಸಂತಸಗೊಂಡು ಇಲ್ಲಿ ಹಾರುತ್ತಿರುವುದು ಯಾವ ಕೆಂಬಾವುಟ, ಇದು ಕಯ್ಯೂರು ರೈತ ವೀರರ ಕೆಂಬಾವುಟ, ತಮಿಳುನಾಡಿನಲ್ಲಿ ಜೀವಂತವಾಗಿ ದಹಿಸಲ್ಪಟ್ಟ ಕೃಷಿ ಕೂಲಿಕಾರ್ಮಿಕರ ಕೆಂಬಾವುಟ. ಪಂಜಾಬ್‌ನಲ್ಲಿ ಭಯೋತ್ಪಾದಕರ ಗುಂಡಿಗೆ ಬಲಿಯಾದ ಸಂಗಾತಿಗಳ ಬಾವುಟ.

• ಇಷ್ಟೆಲ್ಲಾ ಆದರೂ ನಾವು ಈ ಕೆಂಬಾವುಟವನ್ನು ಕೈ ಬಿಡಲಿಲ್ಲ. ಕೆಂಬಾವುಟವನ್ನು ಬಲಿಷ್ಠಗೊಳಿಸಿದ್ದೇವೆ. ಈ ಕೆಂಬಾವುಟ ಬಲಿಷ್ಠವಾದಾಗಲೇ ತ್ರಿಪುರಾದಲ್ಲಿ ನಾವು ಗೆದ್ದಿದ್ದೇವೆ. ಕೇರಳದಲ್ಲಿ ಗೆಲ್ಲುತ್ತೇವೆ, ಪಂಜಾಬ್‌ನಲ್ಲಿ ಮುನ್ನಡೆಯುತ್ತೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಸಿ.ಐ.ಟಿ.ಯು ರಾಷ್ಟ್ರ ಕಾರ್ಯದರ್ಶಿ ಕಾಂ. ವಿಮಲಾ ರಣದಿವೆ ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರದ ಪತನವನ್ನು ಕಂಡು ಬಂಡವಾಳಶಾಹಿಗಳು ಸಂತಸ ವ್ಯಕ್ತಪಡಿಸುತ್ತಿರುವಾಗಲೇ ತ್ರಿಪುರದಲ್ಲಿ ಎಡರಂಗ ಸರ್ಕಾರ ಆಡಳಿತಕ್ಕೆ ಬಂದಿದ...

ಯಾವುದು ಸದ್ಭಾವನೆ?

ಆ ದಿನ ಎರಡು ಮೆರವಣಿಗೆ. ಒಂದು ಜಿಲ್ಲೆಯ ಮೂಲೆ ಮೂಲೆಗಳಿಂದ ಕೆ.ಎಸ್.ಆರ್.ಟಿ. ಸಿ. ಬಸ್ಸುಗಳಲ್ಲಿ ಹೊತ್ತು ತಂದ ಬಾಡಿಗೆ ಜನರ ಕಾಂಗ್ರೆ ಸದ್ಭಾವನಾ ಮೆರವಣಿಗೆ. ಮತ್ತೊಂದು ಮನೆಯೊಳಗೆ ದುಡಿದು ಸುಸ್ತಾಗಿ ತಮ್ಮ ಹಕ್ಕುಗಳನ್ನು ಮುಂದಿಟ್ಟು ಕೋಮುವಾದದ ವಿರುದ್ಧ ಘೋಷಣೆ ಮೊಳಗಿಸುತ್ತಿದ್ದ ಕೆಂಬಾವುಟ ಹಿಡಿದ ಬೀಡಿ ಕಾರ್ಮಿಕರ ಮೆರವಣಿಗೆ.

ಈ ಮೆರವಣಿಗೆಯ ವ್ಯತ್ಯಾಸವನ್ನು ಕಾಂ. ಸೂರಿ ಬಣ್ಣಿಸಿದ್ದು ಹೀಗೆ- ಮೊಯ್ಲಿ ಸರ್ಕಾರ ಸದ್ಭಾವನಾ ಮೆರವಣಿಗೆ ನಡೆಸುತ್ತಿದೆ. ಕಂಟ್ರಾಕ್ಟರುಗಳು, ಮಾಲೀಕರುಗಳಿಂದ ಸದ್ಭಾವನೆ ಬರಲು ಸಾಧ್ಯವಿಲ್ಲ. ದುಡಿವ ಜನರಿಗೆ ಸರಿಯಾದ ಕೂಲಿ ಸಿಗದಿರುವಾಗ ಇನ್ನೆಲ್ಲಿಯ ಸದ್ಭಾವನೆ. ಅಲ್ಲಿ ಮೆರವಣಿಗೆಯ ಮೂರ್ತಿಯಾಗಿರುವ ಮೊಯ್ಲಿ ಬೀಡಿ ಕಾರ್ಮಿಕರಿಗೆ ಕನಿಷ್ಠ 40 ರೂ ಕೂಲಿ ಕೊಡುತ್ತೇನೆ ಎಂಬ ಭರವಸೆ ನೀಡಲಿ. ಆಗ ಅದು ಸದ್ಭಾವನೆ ಎಂದರು.

ಕಮ್ಯುನಿಸ್ಟರು-ಸದಾ ಕೆಂಬಾವುಟವನ್ನು ಮುನ್ನ... ಸುತ್ತಾರೆ ಎಂಬುದು ಮತ್ತೆ ಮತ್ತೆ ಸಾಬೀತಾಗಿ... ಎಂದರು.

ಬೀಡಿ ಕಾರ್ಮಿಕರ ಒಕ್ಕೂಟಕ್ಕೆ ನೂತನವಾಗಿ ಆಯ್ಕೆಯಾದ ಪ್ರಧಾನ ಕಾರ್ಯದರ್ಶಿ ಕೆ. ಶಂಕರ್ ಸ್ವಾಗತಿಸಿದರು. ಕಾರ್ಯದರ್ಶಿ ಬಿ. ಬಾಲಕೃಷ್ಣಶೆಟ್ಟಿ ವಂದಿಸಿದರು.

ಆರಂಭದಲ್ಲಿ ಬೋಳಾರದ ಮುಖ್ಯ ಬೀ... ಗಳಲ್ಲಿ ಮೆರವಣಿಗೆ ಏರ್ಪಡಿಸಲಾಗಿತ್ತು. ಕೆಂಪು ಬಿಳಿ ಸಮವಸ್ತ್ರ ತೊಟ್ಟಿದ ಬೀಡಿ ಮಹಿಳೆಯರು ಕೆಂಬಾವುಟವನ್ನು ಮುನ್ನಡೆಸಿದರು.

ಅಯೋಧ್ಯಾ ಕಾಂಡ



ಈಗ ಮತ್ತೊಂದು ಶ್ವೇತಪತ್ರ

ಡಿ. 6ರ ಬಿಜೆಪಿ ಗೂಂಡಾಗಿರಿಯನ್ನು ಸಮರ್ಥಿಸಿಕೊಳಲ್ಲು ಶ್ವೇತಪತ್ರ

ಪಿ.ಡಿ. ಸಂಪಾದಕೀಯ

ಭಾರತ ಸರಕಾರದ ಅಯೋಧ್ಯೆ ಕುರಿತಾದ 'ಶ್ವೇತಪತ್ರ'ಕ್ಕೆ ಉತ್ತರವಾಗಿ ಬಿಜೆಪಿಯ ಶ್ವೇತಪತ್ರ ಹೊರಬಂದಿದೆ. ಶ್ವೇತವೋ, ಶ್ಯಾಮವೋ, ಬಿಳಿಯೋ ಕಪ್ಪೋ, ಅದಂತೂ ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ನಡೆಸಿದ ಗೂಂಡಾಗಿರಿಯನ್ನು ಸಮರ್ಥಿಸಿಕೊಳ್ಳುವ ನೆವಗಳ ಕಂತೆ ಎಂಬುದಂತೂ ಸ್ಪಷ್ಟ. ಸರಳ ಮಾತಿನಲ್ಲಿ ಹೇಳದೇ ಕಾದರೆ ಶೋಚನೀಯ ಪತ್ರ ಇದು. ಅಯೋಧ್ಯೆ ಮತ್ತು ಇತರೆಡೆ ಅವರು ಗೈದ ಕೃತ್ಯಗಳಿಗೆ ಅವಕಾಶ ಒದಗಿಸಿದವರು ನರಸಿಂಹರಾಯರೇ. ಅದೇ ನರಸಿಹರಾವ್ ಬಗ್ಗೆ ಅದೇ ಬಿಜೆಪಿ ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ನಡೆಸಲಿಲ್ಲ ಎಂದು ಈ "ಶ್ವೇತಪತ್ರ"ದಲ್ಲಿ ತಾನು ಸಭ್ಯನಂತೆ ಛೇಡಿಸಿರುವುದು ನಿಜವಾಗಿಯೂ ತಮಾಷೆಯ ಸಂಗತಿ. ನರಸಿಂಹರಾಯರ ಮೇಲೆ ಬಿಜೆಪಿಯ ಮುಖ್ಯ ಆಪಾದನೆಯೆಂದರೆ ಅವರು ವಿ.ಹೆಚ್.ಪಿ.ಯ ಸಾಧು-ಸಂತರೊಂದಿಗೆ, ಆರ್.ಎಸ್[illegible]ಸ್‌ನ ಉಚ್ಚ ಮುಖಂಡರೊಂದಿಗೆ ನಿಷ್ಫಲ ಮಾತುಕತೆಗಳಲ್ಲಿ ಮೂರುತಿಂಗಳು ವ್ಯರ್ಥಗೊಳಿಸಿದರು ಎಂದು. ಜಾತ್ಯಾತೀತ ವಿರೋಧ ಪಕ್ಷಗಳದ್ದು ಇದೇ ಆಪಾದನೆ. ಕಳೆದ ವರ್ಷ ಜುಲೈ ತಿಂಗಳಲ್ಲಿ ಎಲ್ಲಾ ಜಾತ್ಯತೀತ ವಿರೋಧ ಪಕ್ಷಗಳು ರಾಷ್ಟ್ರೀಯ ಸಮಗ್ರತಾ ಮಂಡಳಿಯಲ್ಲಿ ಅಯೋಧ್ಯೆ ಕುರಿತಾಗಿ ಅಗತ್ಯವಿದ್ದ ಯಾವುದೇ ಕ್ರಮ ಕೈಗೊಳ್ಳುವಲ್ಲಿ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದವು. ಸರಕಾರ ಈ ಬೆಂಬಲ ಕೇಳಿತ್ತು ಜಾತ್ಯಾತೀತ ವಿರೋಧ ಪಕ್ಷಗಳು ಯಾವ ಹಿಂಜರಿಕೆಯೂ ಇಲ್ಲದೆ ನೀಡಿದವು. ಆದರೆ ಒಬ್ಬ ಮುಗ್ಧ ವ್ಯಕ್ತಿಯಂತೆ ನರಸಿಂಹರಾಯರು ತನ್ನೆಲ್ಲಾ ನಂಬಿಕೆ, ವಿಶ್ವಾಸ ಇಟ್ಟಿದ್ದು ಕಾವಿಪಡೆಗಳ ಭರವಸೆಗಳ, ವಚನಗಳ ಮೇಲೆ. ಆದರೆ ಈ ವಚನಗಳನ್ನು ನಂಬ್ರುಗೆಗಳನ್ನು ಪಾಲಿಸುವ ಯೋಚನೆ ಕಾವಿ ಪಡೆಗಳಿಗೆ ಎಂದೂ ಇರಲಿಲ್ಲ. ಇಂತಹ ಭರವಸೆಗಳ ಮೇಲೆ ನರಸಿಂಹರಾಯರು ಮತ್ತು ಅವರ ಭಟ್ಟಂಗಿಗಳನ್ನು ಬಿಟ್ಟರೆ ಬೇರೆ ಯಾರಿಗೂ, ಕೆಲವು ಕಾಂಗ್ರೆಸ್ಸಿಗರಿಗೂ ಕೂಡಾ ಭರವಸೆಯಿರಲಿಲ್ಲ.

ಕಲ್ಯಾಣಸಿಂಗ್ 'ಭಜನೆ, ಕೀರ್ತನೆ'ಗೆಂದು ವಿವಾದಗ್ರಸ್ತ ಪ್ರದೇಶದಲ್ಲಿ ನೆರೆದ ಕರಸೇವಕರ ಮೇಲೆ ಗುಂಡು ಹಾರಿಸುವುದಿಲ್ಲ ಎಂಬ ತಮ್ಮ ವಚನವನ್ನು ಪಾಲಿಸಿದರು ಎಂದು ಬಿಜೆಪಿ ಶ್ವೇತಪತ್ರ ಹಾಡಿ ಹೊಗಳಿದೆ. ಆದರೆ ಭಜನೆ, ಕೀರ್ತನೆಗೆಂದು ಬಂದವರು ಇದ್ದಕ್ಕಿದ್ದಂತೆ ಬಾಬ್ರಿ ಮಸೀದಿಯತ್ತ ಧಾವಿಸಿ ಅದನ್ನು ಧ್ವಂಸಮಾಡುವ ಚಿತಾವಣೆ ಎಲ್ಲಿಂದ ಬಂತು ಎಂದು ಮಾತ್ರ ಈ ಬಿಜೆಪಿ ಉತ್ತರ ಹೇಳುವುದಿಲ್ಲ. ಅಯೋದ್ಯೆಯಲ್ಲಿ ಇಡೀ ಡಿಸೆಂಬರ್ 6 ರ ಘಟನೆಗಳ ವಿಡಿಯೋ ಟೇಪ್ ನೋಡಿದ ನೂರಾರು ಜನರಿಗೆ ಯಾವುದೇ ಕಡೆಯಿಂದ ಇಂತಹ ಯಾವುದೇ ಚಿತಾವಣೆ ಕಂಡು ಬಂದಿಲ್ಲ. ಇಡೀ ಈ ಕಾರ್ಯಾಚರಣೆ ಪೂರ್ವವ್ಯವಸ್ಥಿತ, ಪೂರ್ವನಿಯೋಜಿತ ಎಂಬ ತರ್ಕಸಂಗತ ಅಭಿಪ್ರಾಯಕ್ಕೆ ಈ ವಿಡಿಯೋ ಟೇಪ್ ನೋಡಿದವರೆಲ್ಲಾ ಬಂದಿದ್ದಾರೆ. ಈ ಗೂಂಡಾಗಿರಿ ನಡೆಯುತ್ತಿದ್ದಾಗ ಕೇವಲ 200 ಗಜ ದೂರದಲ್ಲಿ ನಿಂತಿದ್ದ ಅಡ್ವಾಣಿ, ಮುರಳಿಮನೋಹರ ಜೋಷಿ, ಉಮಾ ಭಾರತಿ ಮತ್ತು ಇತರ ಬೆಂಕಿ ಉಗುಳುವ ಆರ್.ಎಸ್.ಎಸ್. ಮಾಫಿಯಾದ ಅತಿರಥ-ಮಹಾರಥರು ಅತ್ಯಂತ ಶಾಂತ ಚಿತ್ತರಾಗಿ ಧ್ವಂಸ ಕಾರ್ಯವನ್ನು ವೀಕ್ಷಿಸುತ್ತಿದ್ದರು. ಅಷ್ಟೇ ಅಲ್ಲ, ಧ್ವಂಸ ಕಾರ್ಯ ಮುಗಿದಾಗ ಹರ್ಷಾತಿರೇಕದಿಂದ ಉಮಾಬಾರತಿ ಮುರಳಿ ಮನೋಹರ ಜೋಷಿಯವರನ್ನು ಅಪ್ಪಿಕೊಂಡ ದೃಶ್ಯವನ್ನು ಕನಿಷ್ಟ ಒಂದು ಹಿಂದೀ ಪತ್ರಿಕೆ ಸೆರೆಹಿಡಿಯಿತು. ಒಂದು ಪೂರ್ವಯೋಜಿತ ಕೆಲಸವನ್ನು ಉತ್ತಮ ರೀತಿಯಲ್ಲಿ ಪೂರೈಸಿದ ತೃಪ್ತಿಯನ್ನು ಬಯಲಿಗೆಳೆದ ದೃಶ್ಯ ಅದು.

ತನ್ನ 'ಶ್ವೇತಪತ್ರ'ದಲ್ಲಿ ಬಿಜೆಪಿ ಮತ್ತೆ-ಮತ್ತೆ ಜನಜಂಗುಳಿಯ ಮೇಲೆ ಗುಂಡುಹಾರಿಸುವ ಪ್ರಶ್ನೆಯ ರಾಗ ಹಾಡಿದೆ. ಡಿಸೆಂಬರ್ 5 ರಂದು ಅಥವಾ ಕನಿಷ್ಟ ಡಿಸೆಂಬರ್ 6 ರ ಮುಂಜಾನೆಯಾದರೂ ಭಾರತ ಸರಕಾರ ಕೆಲವು ಶಕ್ತಿಶಾಲೀ ಕ್ರಮ ಕೈಗೊಂಡಿದ್ದರೆ ಧ್ವಂಸಕಾರ್ಯದಲ್ಲಿ ತೊಡಗಿದ ಜನಜಂಗುಳಿಯ ಮೇಲೆ ಗುಂಡು ಹಾರಿಸುವ ಅಥವಾ ಹಾರಿಸದಿರುವ ಪ್ರಶ್ನೆಯೇ ಏಳುತ್ತಿರಲಿಲ. ಈ ವರ್ಷ ಧಿಲ್ಲಿಯಲ್ಲಿ ಫೆಬ್ರವರಿ 25 ನಡೆದ ಘಟನೆಯೇ ಇದಕ್ಕೆ ಪುರಾವೆ. ನೀರ್ಗುಂಡು ಎನ್ನುವ ದೊಡ್ಡ ಹೋಸ್ ಪೈಪುಗಳ ಮೂಲಕ ನೀರು ಚಿಮ್ಮಿದ್ದೇ ಸಂಘ ಮಾಫಿಯಾದ ಬೆಂಕಿಯುಗುಳುವ ಪಡೆಗಳನ್ನು ಓಡಿಸಲು ಸಾಕಾಯಿತು. ಒಟ್ಟಿನಲ್ಲಿ ಸರಕಾರ ಜೋಕರ್ ಪಾತ್ರವಹಿಸಿತು. ಬಿಜೆಪಿ ರಿಂಗ್‌ಮಾಸ್ಟರ್‌ನ ಪಾತ್ರ ವಹಿಸಿತು. ಇದು ದುರದೃಷ್ಟಕರ. ಸಂಘ ಮಾಫಿಯಾ ವಿಶ್ವಾಸದ್ರೋಹ ಮಾಡಿತು ಎಂದು ಸರಕಾರ ದೂರಿಕೊಂಡರೆ ಅದಕ್ಕಾಗಿ ಸರಕಾರವನ್ನು ಆಪಾದಿಸುವ ಅರ್ಹತೆ ಬಿಜೆಪಿಗಂತೂ ಇಲ್ಲ. ಅದಂತೂ ವಿಶ್ವಾಸದ್ರೋಹ, ಅದರಲ್ಲಿ ಸಂಶಯವೇ ಇಲ್ಲ. ಆದರೆ ಅವರು ವಿಶ್ವಾಸ ದ್ರೋಹಿಗಳಲ್ಲ ಎಂದು ನರಸಿಂಹರಾವ್ ನಂಬಿದ್ದು ರಾಜಕೀಯ ಮೂಢತನದ ಪರಮಾವಧಿ. ಸರಕಾರವನ್ನು ಯಶಸ್ವಿಯಾಗಿ ಮೋಸಗೊಳಿಸಿದ ನಂತರ ಈಗ ಬಿಜೆಪಿ ತನ್ನ 'ಶ್ವೇತಪತ್ರ'ದಲ್ಲಿ ಅಮಾಯಕನಂತೆ ಸೋಗು ಹಾಕುತ್ತಿದೆ. ಇದಕ್ಕಿಂತ ದೊಡ್ಡ ಗೋಸುಂಬೆತನ ಬೇರೆಯೇನಿದೆ?

ದಕ್ಕೀತೆ ಬಿಕ್ಕದ ಹೃದಯಗಳು

ಗೆಳೆಯಾ,

ಒಲೆ ಹೊತ್ತಿ ಉರಿಯದೆ
ಧರೆ ಹೊತ್ತಿ ಉರಿವ ಈ ನೆಲದಲ್ಲಿ
ದಕ್ಕೀತೆ ಬಿಕ್ಕದ ಹೃದಯಗಳು
ಮುಲುಗುಟ್ಟಿವೆ ಮುಗುಳ್ನಗುವ ಜೀವಗಳು
ಹಾಲುಗಲ್ಲದ ಹಸುಳೆ ಕಣ್ಣಲ್ಲಿ ನಕ್ಷತ್ರಗಳು?

ಧಗಧಗನೆ ಹೊತ್ತಿ ಉರಿವ
ದೆಗಳು ನುಡಿದೀತೆ ಗೆಳೆಯಾ
ಒಂದಿಷ್ಟು ತಂಗಾಳಿ ಮಾತುಗಳು?
ಕೆಂಗಣ್ಣ ಕಾವಲಿನ ಅಗ್ನಿಪರ್ವತವ
ದಾಟಿ ನಿನ್ನ ತಬ್ಬುವುದಕ್ಕೆ
ಸಿಕ್ಕೀತೆ ಒಂದೇ ಜೊತೆ ರೆಕ್ಕೆಗಳು:

ಈ ನೆಲದ ತುಂಬ ಹಸಿರು ಚಿಮ್ಮಿ
ಬರಿ ಬೆಳದಿಂಗಲು ಸುರಿದೀತೆ?
ಬಿರು ಬಿಸಿಲಿಗೆ, ಗೊನೆಯುರುಳದೆ
ಕಾಯಿ ಮಾಗಿ, ಕೆಂಬಣ್ಣ ತಿರುಗಿ
ಗೆಳೆಯಾ ಪೂರ್ಣ ಫಲವಾದೀತೆ?

--ಎಂ.ಆರ್. ಕಮಲ

ಕೃಪೆ : 'ಏಕತೆಗಾಗಿ ನಾವು ನೀವು'ನ "ಹಣತೆಯ ಕುಡಿ"

ಶ್ರೀ ಕ್ಲಿಂಟನ್ ಪರಮಾತ್ಮನ ಉದಯ

ಬಯಲುಗೊಂಡ ವಿಶ್ವಹಿಂದುಪರಿಷತ್‌ನ ಹೊಸ ರಾಷ್ಟ್ರೀಯತೆ

"........ವಿಶ್ವರಂಗದಲ್ಲಿ ಒಬ್ಬ ಮಹಾನ್ ವ್ಯಕ್ತಿಯಾಗಿ, ಒಳ್ಳೆಯತನ, ಶಾಂತಿ, ಸತ್ಯ ಸಹಿಷ್ಣುತೆ, ಸೋದರತೆಗಾಗಿ ಹೋರಾಡುವ ಬಲವಾದ ಇಚ್ಛಾಶಕ್ತಿಯುಂತಿರುವ ನಿಮ್ಮವ್ಯಕ್ತಿಯ[illegible] ನೀವು ಕಾಣಿಸಿಕೊಂಡಿರುವುದು ನಮಗೊಂದು ಹೊಸ ಆಶಾಕಿರಣ ದೊರೆತಿದೆ. ಗೀತೆಯ ಉಪದೇಶ ನಮಗೆ ನೆನಪಾಗುತ್ತಿದೆ- ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿರ ಭಾರತ- ಧರ್ಮ ಸಂಸ್ಥಾಪನಾಚಯ ಸಂಭವಾಮಿ ಯುಗೇ ಯುಗೇ"

ಇದು ಇಬ್ಬರು ಪ್ರಮುಖ ವಿ.ಹೆಚ್.ಪಿ. ಸಾಧುಗಳ ಭೂಪರಾಕು-ಯಾರಿಗೆ ಎಂದು ಕೊಂಡಿದ್ದೀರಿ? ಯಾವ "ಶುದ್ಧ" "ಆರ್ಯ" ಭಾರತೀಯನಿಗೂ ಅಲ್ಲ. ಇತ್ತೀಚೆಗಷ್ಟೆ ಮತ್ತೆ ಈ "ಭಾರತವರ್ಷದ ಪುಣ್ಯಭೂಮಿ"ಯ ಮೇಲೆ ಸೂಪರ್ 301ರ ಗದಾಪ್ರಹಾರ ಮಾಡಿರುವ ಅಮೆರಿಕಾದ ಅಧ್ಯಕ್ಷ ಕ್ಲಿಂಟನ್‌ರವರಿಗೆ

"ಕಳೆದ 500 ವರ್ಷಗಳಿಂದ ಮತಾಂಧ ಮುಸ್ಲಿಮರ ಅತ್ಯಾಚಾರಗಳಿಂದ ನರಳುತ್ತಿರುವ ಭಾರತೀಯ ಹೃದಯಕ್ಕೆ ಸಾಂತ್ವನ ನೀಡುವ, ಪ್ರೋತ್ಸಾಹ ನೀಡುವ ಒಂದೆರಡು ಮಾತುಗಳನ್ನಾದರೂ ನೀವು ಹೇಳಲಾರಿರಾ?" ಇದು ರಾಮಜನ್ಮ ಭೂಮಿ ನ್ಯಾಸದ ಅಧ್ಯಕ್ಷ ರಾಮಚಂದ್ರಪರಮಹಂಸ ಹಾಗೂ ರಾಮಜನ್ಮಭೂಮಿ ಮುಕ್ತಿಯ ಯಜ್ಞ ಸಮಿತಿಯ ಉಪಾಧ್ಯಕ್ಷ ನೃತ್ತಗೋಪಾಲ್‌ದಾಸ್ ಅಮೆರಿಕಾದ ಅಧ್ಯಕ್ಷ ಕ್ಲಿಂಟನ್‌ರವರಿಗೆ ಇಟ್ಟ ಮೊರೆ.

ಈ ಇಬ್ಬರು ಪ್ರಮುಖ ವಿ.ಹೆಚ್.ಪಿ. ಸಾಧುಗಳು 'ಭಾರತದ 65 ಕೋಟಿ ಹಿಂದೂಗಳ ಪರವಾಗಿ' ವಿಶ್ವದ ಪೋಲೀಸ್‌ಪೇದೆಯಂತೆ ವರ್ತಿಸುವ ಅಮೇರಿಕಾ ದೇಶದ ಅಧ್ಯಕ್ಷನಿಗೆ ಬರೆದ ಮೂರು ಪುಟಗಳ ಪತ್ರ ಹಲವು ಕುತೂಹಲಕಾರಿ ಅಂಶಗಳಲ್ಲಿ ಇವು ಒಂದೆರಡು. ಅವರ ನಿಜವಾದ ದೇಶದ್ರೋಹಿ ಸ್ವರೂಪವನ್ನು ಬಿಚ್ಚಿಡುವ ಮತ್ತೊಂದು ಉದಾಹರಣೆ ಡಿಸೆಂಬರ್ 6ರ ಕರಾಳಕೃತ್ಯಕ್ಕೆ ಇಡೀ ಜಗತ್ತಿನಿಂದ ಬಂದ ಖಂಡನೆಯಿಂದಾಗಿ 'ಸಂಘಪರಿವಾರ' ದೊಳಗೆ ಭಾರೀ ಚರ್ಚೆ ನಡೆಯಿತಂತೆ- ಹಿಂದುತ್ವವಾದಿಗಳು ತಮ್ಮ ಮುಖಕ್ಕೆ ಬಳಿದುಕೊಂಡ ಈ ಮಸಿಯನ್ನು ಅಳಿಸುವುದು ಹೇಗೆ ಎಂದು. ಕೆಲವು 'ಸೌಮ್ಯವಾದಿ'ಗಳು ಧಾರ್ಮಿಕ ಅಂಶವನ್ನು ಕಮ್ಮಿ ಮಾಡಬೇಕು ಎಂದಾಗ ಅದನ್ನು ವಿರೋಧಿಸಿದ 'ತೀವ್ರಗಾಮಿ'ಗಳು ಧಾರ್ಮಿಕ ಅಂಶವನ್ನು ಕಡಿಮೆ ಮಾಡುವ ಪ್ರಶ್ನೆಯೇ ಇಲ್ಲ, ಪಾಶ್ಚಿಮಾತ್ಯರ ಒಲವು ಗಳಿಸಲು ಹೊಸ ತಂತ್ರ ಮಾಡೋಣ ಎಂದು ನಿರ್ಧರಿಸಿದರಂತೆ. ಈ ಪತ್ರ ಆ ತಂತ್ರದ ಒಂದು ಫಲ ಭಾರತದಲ್ಲಿ ಪ್ರಜಾಪ್ರಭುತ್ವವನ್ನು, ಸಂವಿಧಾನವನ್ನು ಹೊಸಕಿಹಾಕಲು ಕಾತರಿಸುತ್ತಿರುವವರಿಗೆ ಕ್ಲಿಂಟನ್, ಮೇಜರ್, ಕೋಹ್ಲ್‌ಗಳನ್ನು ಇಂದ್ರ, ಚಂದ್ರ, ದೇವೇಂದ್ರ ಎಂದು ಹಾಡಿ ಹೊಗಳುವಲ್ಲಿ ಎಳ್ಳಷ್ಟು ನಾಚಿಕೆಯೆನಿಸದಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಇದು ಅವರ ಪರಂಪರೆಯ ಅಂಶವಿರಬಹುದೇ? ಅಧಿಕಾರಲಾಲಸಿಗಳ ಪರಂಪರೆಯಂತೂ ಇದೇ. ಆದರೆ 'ದೇಶಪ್ರೇಮ'ದ ತಮ್ಮ ಮುಖವಾಡ ಕಳಚಿಬೀಳಬಹುದೆಂಬ ಸಾಮಾನ್ಯ ಅರಿವೂ ಈ ಸಾಧುಗಳಿಗೆ ಇದ್ದಂತಿಲ್ಲ. ಅಧಿಕಾರ ಕಾತುರರಿಗೆ ಭಯವೆಲ್ಲಿ, ಲಜ್ಜೆಯೆಲ್ಲಿ- ಅಲ್ಲವೇ? ಇತಿಹಾಸದ ಪರಿಜ್ಞಾನವಂತೂ ಇಲ್ಲವೇ ಇಲ್ಲ.

ಅವರ ಪ್ರಕಾರ ಶ್ರೀಕೃಷ್ಣನ ವಾಶಿಂಗ್ಟನ್ ಅವತಾರ ಪುರುಷನಿಗೆ ಬರೆದ ಪತ್ರದ ಇನ್ನೆರಡು ನುಡಿಮುತ್ತುಗಳನ್ನು ನೋಡಿ-

"ಅಮೇರಿಕಾದ ಮಲಾಯ್, ಮಾಯಾ ಸಂಸ್ಕೃತಿಗಳೊಂದಿಗೆ ನಮ್ಮ ಪ್ರಾಚೀನ ಭಾರತೀಯ ಸಂಸ್ಕೃತಿಯ ಸಂಬಂಧಗಳು ಬಹಳ ಗಾಢವಾದ್ದು". ಕ್ಲಿಂಟನ್ ಈ ಸಂಸ್ಕೃತಿಗಳ ಉತ್ತರಾಧಿಕಾರಿಯಲ್ಲ- ಅವನ್ನು ಮೂಲೆಗುಂಪು ಮಾಡಿದ, ಭಾರತದ ಕೈಗೂ ಕೋಳತೊಡಿಸಿದ ಯುರೋಪಿಯನ್ ಪರಂಪರೆಯ ಉತ್ತರಾಧಿಕಾರಿ ಎಂಬುದು ಈ ಸಾಧುಗಳಿಗೆ ತಿಳಿದಿದೆಯೋ ಇಲ್ಲವೋ. ತಿಳಿದಿದ್ದರೂ ವಿಶ್ವದ ಮೇಲೆಲ್ಲಾ ಸವಾರಿ ಮಾಡುವ ದೇಶದ 'ಅವತಾರ ಪುರುಷ'ನ ಬಾಲ ಹಿಡಿದು ಭಾರತದ ಮೇಲೆ ಸವಾರಿ ಮಾಡಲು ಸಾಧ್ಯವಾಗುವುದಾದರೆ ಅದೇ ಮುಖ್ಯವಲ್ಲವೇ?

"ಈ ಅಪಘಾತ (ಡಿಸೆಂಬರ್ 6) ನಮಗೂ ಆಘಾತವುಂಟುಮಾಡಿದೆ. ಭಾರತೀಯ ನ್ಯಾಯಾಂಗದ ನ್ಯಾಯದಾನದಲ್ಲಿ ವಿಳಂಬ. ಉತ್ಸಾಹ ಪೂರಿತ ಕರಸೇವಕರಿಗೆ ಅತ್ಯಂತ ಅಸಹನೀಯವಾದುದರಿಂದ ಈ ಘಟನೆ ನಡೆದಿತು"-ಇದು ವಿದೇಶದ ಅಧ್ಯಕ್ಷನೊಬ್ಬನಿಗೆ ಭಾರತದ ವಿ.ಹೆಚ್.ಪಿ. ಸಾಧುಗಳು ನೀಡಬೇಕಾದ ಸಮಜಾಯಿಷಿ! ಆಹಾ ಎಂತಹ ದೇಶ ಭಕ್ತಿ! ಎಂತಹ ಭವ್ಯ ಪರಂಪರೆ!

ಕೋಮು ಗಲಭೆಗಳನ್ನು ಸೃಷ್ಟಿಸುವುದೇ ಕಸುಬಾಗಿರುವ ಉತ್ತರ ಪ್ರದೇಶದ ಸಶಸ್ತ್ರ ಪೋಲಿಸರು

ಉತ್ತರ ಪ್ರದೇಶದ ಪಿ.ಎ.ಸಿ. ಅಥವಾ ಪ್ರಾಂತೀಯ ಸಶಸ್ತ್ರ ಪಡೆ ಮುಸ್ಲಿಂ- ವಿರೋಧಿ ಕೋಮು ಪಕ್ಷಪಾತಕ್ಕೆ ಕುಖ್ಯಾತವಾದ ಪಡೆ. ಇದೇ ಎಪ್ರಿಲ್ 7 ರಂದು ಅಲೀಗಢನಲ್ಲಿ ಮತ್ತೊಂದು ತನ್ನ ಕುಕರ್ಮಗಳ ಪಟ್ಟಿಗೆ ಇನ್ನೊಂದನ್ನು ಅದು ಸೇರಿಸಿಕೊಂಡಿತು.

ಅಲೀಗಢದ ಮುಸ್ಲಿಂ ವಿಶ್ವವಿದ್ಯಾಲಯ ಅದರ ಹೆಸರಲ್ಲಿರುವ 'ಮುಸ್ಲಿಂ' ಪದದಿಂದಾಗಿ 'ಸೂಕ್ಷ್ಮ ಪ್ರದೇಶ' ವೆಂದು ಪಟ್ಟಿಯಾಗಿದ್ದರೂ ಹಲವು ವರ್ಷಗಳಿಂದ ಅದು ಕೋಮುಗಲಭೆಗಳ ಉತ್ತರ ಪ್ರದೇಶದಲ್ಲಿ ಶಾಂತಿಯ ದ್ವೀಪವಾಗಿತ್ತು. ಡಿಸೆಂಬರ್ 6 ರ ನಂತರವೂ ವಿಶ್ವವಿದ್ಯಾಲಯದಲ್ಲಾಗಲೀ ಅಲೀಗಢ ನಗರದಲ್ಲಾಗಲೀ ಪ್ರಮುಖ ಗಲಭೆಯೊಂದೂ ನಡೆದಿರಲಿಲ್ಲ.

ಎಪ್ರಿಲ್ 7 ರಂದು ಒಂದು ಸಣ್ಣ ಘಟನೆಗೆ ಕೋಮು ಬಣ್ಣ ನೀಡಲು ಪೋಲೀಸರು ಪ್ರಯತ್ನಿಸಿದರು. ದಿಲ್ಲಿಯ ಪೋಲೀಸರೂ ಅದಕ್ಕೆ ತುಪ್ಪ ಸುರಿಯಲು ಯತ್ನಿಸಿದರು.

ವಿಶ್ವವಿದ್ಯಾಲಯದ ಅವರಣದೊಳಗಿಂದ ಹೆದಾರಿಯೊಂದು ಹಾದುಹೋಗುತ್ತಾ ಇಲ್ಲಿ ರಾತ್ರಿ ಹಗಲು ಅತ್ತಿತ್ತ ಧಾವಿಸುವ ಲಾರಿ-ಟ್ರಕ್ಕುಗಳಿಂದ ವಿದ್ಯಾರ್ಥಿಗಳಿಗೆ ಭಾರೀ ತೊಂದರೆಯಾಗುತ್ತಿದ್ದರಿಂದ ಇದನ್ನು ಹೆದ್ದಾರಿ ಟ್ರಾಫಿಕ್‌ಗೆ ಬೇರೆ ದಾರಿ ಮಾಡಬೇಕು ಎಂದು ವಿದ್ಯಾರ್ಥಿಗಳು ಬಹಳದಿನಗಳಿಂದ ಒತ್ತಾಯಿಸುತ್ತಿದ್ದರು. ಎಪ್ರಿಲ್ 7 ರಂದು ರಾತ್ರಿ ಹತ್ತು ಗಂಟೆಗೆ ಒಂದು ಲಾರಿ ಡಿಕ್ಕಿ ಹೊಡೆದು ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಇಬ್ಬರು ವಿದ್ಯಾರ್ಥಿಗಳು ಇರ್ಷಾದ್ ಮತ್ತು ಕುಮಾರ್ ಸತ್ತರು. ಈ ಟ್ರಕ್ ನಿಲ್ಲಿಸಲೆತ್ನಿಸಿದ ಇನ್ನೊಬ್ಬ ಹುಡುಗನಿಗೆ ತೀವ್ರಗಾಯಗಳಾದವು

ಅಪಘಾತ ಸುದ್ದಿ ಕೇಳಿದ ವಿದ್ಯಾರ್ಥಿಗಳು ಸಿಟ್ಟಿಗೆದ್ದು ಅಪಘಾತ ಸ್ಥಳಕ್ಕೆ ಧಾವಿಸಿ ಬಂದರು. ಗಲಭೆಯಾಯಿತು. ಪಿ.ಎ.ಸಿ. ಬಂತು ಮತ್ತಷ್ಟು ಗಲಭೆ ಹಚ್ಚಿದರು. ಲಾಠೀಚಾರ್ಜ್, ಅಶ್ರುವಾಯು ಯಾವುದೂ ಮಾಡದೆ ಒಮ್ಮಲೇ ಗೋಲೀಬಾರ್ ಆರಂಭವಾಯಿತು. ಒಬ್ಬ ಹುಡುಗನ ಎಡಕ್ಕೆ ಗುಂಡಿಕ್ಕಿ ಕೊಲ್ಲಲಾಯಿತು ಇನ್ನೊಬ್ಬನ ತಲೆಯ ಹಿಂಬದಿಗೆ ಗುಂಡುತಾಗಿತು. ಸಾಲದಕ್ಕೆ ಪಿ.ಎಸಿ. ಪಡೆ ಹಾಸ್ಟೆಲ್‌ಗೆ ಕೂಡಾ ನುಗ್ಗಿತು. 'ಅಲಿಘಡ್' ಇನ್ನೊಂದು ಕಾಶ್ಮೀರ ಆಗಲು ಬಿಡುವುದಿಲ್ಲೆಂದು ಹೇಳುತ್ತಾ ಪಿ.ಎ.ಸಿ.ಯವರು ವಿದ್ಯಾರ್ಥಿಗಳನ್ನು ಹೊಡೆದರು. ಹಾಸ್ಟೆಲ್ ಪಕ್ಕದೇ ಒಂದು ದೇವಸ್ಥಾನವಿದೆ. ಅದಕ್ಕೆ ಪೋಲೀಸ್ ಪಹರೆಯಿದೆ. ಈ ಗಲಭೆ ಆರಂಭವಾದಾಗ ದೇಕೆಂದೇ ಪೋಲೀಸ್ ಪಹರೆ ತೆಗೆಯಲಾಯಿತು. ಆದರೆ ವಿದ್ಯಾರ್ಥಿಗಳು ಪೋಲೀಸರ ಬಲೆಗೆ ಬೀಳಲಿಲ್ಲ. ದೇವಸ್ಥಾನಕ್ಕೆ ಏನೊಂದು ತೊಂದರೆ ತಟ್ಟಲಿಲ್ಲ.

ಎಪ್ರಿಲ್ 26 ರಂದು ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ದಿಲ್ಲಿಯಲ್ಲಿ ಜಂತರ್ ಮಂತರ್ ಎದುರು ಮತಪ್ರದರ್ಶನ ನಡೆಸಿ ಗೋಲೀಬಾರಿಗೆ ಕಾರಣವಾದ ಪೋಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು. ಡಿ.ವೈ.ಎಫ್.ಐ. ಅಧ್ಯಕ್ಷ ಎಂ.ಎ. ಬೇಬಿ, ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಸಲೀಂ ಹಾಗೂ ಎಸ್.ಎಫ್.ಐ.ನ ಜಂಟಿ ಕಾರ್ಯದರ್ಶಿ ಬ್ರತಿನ್ ಸೇನ್‌ಗುಪ್ತಾ ಮತಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದರು. ಪ್ರದರ್ಶನಕಾರರು ನಂತರ ಮನವಿಪತ್ರ ಸಲ್ಲಿಸಲು ಪ್ರಧಾನ ಮಂತ್ರಿಗಳ ನಿವಾಸದೆಡೆಗೆ ಹೊರಟಾಗ ಪೋಲೀಸರು ಅವರನ್ನು ತಡೆದು ಅಮಾನುಷವಾಗಿ ಸಿಕ್ಕಾಪಟ್ಟೆ ಲಾಠಿ ಪ್ರಹಾರ ನಡೆಸಿದರು. ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಿದರು. ಹಲವಾರಿಗೆ ಗಾಯಗಳಾಗಿವೆ.

ಕೋಮು ಜಂತು ಕಡಿದ ಪೋಲೀಸರ ಈ ವರ್ತನೆಗೆ ವಿದ್ಯಾರ್ಥಿ ಸಮುದಾಯ ಪ್ರತಿಭಟನೆ ವ್ಯಕ್ತಪಡಿಸಿದೆ. ಪೋಲೀಸ್ ದಮನದ ಮೂಲಕ ಅಲೀಗಢ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳನ್ನು ದಮನ ಮಾಡಲು ಸಾಧ್ಯವಿಲ್ಲ ಎಂದು ಎಸ್.ಎಫ್.ಐ. ಕೇಂದ್ರ ಸಮಿತಿ ಎಚ್ಚರಿಸಿದೆ.

ಡಂಕೆಲ ಮಹಾಮಾರಿ ಲೇಖನ ಮಾಲೆ : 3

-- ಜಿ.ಎನ್.ನಾಗರಾಜ್

ಇದಾವನ್ಯಾಯ? ಏನನ್ಯಾಯ?? ಮೂರನೇ ಜಗತ್ತು ಮಡಿಯಲೇಬೇಕೆ?

ಭಾರತವನ್ನು ಪೀಡಿಸಬಯುಸುವ ಡಂಕೆಲ್ ಪ್ರಸ್ತಾಪಗಳ ರೂಪದಲ್ಲಿರುವ ಮಹಾ ಮಾರಿಯ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಎರಡು ಲೇಖನಗಳನ್ನು ಓದಿರುವಿರಿ. ಈ ಲೇಖನಮಾಲೆಯ ಇನ್ನು 3 ಲೇಖನಗಳು ಇಲ್ಲಿವೆ.

ಭಾರತದಲ್ಲಿ ಆಹಾರಧಾನ್ಯಗಳು, ಇತರ ಕೃಷಿ ವಸ್ತುಗಳ ಮಾರಾಟಕ್ಕಾಗಿ ಹಾತೊರೆಯುತ್ತಿರುವ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಅನುಕೂಲಕ್ಕಾಗಿ ಡಂಕೆಲ್ ಪ್ರಸ್ತಾವಗಳಲ್ಲಿ ಏನೇನೆಲ್ಲ ಸೇರಿಕೊಂಡಿದೆಯಪ್ಪಾ ಎಂದರೆ ಅದೊಂದು ದೊಡ್ಡಕತೆ.

ವಿದೇಶಿ ಕಂಪನಿಗಳು ಭಾರತಕ್ಕೆ ಕಾಲಿಡುವ ಮೊದಲೆ ತಮ್ಮ ಆಗಮನಕ್ಕೆ ಭಾರತ ಸರ್ಕಾರ ಳನ್ನು ಸಿರಿಸಿ, ಗುಡಿಸಿ, ತೋರಣಕಟ್ಟಿ ಬಾಜಾಬಜಂತ್ರಿ ಬಾರಿಸುತ್ತಾ ಬರುವವರ ಕಾಲಿಗೆ ನೋವಾಗಬಾರದೆಂದು ನಡೆಯುವಹಾದಿಯೆಲ್ಲೆಲ್ಲಾ ರತ್ನಗಂಬಳಿ ಹಾರಿಸಿ ಹೂಮಾಲೆ ಹಿಡಿದು ಕಾದುನಿಂತಿರಬೇಕೆಂದು ಡಂಕೆಲಪ್ಪನ ಆಜ್ಞೆ.

"ಆಯ್ತು ಸ್ವಾಮಿ ಜೀ ಹುಜೂರ್" ಎಂದು ಭಾರತ ಸರ್ಕಾರ ಸಡಗರಗೊಂಡು ಇಡೀ ದೇಶವನ್ನು ಅಣಿ ಮಾಡುತ್ತಿದೆ.

ಈ ವಿದೇಶಿ ಕಂಪನಿಗಳು ಭಾರತದಲ್ಲಿ ತಮ್ಮ ಕೃಷಿ ಉತ್ಪಾದನೆಗಳನ್ನು ಮಾರಲು ಅನುಕೂಲವಾಗುವಂತೆ ಅವು ಸೂಪರ್‌ಲಾಭಗಳಿಸಲು ಅವಕಾಶವಾಗುವಂತೆ ಮೊದಲು ಇಲ್ಲಿ ಕೃಷಿ ವಸ್ತುಗಳ ಬೆಲೆ ಏರಬೇಕು ಸಾಧ್ಯವಾದಷ್ಟೂ ಏರಬೇಕು.

1. ಅದಕ್ಕಾಗಿ ಅಗ್ಗದ ದರದಲ್ಲಿ ಆಹಾರಧಾನ್ಯಗಳನ್ನು ಮಾರುವ ರೇಷನ್ ವ್ಯವಸ್ಥೆ ತೊಲಗಬೇಕು.
2. ಲೆವಿ ಪದ್ಧತಿ ಹೋಗಬೇಕು; ಮಾರುಕಟ್ಟೆ ಬೆಲೆಯಲ್ಲಿಯೇ ಭಾರತ ಸರ್ಕಾರವೂ ಆಹಾರ ವಸ್ತುಗಳನ್ನು ಕೊಳ್ಳಬೇಕು.
3. ರೈತರು ಮಾರುಕಟ್ಟೆಯಲ್ಲಿ ಅಗ್ಗದ ದರದಲ್ಲಿ ಮಾರಲು ಅಸಾಧ್ಯವಾಗುವಂತೆ ಅವರಿಗೆ ನೀಡುವ ಅಗ್ಗದ ಬೆಲೆಯ ರಸಗೊಬ್ಬರ, ನೀರಾವರಿ ಸೌಲಭ್ಯ, ವಿದ್ಯುತ್ ಇನ್ನುಳಿದೆಲ್ಲಾ ಅನುಕೂಲಗಳೂ ತೊಲಗಬೇಕು.
4. ವಿದೇಶಿ ಕಂಪನಿಗಳಿಂದ ಭಾರತಕ್ಕೆ ಬಂದ ಧಾನ್ಯ ದೇಶದ ಎಲ್ಲಾ ಕಡೆಗಳಿಗೂ ಸರಾಗವಾಗಿ ಹರಿಯುವಂತೆ ಧಾನ್ಯ ಸಾಗಾಣಿಕೆಗೆ ಇರುವ ನಿರ್ಬಂಧಗಳು ತೊಲಗಬೇಕು.

ಭಾರತದ ಮಾರುಕಟ್ಟೆಯನ್ನು "ಮುಕ್ತ"ಗೊಳಿಸಿ ಇಲ್ಲಿ ಕೃಷಿ ವಸ್ತುಗಲ ಬೆಲೆಏರಿಕೆಯಾಗುತ್ತಿರುವಂತೆ ವಿದೇಶಗಳಿಂದ ಇವುಗಳನ್ನು ಆಮದು ಮಾಡಿಕೊಳ್ಳಲು ಇರುವ ಎಲ್ಲಾ ಅಡೆತಡೆಗಲೂ ಮುರಿದು ಬೀಳಬೇಕು ಅವಕ್ಕಾಗಿ.

ಒಂದನೇಯದಾಗಿ 1993ರ ವೇಳೆಗೆ ದೇಶದ ಕೃಷಿ ಉತ್ಪಾದನೆಯ ಶೇ. 2. ರಷ್ಟು 2003ರ ವೇಲೆಗೆ ದೇಶದ ಕೃಷಿ ಉತ್ಪಾದನೆಯ ಶೇ. 3.3 ರಷ್ಟು ಆಮದು ಮಾಡಿಕೊಳ್ಳಲೇ ಬೇಕು.

ಈ ಎಲ್ಲಾ ಶರತ್ತುಗಳನ್ನು ವಿಧಿಸಿದ ಬಗ್ಗೆ ಹಿಂದಿನ ಲೇಖನಗಳಲ್ಲಿ ಓದಿದ್ದೀರಿ.

ಕೃಷಿ ಉತ್ಪಾದನೆಗಳ ವಿದೇಶಿ ಧಾಳಿಗೆ ಭದ್ರವಾಗಿ ಮುಚ್ಚಿರುವ ಭಾರತದ ಕೋಟೆಯಲ್ಲಿ ಬಿರುಕು ಮೂಡಿಸಲು ಡಂಕೆಲ್‌ನ

ಎರಡನೆಯ ಶರತ್ತೆಂದರೆ:

1986-88 ರ ನಡುವಿನ ಅವಧಿಯಲ್ಲಿ ಎಷ್ಟು ಕೃಷಿ ಉತ್ಪಾದನೆಯನ್ನು ಆಮದು ಮಾಡಿಕೊಂಡಿದ್ದೇವೊ ಅಷ್ಟನ್ನು ಯಾವ ಕಾಲಕ್ಕೂ ತರಿಸಿಕೊಳ್ಳುತ್ತಲೇ ಇರಬೇಕು. ಆಗ ನಾವು ಎಣ್ಣೆ ಬೀಜ ಎಣ್ಣೆ, ಸಕ್ಕರೆಯನ್ನು ಆಮದು ಮಾಡಿಕೊಂಡಿದ್ದೇವೆ. ಬಾರತದಲ್ಲಿ ಕಬ್ಬು ಯಥೇಚ್ಛವಾಗಿ ಬೆಳೆದರೂ ಅಡಿಗೆ ಎಣ್ಣೆಯ ಅವಶ್ಯಕತೆಯಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸಿದರೂ ಇವನ್ನು ಆಮದು ಮಾಡಿಕೊಳ್ಳುತ್ತಲೇ ಇರಬೇಕು. ಇವು ಅವಶ್ಯಕತೆಯಿಲ್ಲದಿದ್ದರೂ ಭಾರತ ಸರ್ಕಾರದ ಬಳಿ ಇವನ್ನು ಕೊಳ್ಳಲು ಡಾಲರ್ ರೂಪದ ಅಮೇರಿಕದ ಹಣ ಇಲ್ಲದಿದ್ದರೂ ಕೊಳ್ಳುತ್ತಲೇ ಇರಬೇಕು.

ಮೂರನೆಯ ಶರತ್ತೆಂದರೆ

ಭಾರತಕ್ಕೆಯಾವುದೇ ಆಮದಿನ ಬಗ್ಗೆ, ಮುಖ್ಯವಾಗಿ ಕೃಷಿ ವಸ್ತುಗಳ ಆಮದುಗಳ ಬಗ್ಗೆ ಯಾವುದೇ ನಿಷೇಧ ಹೇರಬಾರದು. ಈಗ ಇರುವ ಎಲ್ಲ ನಿಷೇಧಗಳನ್ನು ತೆಗೆಯಬೇಕು. ಯಾರೂ ಎಷ್ಟುಬೇಕಾದರೂ ಆಮದು ಮಾಡಿಕೊಲ್ಲಲು ಅವಕಾಶವಿರಬೇಕು.

ಭಾರತದ ಸರ್ಕಾರ, ಅದರ ವಾಣಿಜ್ಯ ಮಂತ್ರಿ ಪ್ರಣಬ್ ಮುಖರ್ಜಿ, ಕೃಷಿ ಮಂತ್ರಿ ಬಲರಾಂ ಜಾಖಡ್ ಅವಕಾಶ ಸಿಕ್ಕಿದ ಕಡೆಯಲ್ಲೆಲ್ಲಾ ಹೇಳುತ್ತಿದ್ದಾರೆ. ಡಂಕೆಲ್ ಪ್ರಸ್ತಾವಗಳು ಭಾರತಕ್ಕೆ ಉಪಕಾರಮಾಡುವುದಕ್ಕಾಗಿಯೇ ಹುಟ್ಟಿವೆ. ಭಾರತದ ಪ್ರಧಾನಿ ನರಸಿಂಹರಾಯರು ಉತ್ತರ ಪ್ರದೇಶದಲ್ಲಿ ಒಂದು ಸಭೆಯನ್ನುದ್ದೇಶಿ ಭಾಷಣ ಮಾಡುತ್ತಾರೆ "ಡಂಕೆಲ್ ಪ್ರಸ್ತಾವಗಳ ಬಗ್ಗೆ ಎಬ್ಬಿಸುತ್ತಿರುವ ಗದ್ದಲವನ್ನು ಮನಸ್ಸಿಗೆ ಹಾಕಿಕೊಳ್ಳದೇಡಿ ಭಾರತ ರೈತರ ಹಿತಕ್ಕೆ ಮಾರಕವಾಗುವಂತಾದ್ದೇನನ್ನೂ ನಾವು ಮಾಡುವುದಿಲ್ಲ" ಎಂದು.

ಈ ಡಂಕೆಲ್‌ನಲ್ಲಿ ಭಾರತ ದೇಶಕ್ಕೆ ದೇಶದ ಕೃಷಿಗೆ ಪ್ರಯೋಜನವಾಗುವಂತಹುದ್ದೇನಿದೆ?

ಅವರ ಪ್ರಕಾರ ನಾವು ವಿದೇಶಗಳಿಂದ ಆಮದು ಮಾಡಿಕೊಂಡಂತೆಯೇ ನಮ್ಮ ದೇಶದಿಂದ ಹೊರದೇಶಗಳಿಗೆ ರಫ್ತು ಮಾಡಲು ಬೇಕಾದಷ್ಟು ಅವಕಾಶಗಳಿವೆ. ಇವರಿಂದ ನಮ್ಮ ದೇಶ ಬೇಕಾದಷ್ಟು ವಿದೇಶಿ ವಿನಿಮಯ ಗಳಿಸಬಹುದು. ಅವರಿಗೆ ಬೇಕಾದ್ದು ಹಣಗಳು, ಹಣ್ಣಿನಿಂದ ಮಾಡಿದ ರಸ, ಜ್ಯಾಂ, ಜೆಲ್ಲಿ, ಹೂವುಗಳು, ಬಸುಮತಿ ಅಕ್ಕಿ ಇತ್ಯಾದಿ ಆದ್ದರಿಂದನಮ್ಮದೇಶದ ರೈತರು ನಮ್ಮದೇಶದ ಜನ ಅನ್ನ ಅನ್ನ ರೊಟ್ಟಿ ರೊಟ್ಟಿ ಎಂದು ಗೋಗರೆಯುತ್ತಿದ್ದರೂ ಯುರೋಪಿನ ಅಮೇರಿಕದ ಜನ[illegible]ರಿಗೆ ಹಣ್ಣು ಹೂ ಬೆಳೆದು ಕೊಡಬೇಕು ನಮಗೆ ಬೇಕಾದ ಆಹಾರ ಧಾನ್ಯ ಎಣ್ಣೆ ಇತ್ಯಾದಿಗಳನ್ನು ವಿದೇಸಗಳಿಂದ ಪಡೆಯಬೇಕು. ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗಿ ನಮ್ಮ ಕಾಲಮೇಲೆ ನಿಲ್ಲುವ ಪ್ರಯತ್ನವನ್ನು ಕೈ ಬಿಡಬೇಕು ಇದು ಡಂಕೆಲ್ ಪ್ರಸ್ತಾವಗಳ ಸಾರಾಂಶ. ಇದರಿಂದ ಭಾರತಕ್ಕೆ ಬಹಳ ಪ್ರಯೋಜನವಿದೆ ಎನ್ನುವ ಈ ಅ ಸ್ವತಂತ್ರ ಭಾರತ ಸರ್ಕಾರದ ಸ್ವತಂತ್ರ ಬುದ್ಧಿಗೆ ಏನ್ನೆನ್ನಬೇಕು?

ಈ ಹಣ್ಣು, ಹೂ, ಧಾನ್ಯ ಮತ್ತಿತರ ಕೃಷಿ ಉತ್ಪಾದನೆಯನ್ನು ವಿದೇಶಗಳಲ್ಲಿ ಮಾರುವುದಕ್ಕೆ ವಿಪುಲ ಅವಕಾಶವಿದೆಯೆಂದರೂ ಅದರಿಂದ ಯಾರಿಗೆ ಪ್ರಯೋಜನ[illegible] ಯುರೋಪ್, ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾಗಳು ಮಾತ್ರ ಕೃಷಿ ಉತ್ಪಾದನೆಗೆ ಯಥೇಚ್ಚವಾಗಿ ಬೇರೆ ದೇಶಗಳಿಗೆ ಮಾರುವ ಸ್ಥಿತಿಯಿರುವುದು ಇವುಗಳಿಗೆ ಮಾರುಕಟ್ಟೆ ಒದಗಿಸುವುದೇ ಡಂಕೆಲ್‌ನ ಗುರಿ.

ಇವರ ಜೊತೆಗೆ ಭಾರತದ ರೈತರ ಫಸಲುಗಳನ್ನು ವಿದೇಶಗಳಿಗೆ ನಿರ್ಯಾತ ಮಾಡುವವರು ಯಾರು?

ಒಂದು ಎಕರೆಯಿಂದ ಐವತ್ತು ಎಕರೆವರೆಗಿನ ರೈತರೂ ಕೂಡ ಅಲ್ಲ. ದೇಶ ವಿದೇಶಗಳ ಮಾರುಕಟ್ಟೆಗಳಲ್ಲಿ ಯಾವ ಬೆಲೆ ಇದೆ? ಅದರ ಪ್ರಯೋಜನ ಪಡೆಯಲು ಯಾವ ಬೆಳೆಯನ್ನು ಇಲ್ಲಿ ಬೆಳೆಯಬೇಕು? ಈ ಬೆಳೆಯನ್ನು ಬೆಳೆದ ಮೇಲೆ ರೈತನಿಂದ ಪಡೆಯುವವರು ಯಾರು? ಈ ಎಲ್ಲಾ ವಿಷಯ ಭಾರತ ಸಾಮಾನ್ಯ ನಿರಕ್ಷರ[illegible] ರೈತರಿಗೆ ಗೊತ್ತಾಗುತ್ತದೆಯೇ?

ಇಂದು (1990 ಅಂಕಿ ಅಂಶಗಳಂತೆ) ಅಂತರರಾಷ್ಟ್ರೀಯ ಧಾನ್ಯ ಮಾರುಕಟ್ಟೆಯನ್ನು ಮುಷ್ಠಿಯಲ್ಲಿ ಹಿಡಿದಿರುವವರು ಈ ಕೆಳಗಿನ ಆರು ಕಂಪನಿಗಳು. ಅದರಲ್ಲಿ ಮೊದಲ ಹೆಸರೇ ಕಾರ್ಗಿಲ್.

ಕಾರ್ಗಿಲ್	ಶೇ.25
ಕಾಂಟಿನೆಲ್ ಗ್ರೈನ್	ಶೇ.20
ಲೂಯಿ ಡ್ರೈಫಸ್	ಶೇ.13
ಎಡಿಎಂ. ಬಂಚ್	ಶೇ. 13
ಮತ್ತು ಬಾರ್ನ್	
ಪೆರುಜ್ಜಿ	ಶೇ.8-10

ಇವರು ದೇಶ ದೇಶಗಳ ಒಳಹೊಕ್ಕು ಅಲ್ಲಿ ಅಗ್ಗವಾಗಿರುವ ಕೊಳ್ಳಬಹುದಾದ, ಕೊಳ್ಳಬಾರದ ಧಾನ್ಯಗಳನ್ನೆಲ್ಲಾ ಕೊಂಡು ದಾಸ್ತಾನು ಮಾಡಿ ಬೆಲೆ ಏರಿಸಿ ಕೊಳ್ಳಬೇಕಾದವರು ಬಾಯಿ ಬಾಯಿ ಬಿಡುವಂತೆ ಮಾಡಿ ಅವರಿಗೆ ಮಾರುವವರಿವರು.

ಈ ಬೃಹತ್ ಸಾವಿರಾರು ಕೋಟಿಗಳ ವ್ಯಾಪಾರದ[illegible]

ಡಂಕಲ್ ಮಹಾಮಾರಿ ಲೇಖನಮಾಲೆ : 4

ಬುದ್ಧಿಮಾರಿ ಡಂಕೆಲ್

ವೇದಗಳನ್ನು ಓದಬಾರದವರ ಕಿವಿಗೆ ಎಲ್ಲಿಯಾದರೂ ಕೆಲವು ವೇದದ ನುಡಿಗಳು ಬಿದ್ದರೂ ಆ ಕಿವಿಗಳಿಗೆ ಕಾದ ಸೀಸವನ್ನು ಹುಯ್ಯಬೇಕೆಂದ ಮನುಸ್ಮೃತಿಯ ನಾಡು ನಮ್ಮದು. ಹೀಗೆ ಜ್ಞಾನವೆಂಬುದು ಕೇವಲ ನಮ್ಮ ಹಕ್ಕು ಎಂದು ಪ್ರತಿಪಾದಿಸಿದ ಪುರೋಹಿತಶಾಹಿಯ ಪರಿಣಾಮದಿಂದ ನಮ್ಮ ದೇಶ ಇನ್ನು ನರಳುತ್ತಿರುವಾಗಲೇ ಈಗ ಮತ್ತೊಂದು ಭೀಕರ ಅಂತರರಾಷ್ಟ್ರೀಯ ಪುರೋಹಿತಶಾಹಿಯ ಕೈಗೆ ಸಿಕ್ಕಿ ನರಳಬೇಕಾಗಿದೆ. ಬುದ್ಧಿಯೆಂಬುದು ಅದರ ಫಲವಾಗಿ ಬಂದ ವಿಜ್ಞಾನ ಸಂಶೋಧನೆಳೆಂಬುವು ಕೇವಲ ನಮ್ಮ ಹಕ್ಕು ಎಂದು ಸಾಮ್ರಾಜ್ಯಶಾಹಿಗಳು ಪ್ರತಿಪಾದಿಸುತ್ತಿರುವ ಬೌದ್ಧಿಕ ಆಸ್ತಿಯ ಹಕ್ಕುಗಳ ಪರಿಣಾಮದ ಬಗ್ಗೆ ಮುಂದೆ ಓದಿ.

ಜ್ಞಾನ-ವಿಜ್ಞಾನ ಯಾರದಾದರೂ ಆಸ್ತಿಯಾಗಬಹುದೆ?

ಅದು ಈಗಾಗಲೇ ಆಸ್ತಿಯಾಗಿಬಿಟ್ಟಿದೆ. ಅದಕ್ಕೊಂದು ಹೆಸರು ಬಂದಿದೆ ಬೌದ್ಧಿಕ ಆಸ್ತಿ ಹಕ್ಕು. ಹಣ, ಭೂಮಿ, ಕಾರ್ಖಾನೆ ಮುಂತಾದ ಇತರ ಆಸ್ತಿಗಳಂತೆ ಪ್ರಭಾವ, ಅಧಿಕಾರ, ಶಕ್ತಿಗಳ ಮೂಲವಾಗಿಬಿಟ್ಟಿದೆ. ಭಾರತ ಈ ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸರಿಯಾದ ಮಾನ್ಯತೆ ಕೊಟ್ಟಿಲ್ಲ ಎಂದು ಅಮೆರಿಕದ ದೊಂಬಡಿ ಹೊಡೆಯುತ್ತಿದೆ. ಈಗಾಲಾದರೂ ಅದನ್ನು ಮಾಡದಿದ್ದರೆ ತನ್ನ ವಿಶೇಷ 301 ವಿಧಿ ಪ್ರಕಾರ ಭಾರತದ ರಫ್ತುಗಳಿಗೆ ದಂಡ ಸುಂಕ ವಿಧಿಸುತ್ತೇನೆ ಎಂದು ಬೆದರಿಸುತ್ತಿದೆ. ಡಂಕೆಲ್ ಪ್ರಸ್ತಾಪಗಳ ಭಾಗವಾದ ವ್ಯಾಪಾರಕ್ಕೆ ಸಂಬಂಧಪಟ್ಟ ಬೌದ್ಧಿಕ ಆಸ್ತಿ ಹಕ್ಕು (*Trade Related Intellectual Property Rights* ಅಥವಾ *TRIPS*) ಮೂಲಕ ಇದನ್ನು ಭಾರತದ ಮೇಲೆ ಹೇರಲು ನೋಡುತ್ತಿದ್ದಾರೆ ಸಾಮ್ರಾಜ್ಯಶಾಹಿ ದೇಶಗಳು.

ಬೌದ್ಧಿಕ ಆಸ್ತಿಗೆ ಹಲವು ರೂಪಗಳು. ಪುಸ್ತಕ, ಫಿಲಂ, ಮುಂತಾದವುಗಳ ಮೇಲೆ ಇರುವ ಕಾಪಿರೈಟ್ ಉತ್ಪನ್ನಗಳ ಮೇಲೆ ಇರುವ ಟ್ರೇಡ್‌ಮಾರ್ಕ್‌ಗಳು ಕೈಗಾರಿಕಾ ಆಸ್ತಿಗಳ ರೂಪದಲ್ಲಿರುವ ಪೇಟೆಂಟ್‌ಗಳು ಇತ್ಯಾದಿ.

ಬೌದ್ಧಿಕ ಆಸ್ತಿ ಎಂದರೆ ಜ್ಞಾನ. ಜ್ಞಾನ ವಿಶೇಷವಾದ ಗುಣಗಳನ್ನು ಹೊಂದಿದೆ. ಜ್ಞಾನ ಬೇರೆ ಭೌತಿಕ ಆಸ್ತಿಗಳಂತಲ್ಲ. ಭೂಮಿ, ಎಣ್ಣೆಬಾವಿ,ಗಣಿ ಇತ್ಯಾದಿಗಳಂತೆ ಇವೆಲ್ಲವನ್ನು ಇಬ್ಬರೂ ಹೊಂದಿರುವುದು ಸಾಧ್ಯವಿಲ್ಲ. ಆದ್ದರಿಂದ ಅದನ್ನು ಒಬ್ಬನ ಆಸ್ತಿ ಎನ್ನಬಹುದು ಆದರೆ ಜ್ಞಾನ ಹಾಗಲ್ಲ. ಅದನ್ನು ಹಂಚಬಹುದು. ಅದನ್ನು ಹಂಚಿಕೊಂಡಷ್ಟು ಹೆಚ್ಚುತ್ತದೆ ಬೆಳೆಯುತ್ತದೆ.

TRIPS ವಿಶೇಷ 301 ವಿಧಿಗಳ ಮೂಲಕ ಜ್ಞಾನದ ಪ್ರಸಾರ ಬೆಳವಣಿಗೆಗೆ ಅಡೆತಡೆ ಒಡ್ಡಿದಂತೆ. ಅದನ್ನು ಕೆಲವೇ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಸೊತ್ತು ಮಾಡಿದಂತೆ.

ಹಿಂದೆ ಕೈಗಾರಿಕೆಯಲ್ಲಿ ವ್ಯಾಪಾರದಲ್ಲಿ ಲಾಭದಾಯಕವಾಗಿ ಬಳಸಬಹುದಾದ ಅವಿಷ್ಕಾರಗಳಿಗೆ ಮಾತ್ರ ಇಂತಹ ಆಸ್ತಿ ಹಕ್ಕು ಬಳಸಲಾಗುತ್ತಿತ್ತು. ವೈಜ್ಞಾನಿಕ ಸಂಶೋಧನೆಗೆ ಬಳಸಲಾಗುತ್ತಿರಲಿಲ್ಲ. ಈಗ ವೈಜ್ಞಾನಿಕ ಸಂಶೋಧನೆ ಹೆಚ್ಚೆಚ್ಚು ಕೈಗಾರಿಕೆ ವೇಗವಾಗಿ ಬಳಕೆಯಾಗುವುದರಿಂದ ಅದನ್ನು ಹಕ್ಕು ಮಾಡಲಾಗುತ್ತಿದೆ. ಎಲ್ಲಾ ಕ್ಷೇತ್ರಗಳಿಗೆ ಹಬ್ಬಿದೆ. ಕೃಷಿ, ವೈದ್ಯಕೀಯ, ರಾಸಾಯನಿಕ, ಕಲೆ ಇತ್ಯಾದಿ.

ಎಲ್ಲಾ ಜ್ಞಾನವನ್ನೂ ಖಾಸಗಿ ಆಸ್ತಿ ಆಗಲು ಬಿಟ್ಟರೆ.

ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಗೆ ತಡೆಯಲ್ಲವೇ?

ಹೌದು. ಅಮೇರಿಕನ್ ಮುಂತಾದ ಸಾಮ್ರಾಜ್ಯಶಾಹಿ ದೇಶಗಳ ಪೇಟೆಂಟ್ ಕಾನೂನು ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಗೆ ತಡೆಯೊಡ್ಡುತ್ತಿದೆ. ಈ ಪೇಟೆಂಟ್ ಕಾನೂನುಗಳ ಪ್ರಕಾರ ಗಣಿತದ ಸಮೀಕರಣಗಳು, ಪ್ರಮೇಯಗಳನ್ನು ಪೇಟೆಂಟ್ ಮಾಡಬಹುದು. ಕಂಪ್ಯೂಟರ್‌ನಲ್ಲಿ ಬಳಸುವ ನಿರ್ದಿಷ್ಟ ಗಣಿತದ ತಂತ್ರಗಳನ್ನು ಪೇಟೆಂಟ್ ಮಾಡಬಹುದು. ಒಂದು ಕಂಪ್ಯೂಟರ್ ಕಂಪನಿ ಇನ್ನೊಂದು ಕಂಪ್ಯೂಟರ್ ಕಂಪನಿಮೇಲೆ ಮೊಕದ್ದಮೆ ಹೂಡಿತು. ತಾನು ಬಳಸಿದ ಗಣಿತದ ತಂತ್ರಗಳನ್ನೇ ಬಳಸಿದೆ ಅಂತ. ಅದನ್ನು ಅಮೇರಿಕದ ಕೋರ್ಟ್ ಎತ್ತಿ ಹಿಡಿಯಿತು ಕೂಡಾ. ಇದರಿಂದಾಗಿ ಹಲವಾರು ಕಂಪನಿಗಳ ನಡುವೆ ಇಂತಹ ಕಾನೂನು ಸಮರ ಆರಂಭವಾಗಿವೆ.

ಜ್ಞಾನವನ್ನು ಆಸ್ತಿ ಹಕ್ಕು ಮಾಡುವ ಮೂಲಕ ಖಾಸಗೀಕರಣ ಜೋರಾಗುವ ಮಟ್ಟಕ್ಕೆ ಮುಟ್ಟಿದೆ. ಗ್ವಾಟೆಮಾಲದ ಸಸ್ಯವೊಂದಕ್ಕೆ ಅಮೇರಿಕದಲ್ಲಿ ಪೇಟೆಂಟ್ ನೀಡಲಾಯಿತು. ಈ ಸಸ್ಯದ ಬಗ್ಗೆ ನೂರಾರು ವರ್ಷದ ಗ್ವಾಟೆಮಾಲಾದ ಜನಕ್ಕೆ ಗೊತ್ತು. ಅದರ ವಿಶಿಷ್ಟತೆ ಬಳಕೆ ಬಗ್ಗೆ ಗೊತ್ತು ಆದರೆ ಅದು ಅಮೇರಿಕದಲ್ಲಿ ಯಾರಿಗೂ ಗೊತ್ತಿರದ್ದರಿಂದ ಕ್ವಿನ್ಸಿ ಮೆಕಿನ್ ಎಂಬುವನಿಗೆ ಅದರ ಮೇಲಿನ 'ಬೌದ್ಧಿಕ ಆಸ್ತಿ ಹಕ್ಕು' ಕೊಡಲಾಗಿದೆ. ಗ್ವಾಟೆಮಾಲನ್ನರು ಈ ಸಸ್ಯದ ಯಾವುದೇ ಬಳಕೆ ಅಮೆರಿಕದಲ್ಲಿ ಮಾಡುವಂತಿಲ್ಲ. ಮೆಕಿನ್ ಅವರು ಕೋರ್ಟಿಗೆಳೆಯಬಹುದು. ಗ್ವಾಟೆಮಾಲನ್ನರು ಪ್ಯಾರಿಸ್ ಸಮಾವೇಶ (ಪೇಟೆಂಟ್ ಬಗ್ಗೆ ಸಾಮ್ರಾಜ್ಯಶಾಹಿ ದೇಶಗಳ ಒಪ್ಪಂದ) ಒಪ್ಪಿಕೊಂಡರೆ ಅವರ ದೇಶದಲ್ಲೇ ಅದನ್ನು ಬಳಸುವಂತಿಲ್ಲ!

ಬಾರತ *TRIPS* ವಿಶೇಷ 301 ಒತ್ತಡಕ್ಕೆ ಮಣಿದರೆ ಇದು ಭಾರತದ ಬಗೆಗೂ ನಿಜವಾಗಬಹುದು. ಭಾರತದ ವಿಶಿಷ್ಟ ಸಸ್ಯ ಯಾರಾದರೂ ಪೇಟೆಂಟ್ ಮಾಡಿದರೆ ನಾವೇ ಅದನ್ನು ಬಳಸುವಂತಿಲ್ಲ. ಭಾರತದ ಗಣಿತಜ್ಞ ಸೊನ್ನೆ ಕಂಡುಹಿಡಿದಿದ್ದು ಗಣಿತ ಹಾಗೂ ಅದರ ಮೂಲಕ ವಿಜ್ಞಾನ-ತಂತ್ರಜ್ಞಾನ (ಕಂಪ್ಯೂಟರ್ ಸೇರಿದೆ) ಬೆಳವಣಿಗೆಗೆ ಕಾರಣವಾಯಿತು. 'ಸೊನ್ನೆ' ಮೇಲೆ ಪೇಟೆಂಟ್ ತೆಗೆದುಕೊಂಡರೆ ಯಾರೂ ಯಾವುದೇ ವಿಜ್ಞಾನ-ತಂತ್ರಜ್ಞಾನ ಬೆಳವಣಿಗೆಯಲ್ಲಿ ತೊಡಗುವಂತಿಲ್ಲ.

ನ್ಯೂಟನ್‌ನ ವಾರಸುದಾರರು ಆತನ ನಿಯಮಗಳನ್ನು 'ಪೇಟೆಂಟ್' ಮಾಡಿದರೆ ಯಾರೂ ನಡೆದಾಡುವಂತಿಲ್ಲ? ಯಾಕೆಂದರೆ ನಡೆಯುವಾಗ ನ್ಯೂಟನ್‌ನ ನಿಯಮಗಳನ್ನು ಬಳಸುತ್ತೇವೆ.

ಪೇಟೆಂಟ್ ಸಂಶೋಧಕನಿಗೆ ಉತ್ತೇಜನ, ಸ್ಫೂರ್ತಿ ಕೊಡಬಲ್ಲುದೆ? ಸಹಾಯ ಮಾಡಬಲ್ಲುದೆ?

ಇಲ್ಲ. ಕೆಲವೊಮ್ಮೆ ಕೆಲವು ಮಹತ್ವದ ಸಂಶೋಧನೆಗಳನ್ನು (ಅಥವಾ ಆವಿಷ್ಕಾರಗಳನ್ನು) ಎರಡು ವ್ಯಕ್ತಿಗಳು ಅಥವಾ ಗುಂಪುಗಳು ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ (ಕೆಲವು ವಾರ, ತಿಂಗಳುಗಳು ಅಂತರದಲ್ಲಿ) ಮಾಡುತ್ತವೆ. ಏಡ್ಸ್ ಪತ್ತೆ ಹಚ್ಚುವ ರಕ್ತಪರೀಕ್ಷೆ ವಿಧಾನವನ್ನು ಫ್ರಾನ್ಸ್‌ನ ಪ್ಯಾಶ್ಚರ್ ಇನ್‌ಸ್ಟಿಟ್ಯೂಟ್‌ನ ವಿಜ್ಞಾನಿಯೊಬ್ಬರು ಮೊದಲು ಕಂಡುಹಿಡಿದರು. ಅವರ ಪೇಟೆಂಟ್ ಅರ್ಜಿಯನ್ನು ನೆನೆಗುದಿಗೆ ಹಾಕಿ, ಅಮೇರಿಕದ ವಿಜ್ಞಾನಿಗೆ ಆಮೇಲೆ ಅದೇ ವಿಷಯಕ್ಕೆ ಪೇಟೆಂಟ್ ನೀಡಲಾಯಿತು. ಇದ್ಯಾವ ನ್ಯಾಯ? ಈ ಬಗ್ಗೆ ಭಾರೀ ವಿವಾದವೆದ್ದು ಅಮೇರಿಕ ಮತ್ತು ಫ್ರಾನ್ಸ್‌ನ ಅಧ್ಯಕ್ಷರು ಮಧ್ಯ ಪ್ರವೇಶ ಮಾಡಿ ಪೇಟೆಂಟ್‌ನ್ನು ಅವರಿಬ್ಬರು ಹಂಚಿಕೊಂಡಿದ್ದಾರೆ. ಎಂತಹ ನಗೆಪಾಟಲು ಅಷ್ಟು ಮಾತ್ರವಲ್ಲ. ಅಮೇರಿಕನ್ ವಿಜ್ಞಾನಿ ಬಗ್ಗೆ ಪೇಟೆಂಟ್ ಪಡೆಯಲು ಹಲವಾರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದ ಎಂದು ಆಮೇಲೆ ಗೊತ್ತಾಗಿದೆ.

ಎಷ್ಟೋ ಬಾರಿ ಯಾವುದೇ ಸಂಶೋಧನೆ ಒಬ್ಬ ವ್ಯಕ್ತಿಯದ್ದು ಅಥವಾ ಒಂದು ವೈಜ್ಞಾನಿಕ ಗುಂಪಿನದ್ದು ಎಂದು ಹೇಳುವುದು ಕಷ್ಟ. ಒಂದು ಸಂಶೋಧನೆಯಾಗಲು ಹಲವಾರು ರೀತಿಯ ಜ್ಞಾನ, ತಂತ್ರವನ್ನು ಬಳಸಲಾಗುತ್ತದೆ. ಅವೆಲ್ಲದರ ಒಟ್ಟು ಫಲ ಯಾರು ನಿಜವಾದ ಸಂಶೋಧಕರೆಂದು ಪೇಟೆಂಟ್ ಆಫೀಸು, ಕೋರ್ಟುಗಳು ಬೇಕಾಬಿಟ್ಟಿಯಾಗಿ ನಿರ್ಧರಿಸುವುದುಂಟು.

ಎಷ್ಟೋ ಸಂಶೋಧಕರಿಗೆ ಅವರ ಸಂಶೋಧನೆಯನ್ನು ಕೈಗಾರಿಕಾ ಬಳಕೆಗೆ ಬಳಸುವ ಮುಂದಿನ ಕೆಲಸದಲ್ಲಿ ತೊಡಗಲು ಸೌಕರ್ಯಗಳಿರುವುದಿಲ್ಲ. ಆದ್ದರಿಂದ ಪೇಟೆಂಟ್ ತೆಗೆದುಕೊಂಡರೂ ಅದು ಅವರ ಏಕಸ್ವಾಮ್ಯಕ್ಕೊಳಗಾಗುತ್ತದೆ. ಎಷ್ಟು ಬಾರಿ ಮೂಲ ಸಂಶೋಧಕನ ಹೆಸರು ಯಾರಿಗೂ ಗೊತ್ತಾಗುವುದೇ ಇಲ್ಲ. ಅತಿವಾಹಕತೆಯ ಸಂಶೋಧಕ ಅಮೇರಿಕದ ಹ್ಯೂಸ್ಟನ್ ವಿಶ್ವವಿದ್ಯಾಲಯದ ಪ್ರೋಫೆಸರ್ ಪೌಲ್ ಚು. ಆದರೆ ಆ ಪೇಟೆಂಟ್‌ಟನ್ನು ಡೂಪಾಂಟ್ ಕೊಂಡುಕೊಂಡಿದೆ. ಈಗ ಪ್ರೋಫೆಸರ್ ಅತಿವಾಹಕತೆ ಬಗ್ಗೆ ಸಂಶೋಧನೆ ಮುಂದುವರೆಸಬೇಕಾದರೆ ಡೂಪೋಂಟ್ ಅನುಮತಿ ಪಡೆಯಬೇಕು.

ಎಷ್ಟು ಸಂಶೋಧಕರು ಈಗಲೂ ಹಲವು ಮಹತ್ವದ ಸಂಶೋಧನೆಗಳಿಗೆ ಪೇಟೆಂಟ್ ತೆಗೆದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಇನ್ನೆಷ್ಟೋ ಸಂಶೋಧಕರು ಪೇಟೆಂಟ್ ಹಾವಳಿಯಿಂದಾಗಿ ಭಾರಿ ಗುಟ್ಟಾಗಿ ಕೆಲಸಮಾಡುತ್ತಿದ್ದಾರೆ. ಕೆಲವೊಮ್ಮೆ ಪ್ರತಿಸ್ಪರ್ಧಿಗಳನ್ನು ಹಿಂದೆ ಹಾಕಲು ನಿಜವಾದ ಸಂಶೋಧನೆಯಾಗುವ ಮೊದಲು ಬಾರಿ ಪುರಾವೆ ಸೃಷ್ಟಿಸುವುದೂ ಉಂಟು.

ಸಂಶೋಧನೆಗೆ ಪೇಟೆಂಟ್ ಲಾಭವೇ ಸ್ಫೂರ್ತಿ ಎನ್ನುವುದು ಬಹಳಮಟ್ಟಿಗೆ ತಪ್ಪಾದೀತು. ಲಾಭದಾಸೆಗೆ ಬಾಯಿಬಿಡುವವರು ಮಹತ್ವದ ಸಂಶೋಧನೆ ಮಾಡಲಾರರು.

ಮೂರನೇ ಜಗತ್ತಿನ ಸಂಶೋಧಕರಿಗೆ *TRIPS* ನಿಂದ ಹಕ್ಕು ರಕ್ಷಣೆ ಸಿಕ್ಕೀತೆ?

TRIPS ಅಥವಾ ಅಮೇರಿಕ ಮುಂತಾದ ದೇಶಗಳ ಸಾಮ್ರಾಜ್ಯಶಾಹಿ ಪೇಟೆಂಟ್ ಕಾನೂನುಗಳು ಮೂರನೇ ಜಗತ್ತಿನ ಸಂಶೋಧಕರಿಗೆ ಕಂಪನಿಗಳ ಹಿತಾಸಕ್ತಿ ಕಾಪಾಡಲಾರವು. ಸಾಮ್ರಾಜ್ಯಶಾಹಿ ದೇಶಗಳ ದೈತ್ಯ ಕಂಪನಿಗಳು ಇತರ ದೇಶಗಳು ವ್ಯಕ್ತಿಗಳ, ಕಂಪನಿಗಳ ಪೇಟೆಂಟ್‌ನ್ನು ಕದ್ದದ್ದುಂಟು. ಪೇಟೆಂಟ್ ಉಲ್ಲಂಘಿಸಿ ಮಾಡಿದ್ದುಂಟು. ಆದರೆ ಪೇಟೆಂಟ್ ಹೊಂದಿರುವ ವ್ಯಕ್ತಿಗಳು, ಸಣ್ಣ ಕಂಪನಿಗಳು ಕೋರ್ಟಿಗೆ ಹೋಗಿ ನ್ಯಾಯ ದೊರಕಿಸಲು ಆಗಿಲ್ಲ. ಯಾಕೆಂದರೆ ಅಮೆರಿಕ ಸೇರಿದಂತೆ ಸಾಮ್ರಾಜ್ಯಶಾಹಿ ದೇಶಗಳಲ್ಲಿ ಕಾನೂನು ಹೋರಾಟ ಭಾರಿ ದುಬಾರಿ-ಸಣ್ಣ ಕಂಪನಿಗಳು ಮುಳುಗಿ ಹೋಗಬಹುದು. ಎಷ್ಟೋ ಬ್ರಿಟಿಷ್ ಕಂಪನಿಗಳು ಅಮೇರಿಕನ್ ಕಂಪನಿಗಳು ಪೇಟೆಂಟ್ ಉಲ್ಲಂಘಿಸುತ್ತಿವೆ. ಆದರೆ ದುಬಾರಿಯಾದ್ದರಿಂದ ಕೋರ್ಟಿನಲ್ಲಿ ನ್ಯಾಯ ಪಡೆಯಲಾಗುತ್ತಿಲ್ಲ ಎಂದು ಹೇಳಿಕೊಂಡಿವೆ.

ಇನ್ನೂ ಹಲವು ಸನ್ನಿವೇಶಗಳಲ್ಲಿ ತಮ್ಮ ಜತೆ ಪೈಪೋಟಿಯಲ್ಲಿರುವ ಸಣ್ಣ ಕಂಪನಿಗಳು ಮೇಲೆ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಸುಳ್ಳು ಸುಳ್ಳೇ ಪೇಟೆಂಟ್ ಉಲ್ಲಂಘನೆ ಆಪಾದನೆ ಮಾಡಿ ಕೇಸು ಹಾಕುತ್ತವೆ. ಕೇಸಿನ ವೆಚ್ಚ ತಾಳಲಾರದೆ ಈ ಕಂಪನಿಗಳು ಮುಳುಗುವುದುಂಟು. ಭಾರತದ ಬಜಾಜ್ ಮೇಲೆ ಇಟಲಿಯ ಪಿಯಾಗಿಯೊ ಈ ರೀತಿ ಸುಳ್ಳು ಆಪಾದನೆ ಹಾಕಿದ್ದುಂಟು.

ಡಂಕೆಲ್ ಮಹಾ[illegible]

ಹಾ[illegible]

ಕೇಂದ್ರ ಸರ್ಕಾರ[illegible] ಈಗ ಹಾಲಿನ ಕ್ಷೇತ್ರ[illegible] ಆರಂಭಿಸಿದೆ. ಕೇಂದ್ರ ಸ[illegible] ಕೈಗಾರಿಕೀಕರಣದ ನೀತಿ [illegible] ಹಾಲಾಹಲದ ಅಲೆಯನ್ನು[illegible] ಎಂದು ದಕ್ಷಿಣ ಕನ್ನಡ ಜಿಲ್ಲಾ[illegible] ಉತ್ಪಾದಕರ ಒಕ್ಕೂಟ ಆತ[illegible]

ಹಾಲು ಮತ್ತು ಹಾ[illegible] ಸಂಸ್ಕರಣಾ ಘಟಕಗಳ [illegible] ಸರ್ಕಾರ ಮುಕ್ತ ಅವಕಾ[illegible] ಮೂಲಕ ಬಹುರಾಷ್ಟ್ರೀ[illegible] ಸಾರ್ವಭೌಮತ್ವಕ್ಕೆ ದಾರಿ [illegible]

ಭಾರತದ ಕ್ಷೀರಜಾ[illegible] ಸೆಳೆದಿದೆ. 45 ವರ್ಷಗ[illegible] ದೇಶದಾದ್ಯಂತ 80 [illegible] ಹೊಂದಿರುವ 60 ಸಾವಿರ[illegible] ಕರ ಸಂಘದ ಅಡಿಪಾಯ [illegible] ಈ ನೀತಿಯಿಂದಾಗಿ ಅಲುಗ[illegible]ದೆ.

ಬೆಂಗಳೂರಿನಿಂದ [illegible] ಡಬ್ಬಗಳ ಮೂಲಕ ಹಾ[illegible] ಮಾಡುವುದರ ಮೂಲಕ[illegible] ದೊಡ್ಡ ಸಹಕಾರಿ ವಿದಾ[illegible] ಪಾತ್ರವಾಗಿದ್ದ ಈ ಸಹಕಾ[illegible] ಕಳೆಗುಂದಿಸಲು ನೇಪಥ್ಯ[illegible] ಎಂದು ಒಕ್ಕೂಟ ಆಪಾದಿ[illegible]

ಕೇಂದ್ರ ಸರ್ಕಾರನೂ[illegible] ಯನ್ನು ಹೊಂದುವಂತೆ ಒ[illegible] ಗಳೇ ಮತ್ತೆ ಈಗ 'ಹಾಲು [illegible] ನ್ನಗಳ ಆದೇಶ-92'ನ್ನು ([illegible] ರದ್ದು ಮಾಡಲು ಒತ್ತಡ [illegible] ಸರ್ಕಾರದ ಕಾರ್ಯದರ್ಶಿ[illegible]

ಒಡೆಯರ ಮುಂದೆ. ಭಾರತದ ವ್ಯಾಪಾರಿಗಳ ಆಟ ಏನು ನಡೆದೀತು? ಭಾರತದ ವ್ಯಾಪಾರಿಗಳ ಹಿಡಿತಕ್ಕೆ ಸಿಕ್ಕಿ ಬಿಡಿಸಿಕೊಳ್ಳಲಾರದೆ, ಅವರಿಗೆ ಜಮೀನು ಒತ್ತೆ ಹಾಕಿ ನರಳುವ ನಮ್ಮ ರೈತನ ಗತಿ ಏನು? ಈ ಮಹಾನ್ ಕಂಪನಿಗಳ ಬೃಹತ್ ಜಾಲದಲ್ಲಿ ಸಿಂಹದ ಕೈಗೆ ಸಿಕ್ಕ ಇಲಿಯಂತಾಗುವುದಿಲ್ಲವೆ?

ಇನ್ನು ವಿದೇಶಕ್ಕೆ ಬೇಕಾಗುವ ವಸ್ತುಗಳನ್ನು ಮಾತ್ರ ನಾವು ಬೆಳೆದು, ನಮಗೆ ಬೇಕಾದ ಆಹಾರ ಧಾನ್ಯಗಳನ್ನು ವಿದೇಶಗಳಿಂದ ತರಿಸಿಕೊಳ್ಳಲಾರಂಭಿಸಿದ ಮೇಲೆ ಏನಾದರೂ ನೆವ ತೆಗೆದು ಭಾರತ ಮೇಲೆ ಸೂಪರ್ 301 ದಿಗ್ಬಂಧನ, ಭಾರತದ ಕೃಷಿ ವಸ್ತುಗಳನ್ನು ಯಾರೂ ಕೊಳ್ಳಬಾರದು ಅವರಿಗೆ ಯಾರೂ ಧಾನ್ಯಗಳನ್ನು ಮಾರಬಾರದು ಎಂದರೆ ಆಗ ಭಾರತದ ಗತಿ, ಇಲ್ಲಿಯ ರೈತರ ಎಲ್ಲಾ ಜನತೆಯ ಗತಿ.

1960 ರ ದಶಕದಲ್ಲಿ, ಭಾರತಕ್ಕೆ ತೀವ್ರ ಆಹಾರದ ಕೊರತೆಯಿದ್ದು, ಕ್ಷಾಮ ಬಿದ್ದು ನರಳುತ್ತಿರುವಾಗ ಪಿ.ಎಲ್. 480ರ ಗೋಧಿಯನ್ನು ಪಡೆಯುವ ಸಂಕಟವನ್ನು ನಮ್ಮ ದೇಶ ಅನುಭವಿಸಿಲ್ಲವೆ? ಒಂದೊಂದು ಗೋಧಿ ತುಂಬಿದ ಹಡಗು ಅಮೇರಿಕವನ್ನು ಬಿಡುವ ಮೊದಲು ಒಂದೊಂದು ಶರತ್ತು ಹಾಕಿ ಭಾರತದ ಕತ್ತು ಹಿಸುಕಿ ಗೋಧಿ ಕೊಟ್ಟ "ದಯೆ"ಯನ್ನು ಭಾರತ ಮರೆತಿದೆಯೇ? ಮತ್ತೆ ಭಾರತದ ಸ್ವಾತಂತ್ರ್ಯವನ್ನೇ ಮಾರಿಕೊಳ್ಳುವ ಪರಿಸ್ಥಿತಿ ಬರುವುದಿಲ್ಲವೇ?

ಈಗಲೂ ಕ್ಯೂಬಾದ ಸಕ್ಕರೆ ಕೊಳ್ಳಲು, ಇರಾಕಿಗೆ ಆಹಾರ ಮಾರಲು ಹಾಕಿರುವ ದಿಗ್ಬಂಧನಗಳು ನಾವು ಎಂತಹ ಬಲೆಗೆ ಸಿಲುಕುತ್ತೇವೆಂಬ ಸತ್ಯವನ್ನು ಸಾಬೀತು ಮಾಡುತ್ತಿಲ್ಲವೇ?

ಇಂದು ಟಿವಿಗಳಲ್ಲಿ, ರೇಡಿಯೋಗಳಲ್ಲಿ ಪತ್ರಿಕೆಗಳಲ್ಲಿ ಸೋಮಾಲಿಯಾ ಅನುಭವಿಸುತ್ತಿರುವ ಪರಿಸ್ಥಿತಿಯನ್ನು ನೋಡಿದ್ದೇವೆ. ಅಲ್ಲಿನ ಜನ ಅನ್ನ ಅನ್ನ ಎಂದು ಕಂಗಾಲಾಗಿ ಕೋಟಿಗಟ್ಟಲೆ ಜನ ಕೂಳಿಲ್ಲದೆ ಕೇವಲ ಎಲುಬು ಚಕ್ಕಳವಾದ ಕಂದಮ್ಮಗಳ ಕರುಣಾಜನಕ ಕಥೆಯನ್ನು ಕೇಳಿದ್ದೇವೆ. ಇಂತಹುದೇ ಪರಿಸ್ಥಿತಿ ಭಾರತಕ್ಕೆ ಬರು...ನ ದೂರವಿಲ್ಲ. ಇಂದು ಸೋಮಾಲಿಯಾ ನಾಳೆ ಇಡೀ ಮೂರನೇ ಜಗತ್ತು. ಇಂದು ಕ್ಯೂಬಾ ನಾಳೆ ಭಾರತ ಎಂಬ ಗಂಭೀರ ಸ್ಥಿತಿಯನ್ನು ನಾವು ತಿಳಿಯಬೇಕಾಗಿದೆ.

ರಾತ್ರಿ ಕಂಡ ಬಾವಿಗೆ ಹಗಲು ಬೀಳಲು ಹೊರಟಿರುವ ಭಾರತ ಸರ್ಕಾರದ ಭಾರತದ ಸ್ವಾತಂತ್ರ್ಯ ಮಾರಿತದ ಬಗ್ಗೆ ಎಚ್ಚರಾಗಬೇಕಾಗಿದೆ. ಡಂಕೆಲ್ ಪ್ರಸ್ತಾವಗಳನ್ನು ಗಾಳಿಗೆ ತೂರಿ ನಮ್ಮ ಸ್ವಾತಂತ್ರ್ಯ ಸಾರ್ವಭೌಮತೆಗಳನ್ನು ಉಳಿಸಿಕೊಳ್ಳಬೇಕಾಗಿದೆ.

...ರಿ ಲೇಖನಮಾಲೆ : 5

...ನ ಕ್ಷೇತ್ರದಲ್ಲಿ ...ಲಾಹಲ

...ಕ ನೀತಿ ...ರ್ಗ... ಉದಾರ ...ಕ್ಷೇತ್ರದಲ್ಲಿ ...ಹಾಕುತ್ತಿದೆ ...ರಿ ಹಾಲು ...ವಡಿಸಿದೆ. ...ರ್ಥಗಳ ...ಗೆ ಕೇಂದ್ರ ...ಸುವುದರ ...ಂಪನಿಗಳ ...ದ ಗಮನ ...ದಿಂದಾಗಿ ...ದಸ್ಯರನ್ನು ಉತ್ಪಾದ ...ರ್ಕಾರದ ...ಆರಂಭಿಸಿ ...ಗಿ ರೈಲು ...ಬರಾಜು ...ದ ಅತಿ ಹೆಮ್ಮೆಗೆ ...ಾಸವನ್ನು ...ಾಗುತ್ತಿದೆ ...ಕನೀತಿ ...ದ ಶಕ್ತಿ ...ಸ ಉತ್ಪ ...(...-92) ಕೇಂದ್ರ ...ಈಗಾ ...ಇದು

ರದ್ದಾದರೆ ದೇಶದ ಬಹುದೊಡ್ಡ ಶಕ್ತಿಯಾದ ಸಹಕಾರದ ಆಂದೋಲನಕ್ಕೆ ದುರಂತ ಕಟ್ಟಿಟ್ಟ ಬುತ್ತಿ ಎಂದು ಒಕ್ಕೂಟ ಆತಂಕ ವ್ಯಕ್ತಪಡಿಸಿದೆ.

ಕಂದಮ್ಮಗಳಿಗೆ ಹಾಲು ಸಿಗದೇ ಕೇವಲ ಚಾಕಲೇಟುಗಳನ್ನು ತುರುಕಲು ನೆಸ್ಲೆ, ದಾಲ್ಮಿಯಾ, ಗ್ಲಾಕ್ಸೋ, ಪೋರಮೋಸ್ಟ್ ಕಂಪನಿಗಳು ಪ್ರಯತ್ನಿಸುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೆ ಮಣಿದು ಈ ಆದೇಶವನ್ನು ರದ್ದುಗೊಳಿಸಿದರೆ ಒಕ್ಕೂಟ ಆಂದೋಲನದ ಹಾದಿ ಹಿಡಿಯುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ದೇಶದಲ್ಲಿ ಈಗ ಪ್ರತೀದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದಿಸಲಾಗುತ್ತಿದೆ. 1,500 ಕೋಟಿ ರೂ.ಗಳ ಕ್ಷೀರಧಾರ ಯೋಜನೆಯಿಂದ ರೈತರು ವಾರ್ಷಿಕ 1,200 ಕೋಟಿರೂ ಆದಾಯ ಪಡೆಯುತ್ತಿದ್ದಾರೆ. ಕರ್ನಾಟಕ ಈ ವರ್ಷ ಪ್ರತೀದಿನ 14.68 ಲಕ್ಷ ಲೀಟರ್ ಹಾಲು ಉತ್ಪಾದಿಸಿ ದಾಖಲೆ ಸ್ಥಾಪಿಸಿದೆ.

ಹೈನು ಉತ್ಪಾನೆಯಲ್ಲಿ ಇಡೀ ದೇಶದಲ್ಲಿ ಭಾರತಕ್ಕೆ ಎರಡನೇ ಸ್ಥಾನ. ಹಾಲು ಇಲ್ಲದ ಕಲ್ಕತ್ತಾ, ದೆಹಲಿ, ಮುಂಬೈ, ಮದ್ರಾಸ್‌ಗೆ ಹಾಲು ಸರಬರಾಜು ಮಾಡಲು ಈ ಸಹಕಾರೀ ಆಂದೋಲನದಿಂದ ಸಾಧ್ಯವಾಗಿದೆ. ಈ ಕ್ಷೇತ್ರಕ್ಕೆ ಬಹುರಾಷ್ಟ್ರೀಯ ಕಂಪನಿಗಳೇನಾದರೂ ಕಾಲಿಟ್ಟರೆ, ಮೊದಮೊದಲು ಉತ್ಪಾದಕರಿಗೆ ಉದಾರ ಆಸೆ ತೋರಿಸಿ ನಗರವಾಸಿಗಳಿಗಾಗಿ ಚಾಕಲೇಟ್ ಉತ್ಪಾದಿಸಿ ಮಕ್ಕಳನ್ನೂ ಹಾಲಿನಿಂದ ವಂಚಿಸಿ ವಿದೇಶಿ ವಿನಿಮಯದ ಸೋಗಿನಲ್ಲಿ ತಮ್ಮ ಜೋಬು ಭರ್ತಿಮಾಡಿಕೊಂಡು ಓಡುತ್ತಾರೆ. ದಕ್ಷಿಣ ಅಮೇರಿಕಾದ ಇರುಗ್ವೆ ಈಗಾಗಲೇ ಈ ದುರಂತಕ್ಕೆ ಸಾಕ್ಷಿಯಾಗಿದೆ ಎನ್ನುತ್ತಾರೆ ಒಕ್ಕೂಟದ ಅಧ್ಯಕ್ಷರು.

ಮಾತಿಲ್ಲದಂತಾದರು ಶ್ರೀಮಾನ್ ಮನಮೋಹನಸಿಂಗರು

ಸಂಯುಕ್ತ ಸಂಸದೀಯ ಸಮಿತಿಯ ಮುಂದೆ ಕೇಂದ್ರ ಹಣಕಾಸು ಸಚಿವ ಡಾ. ಮನಮೋಹನ್‌ಸಿಂಗರು ಸಾಕ್ಷ್ಯ ನೀಡಿದ್ದು ಬಹಳ ತಮಾಷೆಯಾಗಿತ್ತು. ಹಿಂದೆ ಇದೇ ಅರ್ಥ ಸಚಿವರು ಶೇರು ಪೇಟೆಯ ಧಾರಣೆಯ ಏರಿಕೆಗೆ ತಮ್ಮ ಉದಾರ ಆರ್ಥಿಕ ನೀತಿಯೇ ಕಾರಣವೆಂದಿದ್ದರು.

ಆದರೆ ಸಂಸದೀಯ ಸಮಿತಿಯ ಮುಂದೆ ನಾನು ಹಾಗೇ ಹೇಳಿರಲೇ ಇಲ್ಲವೆಂದರು. ಈಗ ಸಮಿತಿಯ ಸದಸ್ಯರು ಅವರ ಖಾತೆಯ ಹಿಂದಿನ ಸಹಾಯಕ ಸಚಿವ ರಾಮೇಶ್ವರ ಠಾಕೂರರು ಸಂಸತ್ತಿನಲ್ಲಿ ನೀಡಿದ ಹೇಳಿಕೆ ತೋರಿದರು. ಮನಮೋಹನಸಿಂಗರು ತೊದಲುತ್ತ "ಅದು ಚುಕ್ಕೆ ಪ್ರಶ್ನೆಯಾಗಿರಲಿಲ್ಲ ಆದ್ದರಿಂದ ನನ್ನ ಗಮನಕ್ಕೆ ಬರಲಿಲ್ಲ" ಎಂದರು.

ಸಮಿತಿಯ ಸದಸ್ಯರು ಡಾ. ಸಿಂಗರೇ ಸಂಸತ್ತಿನಲ್ಲಿ ನೀಡಿದ ಹೇಳಿಕೆಯಲ್ಲೂ ಈ ಮಾತು ಇದ್ದದ್ದನ್ನು ತೋರಿದರು. ಆಗ ಉತ್ತರವಿಲ್ಲದಾದರು ಹಣಕಾಸು ಸಚಿವರು.

ಶೇರು ಹಗರಣಕ್ಕೆ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕುಗಳು ಇವೆಲ್ಲ ಕಾರಣ ಎಂದು ಕೂಗಾಡಿದರು. ಆದರೆ ಜವಾಬ್ದಾರಿ ಎದ್ದು ಕಾಣುತ್ತಿದೆ ಅಲ್ಲವೇ?

ಇಂತಹದೇ ನಗೆಟಲಿಗೆ ಕೇಂದ್ರ ಆರೋಗ್ಯ ಮಂತ್ರಿ ಶಂಕರಾನಂದರೂ ಒಳಗಾಗಬೇಕಾಯಿತು. ತೈಲ ಉದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿದ್ದ ಅಂದಿನ ಪೆಟ್ರೋಲಿಯಂ ಮಂತ್ರಿಗಳು ಸಂಸದೀಯ ಸಮಿತಿ ಮುಂದೆ ಹೇಳಿದ್ದೇನು ಗೊತ್ತೆ?

"ಸೆಕ್ಯೂರಿಟಿಗಳ ವ್ಯವಹಾರದಲ್ಲಿ ಹಗರಣ ನಡೆದಿದೆ. ಅದಕ್ಕೂ ಸಾರ್ವಜನಿಕ ಉದ್ಯಮಗಳ ಹಣ ಹೂಡಿಕೆಗೂ ಸಂಬಂಧವಿದೆಯೆಂದು ನನಗೆ ಗೊತ್ತಿರಲೇ ಇಲ್ಲ. ಆದ್ದರಿಂದ ಎಂದಿನಂತೆ ಹಿಂದಿನ ರೀತಿಯಲ್ಲೇ ಕೆನರಾ ಬ್ಯಾಂಕಿನಲ್ಲಿ ಹಣ ತೊಡಗಿಸಿದ್ದು."


ಅವರ ಮಗ ಕ್ಯಾನ್‌ಫಿನಾದಲ್ಲಿ ನಿರ್ದೇಶಕರಾಗಿದ್ದು ಹೀಗೆ ಹಣಹೂಡಲು ಕಾರಣ ಎಂಬುದನ್ನು ಅವರು ಒಪ್ಪದಿದ್ದರೂ ವಿಷಯ ಬಟಾಬಯಲಲ್ಲವೆ?

ಸಂಸದೀಯ ಸಮಿತಿಗೂ ಸುಳ್ಳು ಹೇಳಿದ ಗೋಲ್ಡ್‌ಸ್ಟಾರ್‌ನ ಮ್ಯಾನೇಜಿಂಗ್ ಡೈರೆಕ್ಟರ್

ನಮ್ಮ ಪ್ರಧಾನಿ ನರಸಿಂಹರಾಯರ ಮಗ ಪ್ರಭಾಕರ ರಾವ್ ಡೈರೆಕ್ಟರ್ ಆಗಿರುವ ಕಂಪನಿ ಇದು. ಈ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್ ಕೃಷ್ಣ ಮೋಹನ್ 3 ಕೋಟಿ ರೂಪಾಯಿಗಳ ಸಾಲವನ್ನು ಹಿತೇನ್ ದಲಾಲ್ ಮೂಲಕ ಪಡೆದಿದ್ದ ಎಂದು ಹೇಳಲಾಗಿತ್ತು. ಇದು ಈತನ ವೈಯುಕ್ತಿಕ ಸಾಲ ಎಂದೂ ಹೇಳಿ ತನ್ಮೂಲಕ ಪ್ರಧಾನಿ ಮಗನ ಕೈ ಇಲ್ಲವೆಂದೇ ಹೇಳಲಾಗಿತ್ತು ಈಗ.

ಈಗ ಸಿಬಿಐನ ತನಿಖೆಯ ಮೂಲಕ ಈ ಹಣ ಕಂಪೆನಿಗೇ ಹೋಗಿದೆ ಎಂದು ಸ್ಪಷ್ಟವಾಗಿದೆ. ಕೃಷ್ಣ ಮೋಹನ್ ಸಂಸದೀಯ ಸಮಿತಿಗೆ ಸುಳ್ಳು ಹೇಳಿದ್ದಾರೆಂಬುದು ಸ್ಪಷ್ಟ.

ಸಂಸತ್ತಿನ ಹಕ್ಕು ಚ್ಯುತಿ ಮಾಡಿದಂತಾಗಿದೆ ಗೋಲ್ಡ್‌ಸ್ಟಾರ್‌ಗೆ ಈಗ ಸಂಸದೀಯ ಸಮಿತಿ ಈ ವ್ಯವಹಾರಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಕೇಳಿದೆ.



ನರಸಿಂಹರಾವ್ ಸರಕಾರದ 23ನೇ ತಿಂಗಳಲ್ಲಿ

ಕೊನೆಗೂ ಹಿತೇನ್ ದಲಾಲ್‌ಗೆ ಶಿಕ್ಷೆ

ಶೇರು ಹಗರಣದ ಮುಖ್ಯ ಪಾತ್ರದಾರ ಹಿತೇನ್ ದಲಾಲ್‌ಗೆ ಈ ಹಗರಣದ ಮೊಕದ್ದಮೆಗಳ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಲಯ ಒಂದು ವರ್ಷದ ಕಠಿಣ ಶಿಕ್ಷೆ ವಿಧಿಸಿದೆ. ರಾಜಕಾರಣಿಗಳು, ಬ್ಯಾಂಕರುಗಳು ದಲ್ಲಾಳಿಗಳು ನಡುವೆ ಸಂಬಂಧಗಳನ್ನು ಬೆಳೆಸಿ ಹಗರಣದ ಜಾಲವನ್ನೇ ಹೊಸೆದ ಈತನಿಗೆ ಒಂದು ಮೊಕದ್ದಮೆಯಲ್ಲಾದರೂ ಶಿಕ್ಷೆ ಆಗಿರುವುದು ಸಂತೋಷದಾಯಕವಲ್ಲವೆ? ಉಳಿದ ಮೊಕದ್ದಮೆಗಳ ವಿಚಾರಣೆಯು ನಡೆದು ಇನ್ನೂ ಹೆಚ್ಚಿನ ಶಿಕ್ಷೆ ಆತನಿಗೆ ದೊರೆಯಬೇಕು. ಆದರೆ ಈತನ ಜೊತೆಗೆ ಕೈ ಮಿಲಾಯಿಸಿ ಸಾರ್ವಜನಿಕ ಹಣ ಕೊಳ್ಳೆ ಹೊಡೆದ ಇತರ ಖದೀಮರಿಗೆ?

ಬೆಲೆಯೇರಿಕೆಯೆಲ್ಲ ಬಜೆಟ್ಟಿನ ಹೊರಗೆ

ಅತ್ಯಂತ ಸುಂದರ ಬಜೆಟ್ ಎಂದೆಲ್ಲ ಹೊಗಳಿಸಿಕೊಂಡ ಮನಮೋಹನಸಿಂಗರ ಬಜೆಟ್ ನೀತಿ ಈಗಲಾದರೂ ತಿಳಿಯಿತೆ? ಸಕ್ಕರೆ ಲೇಪಿತ ಗುಳಿಗೆಯಂತೆ ಬಜೆಟ್ ಬೆಲೆಯೇರಿಕೆಯನ್ನು ತೋರಿಸಿರಲೇ ಇಲ್ಲ. ಈಗ ಒಮ್ಮೆಲೆ ಟೆಲಿಫೋನ್ ದರಗಳನ್ನು ಸರಕಾರ ಹೆಚ್ಚಿಸಿದೆ. ಕಳೆದ ಒಂದು ವರ್ಷದಲ್ಲಂತೂ ಸರ್ಕಾರ ಇದೇ ನೀತಿ ಅನುಸರಿಸಿದೆ. ಬಜೆಟ್‌ನ ಹೊರಗೇ ಬೆಲೆಗಳನ್ನು ಏರಿಸಿರುವುದು ಇದಕ್ಕೆ ಸರ್ಕಾರ ನೀಡಿರುವ ಕಾರಣ ಗೊತ್ತೆ? ಗ್ರಾಮೀಣ ಪ್ರದೇಶಗಳಿಗೆ ಟೆಲಿಫೋನ್ ಸೌಲಭ್ಯ ಒದಗಿಸಬೇಕು. ಆದ್ದರಿಂದ ಬೆಲೆಯೇರಿಕೆ.

ಇನ್ನೂ ಯಾವ ಯಾವ ಬೆಲೆಯೇರಿಕೆ ಸರ್ಕಾರದ ಲಿಸ್ಟಿನಲ್ಲಿದೆಯೋ?

ನಿರ್ಗಮನ ನೀತಿ: ಬಡವರಿಗಾಗಿ

ಅಂದರೆ ಬಡವರ ಒಳ್ಳೆಯದಕ್ಕಲ್ಲ. ಬಡಕಾರ್ಮಿಕರನ್ನು ಮನೆಗೆ ಕಳುಹಿಸಲು ಕೇಂದ್ರ ಕಾರ್ಮಿಕ ಮಂತ್ರಿ ಪಿ.ಎ. ಸಂಗ್ಮಾ ಆಗಲೇ ಹೇಳಿಕೆ ನೀಡಿದ್ದಾನೆ. ಯಾವುದೇ ಕಾರ್ಖಾನೆ ಈಗ ಪೂರ್ವಾನುಮತಿ ಇಲ್ಲದೇ ಮುಚ್ಚಬಹುದು ಅಂದರೆ ಇಲ್ಲಿಯವರೆಗೆ ಆ ರೀತಿ ಮುಚ್ಚುತ್ತಿರಲಿಲ್ಲವೆಂದಲ್ಲ. ಉದ್ಯಮಿಗಳಿಗೆ ಕಾರ್ಮಿಕರ ಜೀವದ ಜೊತೆಗೆ ಚೆಲ್ಲಾಟವಾಡುವ ಹಲವು ತಂತ್ರಗಳು ಗೊತ್ತು.

ಆದರೆ ಈಗ ಅಂತಹ ಕೆಟ್ಟ ಕೆಲಸಗಳಿಗೆ ಸರ್ಕಾರಿ ಅನುಮತಿ ಇದೆ ಎಂಬ ವಿಷಯವನ್ನು ಈ ಮಂತ್ರಿ ಸ್ಪಷ್ಟಪಡಿಸಿದ್ದಾನೆ.

ದೇಶೀ ಬಂಡವಾಳಿಗರು ಮತ್ತು ವಿದೇಶಿ ಕಂಪನಿಗಳು ಇದನ್ನು ಕೇಳುತ್ತಲೇ ಇದ್ದವು. ನಮಗೆ ಬೇಕಾದಾಗ ಕಾರ್ಮಿಕರನ್ನು ಮನೆಗೆ ಕಳುಹಿಸುವ ಅಧಿಕಾರ ಕೊಡಿ ಎಂದು. ಸರ್ಕಾರ ಈಗ ಇಂತಹ ಕಾನೂನನ್ನು ತರುವ ಸೂಚನೆ ಕೊಡುತ್ತಿದೆ.

ಎಷ್ಟೆಂದರೂ ಸರ್ಕಾರದ್ದು ಉದಾರ ಆರ್ಥಿಕ ನೀತಿ ಅಲ್ಲವೇ?

ಮುಚ್ಚುತ್ತಿರುವ ರಸಗೊಬ್ಬರ ಕಾರ್ಖಾನೆಗಳು

ನಮ್ಮ ದೇಶದ ಜನಸಂಖ್ಯೆ ಗೊತ್ತೆ? 88 ಕೋಟಿ ಈ ಎಲ್ಲರಿಗೂ ಕನಿಷ್ಠ ಬಟ್ಟೆ, ಆಹಾರ ದೊರತರೆ ಎಲ್ಲರೂ ಮನುಷ್ಯರಂತೆ ಬದುಕಬಹುದು.

ಈ ವರ್ಷದ ನಮ್ಮ ಆಹಾರ ಧಾನ್ಯ ಉತ್ಪಾದನೆ? 177 ಮಿಲಿಯ ಟನ್ನುಗಳು. ದಾಖಲೆ ಉತ್ಪಾದನೆ. ಇದು ಸರಿ ಆದರೆ ಬರುವ ದಿನಗಳು ಎಷ್ಟು ಕಷ್ಟದಾಯಕ ಎಂಬುದು ಕೆಳಗಿನ ಸುದ್ದಿಯಿಂದ ಗೊತ್ತಾಗುತ್ತದೆ.

ಕೃಷಿಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ರಸಗೊಬ್ಬರ ಅತ್ಯಾವಶ್ಯಕ. ಆದರೆ ಸರ್ಕಾರದ ನೀತಿಗಳಿಂದಾಗಿ ಮುಂಬರುವ ದಿನಗಳಲ್ಲಿ ರಸಗೊಬ್ಬರ ಉತ್ಪಾದನೆ ಬಹಳ ಕಡಿಮೆಯಾಗಲಿದೆ ಕಾರಣ?

ಒಂದೇ ಒಂದು ತಿಂಗಳಲ್ಲಿ ಏಳು ರಸಗೊಬ್ಬರ ಉತ್ಪಾದನಾ ಘಟಕಗಳು ಮುಚ್ಚಿವೆ.

ಮಂಗಳೂರು ರಸಗೊಬ್ಬರ ಕಾರ್ಖಾನೆ	ಮಾರ್ಚ್ 9,1993
ಸ್ಪಿಕ್, ಟ್ಯುಟಿಕೋರಿನ್	ಮಾರ್ಚ್ 20,1993
ಜುವಾರಿ ಆಗ್ರೋ ಗೋವಾ	ಮಾರ್ಚ್ 28,1993
ಇಫ್ಕೊ ಕಾಂಡ್ಲಾ *	ಮಾರ್ಚ್ 29, 1993
ಗೋದಾವರಿ ರಸಗೊಬ್ಬರ ಕಾರ್ಖಾನೆ, ಕಾಕಿನಾಡ	ಮಾರ್ಚ್ 31,1993
ಪರದೀಪ್ ಫಾಸ್ಫೇಟ್ *	ಏಪ್ರಿಲ್ 1,1993
ಮದ್ರಾಸ್ ರಸಗೊಬ್ಬರ ಕಾರ್ಖಾನೆ *	ಏಪ್ರಿಲ್ 2,1993

(* ಇವು ಸಾರ್ವಜನಿಕ ವಲಯದಲ್ಲಿವೆ.)

ಹೀಗೆ ರಸಗೊಬ್ಬರದ ಉತ್ಪಾದನೆಯೇ ಇಲ್ಲವಾದರೆ ನಮ್ಮ ಕೃಷಿ ಬೆಳೆವುದಾದರೂ ಹೇಗೆ?

ಡೊಗ್ಗು ಸಲಾಮು ಹಾಕಿದರೂ ಒದ್ದರು

ಅಮೇರಿಕ ಭಾರತದ ಮೇಲೆ ಸೂಪರ್ 301 ಎಂಬ ಅಸ್ತ್ರ ಬಳಸಿದೆ. ಇದರ ಪ್ರಕಾರ ಭಾರತದಿಂದ ಅಮೇರಿಕಕ್ಕೆ ರಫ್ತಾಗುವ ಕೆಲವು ಸರಕುಗಳ ಮೇಲೆ ಇದ್ದ ಸುಂಕ ವಿನಾಯಿತಿಯನ್ನು ತೆಗೆಯಲಾಗುತ್ತದೆ. ಅಂದರೆ ನಮ್ಮ ರಫ್ತು ಕಡಿಮೆಯಾಗುತ್ತದೆ. ನಮ್ಮ ಸರ್ಕಾರ ಅಮೇರಿಕದೊಡನೆ ತಗ್ಗಿ ಬಗ್ಗಿ ನಡೆಯುತ್ತಿದ್ದರೂ ಈ ಕ್ರಮ ಸಾಮ್ರಾಜ್ಯಶಾಹಿಗಳೊಡನೆ ವ್ಯವಹರಿಸುವಲ್ಲಿ ಎಷ್ಟೇ ಬಗ್ಗಿದರೂ, ದೈನೇಸಿತನ ತೋರಿದರೂ ಅವರು ತಮ್ಮ ಲಾಭದ ಕಡೆಗೆ ಮಾತ್ರ ಗಮನವಿಟ್ಟಿರುತ್ತಾರೆ ಎಂಬುದು ಸ್ಪಷ್ಟವಲ್ಲವೆ?

ಆದರೆ ನಮ್ಮ ಸರ್ಕಾರಕ್ಕೆ ಇದು ಅರ್ಥವಾಗಬೇಕಲ್ಲ.

ಸಮಾಜವಾದಕ್ಕಾಗಿ ಹೋರಾಟ ....

ಪುಟ 1ರಿಂದ

ಅರ್ಪಿಸಬೇಕು ಎಂದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹಾಗೂ ಜ್ಯೋತಿಬಸು ಮೊದಲು ಹೂಮಾಲೆಯಿಟ್ಟರು. ಅವರ ಹಿಂದೆ ಕ್ಯೂಬಾ ಕಮ್ಯುನಿಸ್ಟ್ ಪಕ್ಷ, ಕೊರಿಯಾ ಕಾರ್ಮಿಕ ಪಕ್ಷ ಹಾಗೂ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳು ಪುಷ್ಪಾಂಜಲಿ ಅರ್ಪಿಸಿದರು. ಉಳಿದ ಪ್ರತಿನಿಧಿಗಳು ಆಯಾ ದೇಶಗಳ ಇಂಗ್ಲೀಷ್, ವರ್ಣಮಾಲೆಯ ಸರತಿಯಲ್ಲಿ ಪುಷ್ಪಾಂಜಲಿ ಅರ್ಪಿಸಿದರು.

ಕಳೆದ ಸಂಚಿಕೆಯಲ್ಲಿ ವರದಿಯಾದಂತೆ ಸಿಪಿಐ(ಎಂ) ಹಾಗೂ ಸಿಪಿಐ ಸೇರಿದಂತೆ 17 ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳಲ್ಲದೆ ಇನ್ನೂ ಮೂರು ಪಕ್ಷಗಳ ಪ್ರತಿನಿಧಿಗಳೂ ಈ ಸಂಕಿರಣದಲ್ಲಿ ಭಾಗವಹಿಸಿದ್ದಾರೆ ಅವೆಂದರೆ ದಕ್ಷಿಣಾ ಆಫ್ರಿಕಾ, ಗ್ರೀಸ್ ಹಾಗೂ ಕೆನಡಾದ ಕಮ್ಯುನಿಸ್ಟ್ ಪಕ್ಷಗಳು.

ವಿಚಾರ ಸಂಕಿರಣದಲ್ಲಿ ಭಾಗವಹಿಸುತ್ತಿರುವ ಸಿಪಿಐ(ಎಂ) ನಿಯೋಗದಲ್ಲಿ ಸುರ್ಜಿತ್, ಜ್ಯೋತಿಬಸು, ಪಿ. ರಾಮಚಂದ್ರನ್ ಹಾಗೂ ಸೀತಾರಾಂ ಯೆಚೂರಿಯವರಿದ್ದಾರೆ. ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ಪಿ. ರಾಮಚಂದ್ರರಾವ್ ವೀಕ್ಷಕರಾಗಿ ಭಾಗವಹಿಸುತ್ತಿದ್ದಾರೆ. ಸಿಪಿಐನಿಂದ ಇಂದ್ರಜಿತ್ ಗುಪ್ತಾ, ಎ.ಬಿ ಬರ್ಧನ್ ಹಾಗೂ ಎಂ. ಫಾರುಕಿಯವರಿದ್ದ ನಿಯೋಗ ಬಾಗವಹಿಸಿದೆ. ಒಟ್ಟು 41 ಪ್ರತಿನಿಧಿಗಳು ಈ ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದಾರೆ.

ಬೆಳಿಗ್ಗೆ 11 ಘಂಟೆಗೆ ವಿಚಾರ ಸಂಕಿರಣದಲ್ಲಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಈ ವಿಚಾರ ಸಂಕಿರಣ ಸಂಘಟಿಸಬೇಕೆಂದು ಪಕ್ಷದ ಕೇಂದ್ರ ಸಮಿತಿ ತೀರ್ಮಾನದ ಮಹತ್ವದ ಬಗ್ಗೆ ವಿವರಣೆ ನೀಡಿದರು.

ಕೆಲ ಸಮಾಜವಾದಿ ರಾಷ್ಟ್ರಗಳಲ್ಲಿ ಸಮಾಜವಾದಕ್ಕಾದ ಹಿನ್ನಡೆ ಕಮ್ಯುನಿಸ್ಟ್ ಚಳುವಳಿಯನ್ನು ಅಸ್ತವ್ಯಸ್ತಗೊಳಿಸುವುದಕ್ಕೆ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೇಲೆ ಹೊಸ ರೀತಿಯಲ್ಲಿ ಆಕ್ರಮಣ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದು ಕಾಂ. ಸುರ್ಜಿತ್ ತಮ್ಮ ಸ್ವಾಗತ ಭಾಷಣದಲ್ಲಿ ತಿಳಿಸುತ್ತಾ, ಹಲವು ಪಕ್ಷಗಳು ಮಾರ್ಕ್ಸ್‌ವಾದದ ಮೂಲಭೂತ ತತ್ವಗಳನ್ನು, ಹೆಸರುಗಳನ್ನು ಬದಲಾಯಿಸಿ ಸೋಷಿಯಲ್ ಡೆಮಾಕ್ರಟಿಕ್ ದಾರಿಯನ್ನು ಅಂಗೀಕಾರ ಮಾಡಿವೆ. ಆದರೆ ಸಾಮ್ರಾಜ್ಯಶಾಹಿಗಳ ಅವರ ಹಿಂಬಾಲಕರಾದ ಬುದ್ಧಿಜೀವಿಗಳ ಅಪಪ್ರಚಾರಗಳಿಗೆ ಎದುರಾಗಿ ಸಿಪಿಐ(ಎಂ) ಮಾರ್ಕ್ಸ್‌ವಾದ-ಲೆನಿನ್‌ವಾದದ ಸಿದ್ಧಾಂತದ ಮೇಲೆ ಗಟ್ಟಿಯಾಗಿ ನಿಂತು ಕೆಲಸ ಮಾಡುತ್ತಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪಕ್ಷದ ಆಂತರಿಕ ಚರ್ಚೆಯ ನಂತರ 1992 ರ ಜನವರಿಯಲ್ಲಿ ನಡೆದ ಪಕ್ಷದ ಮಹಾಧಿವೇಶನದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಮಾತ್ರವೇ ಮಾನವ ಕುಲಕೋಟಿಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ಮತ್ತು ಸ್ವಾತಂತ್ರ್ಯ ರಕ್ಷಿಸಲು ಸಾಧ್ಯವಾಗುತ್ತದೆ ಎಂದು ಅಂದಾಜಿಸಲಾಯಿತು. ಪಕ್ಷದ ಮಹಾಧಿವೇಶನ ಅಂಗೀಕಾರ ಮಾಡಿದ ಕೆಲ ತಾತ್ವಿಕ ಪ್ರಶ್ನೆಗಳ ನಿರ್ಣಯದಲ್ಲಿ ನಮ್ಮ ನಿಲುವುಗಳ ಅಡಗಿವೆ. ಭಾರತದ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದದ ಪ್ರಚಾರ ಮಾಡಲಿಕ್ಕೆ ಸಿಪಿಐ(ಎಂ) ಜನರ ಜೊತೆಯಲ್ಲಿ ನಿರಂತರವಾಗಿ ಸಂಬಂಧ ಬೆಳೆಸುತ್ತದೆ ಎಂದು ಕಾಂ. ಸುರ್ಜಿತ್ ಹೇಳಿದರು. ಕಾಂ ಸುರ್ಜಿತ್‌ರ ಅಧ್ಯಕ್ಷ ಭಾಷಣವಾದ ನಂತರ ಪ್ರತಿನಿಧಿಗಳು ತಮ್ಮ ಪಕ್ಷಗಳ ಪ್ರಬಂಧಗಳನ್ನು ಮಂಡಿಸಿದರು. ಪ್ರಥಮವಾಗಿ ಸಿಪಿಐ(ಎಂ) ತನ್ನ ಧೋರಣ ಪತ್ರ ಮಂಡಿಸಿತು. ನಂತರ ಕ್ಯೂಬಾ, ಉ. ಕೋರಿಯಾ, ವಿಯೆಟ್ನಾಮ್ ಮುಂತಾದ ಸಮಾಜವಾದಿ ರಾಷ್ಟ್ರಗಳ ಪ್ರತಿನಿಧಿಗಳು ಧೋರಣೆ ಪತ್ರ ಮಂಡಿಸಿದರು. ಅನಂತರ ಇಂಗ್ಲಿಷ್ ಅಕ್ಷರ ಕ್ರಮವಾಗಿ ಇತರರು ಅವರವರ ಪ್ರಬಂಧ ಮಂಡಿಸಿದರು.

ಬಜೆಟ್ ವಿರುದ್ಧ ಮತ ಹಾಕುವಂದು..............

ಪುಟ 1ರಿಂದ

ಪಕ್ಷಗಳು ಈಗ ಮಧ್ಯಂತರ ಚುನಾವಣೆ ನಡೆಯುವುದು ಸಲ್ಲ. ಕೋಮುವಾದಿ ಭಾವನೆಗಳ ಕೋಮು ದಳ್ಳುರಿಯ ಪ್ರಭಾವ ತಗ್ಗಬೇಕು. ಆದರೆ ಹಾಗೆಂದು ನಾವು ಕಾಂಗ್ರೆ ಸರಕಾರ ದೇಶಕ್ಕೆ ಜನರಿಗೆ ಘಾತಿಸುವುದನ್ನು ನೋಡುತ್ತಾ ಸುಮ್ಮನಿರಲಾಗುವುದಿಲ್ಲ ನಾವು ಬಜೆಟ್ ವಿರುದ್ಧ ಮತ ಹಾಕಿಯೇ ತೀರುತ್ತೇವೆ ಎಂದು ಘೋಷಿಸಿದವು. ಬಿಜೆಪಿಯಂತೂ ಮಧ್ಯಂತರ ಚುನಾವಣೆ ಮಾಡಿಸುವುದೇ ಕಾಂಗ್ರೆ ಸರಕಾರವನ್ನು ಕಿತ್ತೊಗೆಯುವುದೇ ನಮ್ಮ ಏಕೈಕ ಗುರಿ ಎನ್ನುತ್ತಿದೆ ಎಡರಂಗ ರಾಷ್ಟ್ರೀಯ ರಂಗ ಮತ್ತು ಬಿಜೆಪಿ ಬಜೆಟ್ ವಿರುದ್ಧ ಮತ ಹಾಕದಿದ್ದರೆ ಎಡಿಎಂಕೆ ಬೆಂಬಲಿಸದಿರುವ ಮುಸ್ಲಿಂ ಲೀಗ್, ಅಜಿತ್ ಸಿಂಗ್ ಗುಂಪಿನವರ ಬೆಂಬಲವೂ ಸಂಶಯಾಸ್ಪದವಾಗಿರುವಾಗ ಏನಾಗಬಹುದು ಎಂದೆನ್ನಿಸಿ ಹಿಂದಿನ ವರ್ಷಕ್ಕಿಂತಲೂ ಈಗ ಕಾಂಗ್ರೆ ಸರಕಾರಕ್ಕೆ ಹೆಚ್ಚು ಅಪಾಯ ಎಂದು ಹಲವರಿಗೆ ಎನ್ನಿಸಿತು. ಅದಕ್ಕೆ ತಕ್ಕಂತೆ ಕಲ್ಕತ್ತಾದಲ್ಲಿ ಸೇರಿದ್ದ ಬಿಜೆಪಿ ಕಾರ್ಯಕಾರಿ ಸಮಿತಿ ಸಭೆಯ ನಂತರ ಆ ಪಕ್ಷದ ವಕ್ತಾರರು ಸಿಪಿಐ(ಎಂ) ಎಡಪಕ್ಷಗಳು ಬಜೆಟ್ ವಿರುದ್ಧ ತರುವ ನಿರ್ಣಯಗಳ ಪರವಾಗಿ ಮತ ಹಾಕಲು ನಮಗೇನೂ ಸಂಕೋಚವಿಲ್ಲ ಎಂದು ಘೋಷಿಸಿದರು. ಆ ಬಗ್ಗೆ ಪದೇ ಪದೇ ಪ್ರಶ್ನಿಸಿದಾಗಲೂ ವಿವಿಧ ಬಿಜೆಪಿ ನಾಯಕರುಗಳಿಂದ ಇಂತಹುದೇ ಉತ್ತರ.


ಸೂಕ್ಷ್ಮ ಮನಸ್ಸಿನ ಸೂಕ್ಷ್ಮ ಮರೆ ಮೋಸಗಳು

ಬಜೆಟ್ ವಿರುದ್ಧ ಮತ ಹಾಕುವುದು ಇನ್ನೇನು ಕೆಲವೇ ದಿನಗಳಿದೆ ಎನ್ನುವಾಗ ಅದ್ವಾನಿಯಿಂದ ಲೋಕಸಭೆಯಲ್ಲಿ ಸರಕಾರದ ವಿರುದ್ಧ ಮತಹಾಕುವುದಕ್ಕೆ ಬಹಳ ಸೂಕ್ಷ್ಮ ಸಂಯೋಜನೆ ಬೇಕು ಅದಕ್ಕೆ ಎಡಪಕ್ಷಗಳು ನಮ್ಮೊಡನೆ ಚರ್ಚೆ ಮಾಡಬೇಕು. ಆದರೆ ಅವುಗಳು ನಮ್ಮೊಂದಿಗೆ ಯಾವುದೇ ಸಂಪರ್ಕವನ್ನು ನಿರಾಕರಿಸುತ್ತವೆ. ಆದುದರಿಂದ ಅದು ಕಷ್ಟ ಎನ್ನುವ ಬಿಜೆಪಿ ಬಜೆಟ್ ವಿರುದ್ಧ ಮತ ಹಾಕಲಾರದ ಹೊಣೆಯನ್ನು ಎಡಪಕ್ಷಗಳ ಮೇಲೆಯೇ ಹೇರಲು ಪ್ರಯತ್ನಿಸಿತು. ಆಹಾ! ಎಂತಹ ಸೂಕ್ಷ್ಮ ಮನಸ್ಸಿನ ಸೂಕ್ಷ್ಮವಾದಗಳು, ಜನರ ಕಣ್ಣಿಗೆ ಮಣ್ಣೆರಚುವ ಮರೆ ಮೋಸಗಳು!

ಹಿಂದಿನ ವರ್ಷದ ಮತದಾನದ ಸಮಯದಲ್ಲಿ ಬಿಜೆಪಿಯ ತಿದ್ದುಪಡಿಗಳಿಗೆ ನಾವು ಮತ ಹಾಕುತ್ತೇವೆ ಎಂದಾಗ ಈ ಮಾತುಕತೆ ಸಂಯೋಜನೆಯ ಅವಶ್ಯಕತೆ ಎಡ- ರಾಷ್ಟ್ರೀಯ ರಂಗ ಪಕ್ಷಗಳಿಗೆ ಬರಲಿಲ್ಲ ಎಂಬುದು ಸರಕಾರಕ್ಕೆ ಅದು ಎಂತಹ ದೊಡ್ಡ ಬೆದರಿಕೆಯೊಡ್ಡಿತು ಎಂಬುದು ಅದ್ವಾನಿಯರಿಗೆ ಮರೆತು ಹೋಗಿರಬಹುದು ನೋಡುವ ಜನರಿಗೆ ಮರೆತು ಹೋಗುತ್ತದೆಯೇ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯಬಹುದು ಆದರೆ ಉಳಿದವರಿಗೆ ತಿಳಿಯುವುದಿಲ್ಲವೇ.

ಬಿಜೆಪಿಯ ಮನಸ್ಸೇನು ಎಂದು ಬಹಿರಂಗಗೊಳಿಸುವ ದಿನ ಬಂದೇಬಿಟ್ಟಿತು. ಸ್ವತಃ ಸಂಸತ್ ಸದಸ್ಯರೂ ಆದ - ಬಿಜೆಪಿ ವಿಫ್(ಎಂಧರೆ ಆ ಪಕ್ಷದ ಎಲ್ಲಾ ಲೋಕಸಭಾ ಸದಸ್ಯರೂ ಕಡ್ಡಾಯವಾಗಿ ಲೋಕಸಭೆಯಲ್ಲಿ ಹಾಜರಿರಬೇಕು ಎಂದು ಕಳುಹಿಸುವ ನಿರೂಪ) ಕಳುಹಿಸಿದೆ ಎಂದು ಹೇಳಿಕೆ. ಆದರೆ ಮತದಾನವಾಯಿತು. ಅನಿವಾರ್ಯವಾಗಿ ಅನುಮತಿ ಪಡೆದು ಹೊರಗುಳಿದ ಒಬ್ಬ ಸದಸ್ಯರನ್ನು ಹೊರತುಪಡಿಸಿ ಎಲ್ಲ ಸಿಪಿಐ(ಎಂ) ಸದಸ್ಯರೂ ಹಾಜರಿ. ಹಾಗೆಯೇ ಎಡಪಕ್ಷಗಳ ಸದಸ್ಯರೂ ಕೂಡ. ಆದರೆ ಬಿಜೆಪಿಯ ಸದಸ್ಯರೆಲ್ಲಿ? ಎಲ್ಲಿ? 119 ಸದಸ್ಯರಿರುವ ದೇಶದ ಪ್ರಥಮ ವಿರೋಧ ಪಕ್ಷವೆಲ್ಲಿ? ಜನರ ಹಿತಗಳನ್ನು ಹಿಂದೂ ಜನರ ಹಿತಗಳೇ ಆಗಲಿ ಅವನ್ನಾದರೂ ಕಾಪಾಡುವ ಈ ರಾಮ ಲಕ್ಷ್ಮಣರ ಪಡೆಯೆಲ್ಲಿ? ಎಲ್ಲಿ? ಎಂದು ಎಲ್ಲರೂ ಕೇಳುತ್ತಿದ್ದಾರೆ. ಆ ರಾಮಭಂಟರು, ನರಸಿಂಹರಾಯರ ರಾವ್ ಸರಕಾರವನ್ನು ರಕ್ಷಿಸಲೆಂದೇ ಹೊರಗೋಡಿದರು. ಹೊಸ ಆರ್ಥಿಕ ನೀತಿಗಳನ್ನು ವಿರೋಧಿಸಲಾರದೆ ಭಾರತದ ಗುತ್ತೇದಾರಿ ಬಂಡವಾಳಶಾಹಿಗಳ ಒತ್ತಡವನ್ನು ತಾಳಲಾರದೆ ಎಲ್ಲಿಗೆ ಓಡಿದರಪ್ಪಾ?

ದಿನ ಬೆಳಗಾದರೆ ರಸಗೊಬ್ಬರದ ಬೆಲೆಯೇರಿಕೆ ರೈತರಿಗೆ ಎಷ್ಟೊಂದು ಹಾನಿಕರವಾಗಿದೆ ಎಂದು ಬೊಬ್ಬಿಡುವ ಈ ರೈತ ರಕ್ಷಕರು ಎಲ್ಲಿ? ಎಲ್ಲಿ? ರೈತರೆಲ್ಲರೂ ಇಂದು ಕೇಳಬೇಕು, ಕಾರ್ಮಿಕರು, ಕೂಲಿಕಾರರು, ಮಹಿಳೆಯರು ಕೇಳಬೇಕು, ವಿದ್ಯಾರ್ಥಿ ಯುವಜನರು ಎಲ್ಲರೂ ಇಂದು ಕೇಳಬೇಕು. ಸಂಕಟ ಬಂದು ನಮ್ಮನ್ನು ಕಾಡುವಾಗ ನೀವೆಲ್ಲಿ? ನಮ್ಮನ್ನು ರಕ್ಷಿಸಬೇಕಾದ ಆಗತ್ಯದ ಸಮಯದಲ್ಲಿ ಎಲ್ಲಿ, ನೀವೆಲ್ಲಿ?



"ನೆಮ್ಮದಿಯ ನಿಟ್ಟುಸಿರು"

ದೇಶದ ಅನೇಕ ರಾಜ್ಯಗಳಲ್ಲಿ-ಒರಿಸ್ಸಾ ಕಾಲಹಾಡಿಯಲ್ಲಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಬರಗಾಲದ ದೇಗೆ ಸುಡುತ್ತಿದೆ. ಇನ್ನುಳಿದ ಕರ್ನಾಟಕ ದೆಹಲಿಯಂತಹ ಅನೇಕ ರಾಜ್ಯಗಳಲ್ಲಿ ಕಾಲರಾ ದೇನೆ ನೂರಾರು ಜನರನ್ನು ಆಹುತಿ ತೆಗೆದುಕೊಳ್ಳುತ್ತಿವೆ. ಹೊಟ್ಟೆಗಿಲ್ಲದೆ ಸತ್ತವರ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆಗೆ ಲೆಕ್ಕವಿಲ್ಲ ಅವರ ಕರುಳಿನ ಆಕ್ರಂದನವನ್ನು ಕೇಳುವರಿಲ್ಲ. ಕಾಲುವೆಯಂತೆ ಹರಿಯುತ್ತಿರುವ ಕಣ್ಣೀರನ್ನು ಒರೆಸುವರಿಲ್ಲ.

ಈ ಮಧ್ಯೆ ಬಡವರ ಪಾಲಿನ ಆಶಾಕಿರಣವಂತೆ ಮೂಡಿಬಂದಿದೆ "ತ್ರಿಪುರಾ ಎಡರಂಗ" ಸರ್ಕಾರ ಜನತೆಯ ಸರ್ಕಾರವೊಂದು ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಮಾದರಿಯಾಗಿದೆ ಅಲ್ಲಿ.

ತ್ರಿಪುರಾವಲ್ಲಿನ ಬಡತನದ ದೇಗೆಯಲ್ಲಿ ಬಳಲುತ್ತಿದ್ದ ಬುಡಕಟ್ಟು ಮತ್ತು ಇತರ ಪ್ರದೇಶಗಳ ಜನರ ಜೀವನದಲ್ಲಿ ನೆಮ್ಮದಿಯ ನಿಟ್ಟುಸಿರು ಕಾಣಿಸತೊಡಗಿದೆ. ಹೊಸದಾಗಿ ಅಧಿಕಾರಕ್ಕೆ ಬಂದಿರುವ ಎಡರಂಗ ಸರಕಾರ ಭಾರೀ ಪ್ರಮಾಣದಲ್ಲಿ ಪರಿಹಾರ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಇದಕ್ಕೆ ಕಾರಣ. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಗಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂತೆ ದಶರಥದೇವ್ ನಾಯಕತ್ವದ ಸಚಿವ ಸಂಪುಟ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಸೂಚನೆ ನೀಡಿದೆ.

ಗ್ರಾಮೀಣ ಅಭಿವೃದ್ಧಿ ಇಲಾಖೆ ಈಗಾಗಲೇ ಈ ಉದ್ದೇಶಕ್ಕೆ 1.20 ಕೋಟಿ ರೂಗಳನ್ನು ಮಂಜೂರು ಮಾಡಿದೆ. ಹಣಕ್ಕೆ ವ್ಯವಸ್ಥೆ ಮಾಡುವಂತೆ ಪಂಚಾಯತ್, ಕೃಷಿ, ಅರಣ್ಯ, ಪಶುಸಂಗೋಪನೆ, ಮತ್ತಿತರ ಇಲಾಖೆಗಳಿಗೆ ನಿರ್ದೇಶಿಸಲಾಗಿದೆ.

ಪರಿಹಾರ ಕಾರ್ಯಗಳ ಉಸ್ತುವಾರಿಯನ್ನು ವೈಯುಕ್ತಿಕ ಗಮನಕೊಟ್ಟು ನೋಡಿಕೊಳ್ಳುವಂತೆ ಹಾಗೂ ಸಮಸ್ಯೆ ಎದುರಿಸುತ್ತಿರುವ ಪ್ರದೇಶಗಳನ್ನು ಗುರುತಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಫಲಾನುಭವಿಗಳನ್ನು ಆಯ್ಕೆ ಮಾಡಲಿಕ್ಕಾಗಿ ಶಾಸಕರು ಮತ್ತು ಸ್ವಾಯುತ್ತ ಜಿಲ್ಲಾ ಮಂಡಲಿ (ಎ.ಡಿ.ಸಿ.) ಸದಸ್ಯರನ್ನು ಸಂಪರ್ಕಿಸುವಂತೆಯೂ ತಿಳಿಸಲಾಗಿದೆ. ಬ್ಯಾಂಕ್ ಅಭಿವೃದ್ಧಿ ಅಧಿಕಾರಿಗಳು (ಬಿಡಿಓ) ಈಗಾಗಲೇ ಪರಿಹಾರ ಕಾರ್ಯಗಳನ್ನು ಆರಂಭಿಸಿದ್ದಾರೆ.

ಭ್ರಷ್ಟರಿಗೆ ಎಚ್ಚರಿಕೆ

ತೀರಾ ತೊಂದರೆಯ ಪ್ರದೇಶಗಳಿಗೆ ಸಾಕಷ್ಟು ಪಡಿತರಗಳನ್ನು ಸರಬರಾಜು ಮಾಡುವಂತೆ ಸಚಿವ ಸಂಪುಟ ರಾಜ್ಯ ಆಹಾರ ಇಲಾಖೆಗೆ ಸೂಚಿಸಿದೆ.ಪ್ರತಿವಾರದ ಪಡಿತರ ಕೋಟಾಗಳನ್ನು ಒಯ್ದು ವಿತರಿಸದಿದ್ದರೆ ಅಂಥವರ ಲೈಸನ್ಸ್‌ಗಳನ್ನು ರದ್ದು ಪಡಿಸುವುದಾಗಿ ಭ್ರಷ್ಟ ಪಡಿತರ ವರ್ತಕರಿಗೆ ಆಹಾರ ಖಾತೆ ಸಚಿವ ಬ್ರಜ್ ಗೋಪಾಲ್ ಎಚ್ಚರಿಕೆ ನೀಡಿದ್ದಾರೆ.

ಬಹುತೇಕ ಬರಗಾಲದಂಥ ಪರಿಸ್ಥಿತಿಯನ್ನು ಎದುರಿಸಬೇಕಾದ ಸವಾಲು ರಾಜ್ಯದಲ್ಲಿ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿರುವ ಎಡರಂಗ ಸರಕಾರದ ಮುಂದಿದೆ. ಕಾಲರಾ, ಕರಳುಬೇನೆಗಳಂತ ಸಾಂಕ್ರಾಮಿಕ ರೋಗಗಳ ಪಿಡುಗನ್ನು ಕೂಡ ಪರಿಣಾಮಕಾರಿಯಾಗಿ ಎದುರಿಸಬೇಕಿದೆ. ಈ ಪ್ರದೇಶಗಳ ಜನರ ಅಗತ್ಯಗಳನ್ನು ಕಡೆಗಣಿಸಿದ ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ಸಮ್ಮಿಶ್ರ ಸರಕಾರದ ಜನವಿರೋಧಿ ನೀತಿಗಳೇ ಇಂಥ ದಯನೀಯ ಪರಿಸ್ಥಿತಿಗೆ ಕಾರಣವಾಗಿವೆ.

ಸಾಂಕ್ರಾಮಿಕ ರೋಗಗಳನ್ನು ಎದುರಿಸಿ ನಿವಾರಿಸುವ ನಿಟ್ಟಿನಲ್ಲಿ ರಾಜ್ಯ ಆರೋಗ್ಯ ಇಲಾಖೆ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಸಂಯುಕ್ತವಾಗಿ ಕೆಲಸ ನಿರ್ವಹಿಸುತ್ತಿವೆ. ಶುದ್ಧ ಕುಡಿಯುವ ನೀರು, ಔಷಧಿಗಳು, ಆಹಾರ ಮತ್ತಿತರ ಸಾಮಗ್ರಿಗಳನ್ನು ಒದಗಿಸುತ್ತಿವೆ. ಸಾಂಕ್ರಾಮಿಕ ರೋಗಗಳಿಂದಾಗಿ ಎಪ್ರಿಲ್ ತಿಂಗಳ ಎರಡು ವಾರಗಳಲ್ಲಿ 16 ಜನರು ಅಸುನೀಗಿದರು ಆದರೆ ಈಗ ಪರಿಸ್ಥಿತಿ ಕ್ರಮೇಣವಾಗಿ ಸುಧಾರಿಸುತ್ತಿದೆ.

ಬಿಹಾರ: ದೌರ್ಜನ್ಯಕ್ಕೆ ಕಾಂಗ್ರೆ ನಾಯಕರ ಪ್ರಚೋದನೆ

ಬಿಹಾರದಲ್ಲಿ ಕಳೆದ ವರ್ಷದ ಸೆಪ್ಟೆಂಬರ್‌ನಿಂದ ಗಮನಾರ್ಹವಾದ ಭೂ ಚಳುವಳಿ ನಡೆಯುತ್ತಿದೆ. ಹೆಚ್ಚುವರಿ ಭೂಮಿಯನ್ನು ಬಡರೈತರು ವಶಕ್ಕೆ ತೆಗೆದುಕೊಳ್ಳುವ ಈ ಚಳುವಳಿಗೆ ಸಿಪಿಐ(ಎಂ) ಮತ್ತು ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್) ಕೃಷಿ ಕೂಲಿಗಾರರ ಸಂಘ ಮುಖ್ಯವಾಗಿ ನೇತೃತ್ವವ ನೀಡುತ್ತಿವೆ. ಹೋರಾಟಗಾರರ ಮೇಲೆ ಭೂಮಾಲಿಕ ಗೂಂಡಾಗಳಿಂದ ಹಲ್ಲೆಗಳು ನಡೆಯುತ್ತಿದ್ದು ಅನೇಕ ಮಂದಿ ಕಾರ್ಯಕರ್ತರು ಹುತಾತ್ಮರಾಗಿದ್ದಾರೆ.

ಪೂರ್ಣಿಮಾ ಜಿಲ್ಲೆಯ ಬುಧೈಲಿ ಎಸ್ಟೇಟ್‌ನಲ್ಲಿ ಭೂಮಾಲಿಕರು ಬಡರೈತರ ಎಪ್ರಿಲ್ 15 ರಂದು ಹೇಯ ಆಕ್ರಮಣ ನಡೆಸಿ ಜಮೀನನ್ನು ಬಲಾತ್ಕಾರವಾಗಿ ಕಿತ್ತುಕೊಂಡರು. ಈ ಆಕ್ರಮಣಕ್ಕೆ ಬಿಹಾರ ಕಾಂಗ್ರೆ ಅಧ್ಯಕ್ಷ ಹಿದಾಯತುಲ್ಲಾ ಖಾನ್ ಮತ್ತು ಜಗನ್ನಾಥ ಮಿಶ್ರಾ ಪ್ರಚೋದನೆ ನೀಡಿದ್ದರು.

ಈ ಪ್ರದೇಶಕ್ಕೆ ಎಪ್ರಿಲ್ 18 ರಂದು ಭೇಟಿ ನೀಡಿದ ಅಖಿಲ ಭಾರತ ಕೃಷಿ ಕೂಲಿಗಾರರ ಸಂಘ (ಎ.ಐ.ಎ.ಡಬ್ಲು.ಯು)ದ ಸಹ ಕಾರ್ಯದರ್ಶಿ ಹಸನ್‌ಮೊಲ್ಲಾ ಈ ವಿಷಯವನ್ನು ಬಹಿರಂಗಪಡಿಸಿದ್ದಾರೆ.

ಅವರು ನವದೆಹಲಿಯಲ್ಲಿ ಒಂದು ಹೇಳಿಕೆ ನೀಡಿ ಭೂ ಹೋರಾಟದ ಬಗ್ಗೆ ಕೆಲವು ವಿವರಗಳನ್ನು ನೀಡಿದ್ದಾರೆ.

ಬಿಹಾರದ ಸಾವಿರಾರು ಭೂರಹಿತ ಬಡವರು ಹಾಗೂ ಕೃಷಿ ಕೂಲಿಗಾರರು ಮೊದಲು ಬಂಜರು ಭೂಮಿ, ಒಣಭೂಮಿ,. ಅರಣ್ಯಭೂಮಿ, ಹೆಚ್ಚುವರಿ ಭೂಮಿ, ಸರಕಾರಿ ಜಮೀನು, ಮತ್ತು ಭೂಮಾಲೀಕರು ಅಕ್ರಮವಾಗಿ ಹೊಂದಿದ್ದ ಬೇನಾಮಿ ಭೂಮಿಯನ್ನು ಗುರುತಿಸಿದರು. ಅನಂತರ ಕಿಸಾನ್‌ಸಭಾ, ಕೃಷಿ ಕೂಲಿಗಾರರ ಸಂಘ ಮತ್ತಿತರ ಸಮಾನ ಮನಸ್ಕ ಸಂಘಟನೆಗಳ ನೇತೃತ್ವದಲ್ಲಿ ಈ ಜಮೀನನ್ನು ವಶಪಡಿಸಿಕೊಂಡು ಭೂರಹಿತರಿಗೆ ವಿತರಿಸಿದರು ಮನೆಗಳನ್ನು ಕಟ್ಟಿಕೊಳ್ಳುವುದು ಇದರ ಮುಖ್ಯ ಉದ್ದೇಶ. ಪೂರ್ಣಿಮಾ ಜಿಲ್ಲೆಯಲ್ಲಿ 5000 ಎಕರೆಗೂ ಹೆಚ್ಚು ಜಮೀನನ್ನು ಗುರುತಿಸಿ ವಶಪಡಿಸಿಕೊಳ್ಳಲಾಯಿತು. ಅದನ್ನು ಸುಮಾರು 20,000 ಜನರಿಗೆ ವಿತರಿಸಲಾಗಿದ್ದು ಅವರೆಲ್ಲಾ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ.

ಸರಕಾರವೇ ತುಂಬಾ ಹಿಂದೆಯೇ ಮಾಡಬೇಕಿದ್ದ ನಿಜವಾದ ಭೂಸುಧಾರಣೆಯ ಅನುಷ್ಠಾನ ಇದಾಗಿದೆ ಎಂದು ಹಸನ್ ಮೊಲ್ಲಾ ವಿಶ್ಲೇಷಿಸಿದ್ದಾರೆ. ಭೂ ಸುಧಾರಣೆಯನ್ನು ಜಾರಿ ಮಾಡುವ ಬದಲು ಅಧಿಕಾರಿಗಳು ಭೂಮಾಲಿಕರು ಜಮೀನನ್ನು ಮತ್ತೆ ವಶಪಡಿಸಿಕೊಳ್ಳಲಿಕ್ಕಾಗಿ ಭೂಮಾಲಿಕರಿಗೆ ನೆರವು ನೀಡುತ್ತಿದ್ದಾರೆ. ಕಾಂಗ್ರೆಸ್ (ಐ) ನಾಯಕರು ಭೂಮಾಲಿಕರಿಗೆ ಕುಮ್ಮಕ್ಕು ನೀಡುತ್ತಿದ್ದಾರೆ ಎಪ್ರಿಲ್ 15 ರಂದು ಬುಧೈಲಿ ಎಸ್ಟೇಟ್‌ನ ಭೂಮಾಲಿಕರಿಗೆ ಖಾಸಗಿ ಸೇನೆ ಮಧ್ಯಮವರ್ಗದ ರೈತ ಮುಖೇಶ್ ಯಾದವ್ ಮೇಲೆ ಆಕ್ರಮಣ ನಡೆಸಿತು. ಬಿಶಾರಿಯಾದ 'ಯಾದವ್ ಟೋಲಿ'ಯಲ್ಲಿ ಈ ಘಟನೆ ನಡೆಯಿತು. ಹಲ್ಲೆಗೊಳಗಾದ ಈ ಯಾದವ ಜನರಿಗೆ ನೆರೆಹೊರೆ ಪ್ರದೇಶಗಳ ಬುಡಕಟ್ಟು ಮತ್ತು ಹರಿಜನರ ಭೂರಹಿತ ಕೃಷಿ ಕಾರ್ಮಿಕರು ನೆರವ ನೀಡಿ ರಕ್ಷಿಸಿದರು ಹೀಗೆ ರಕ್ಷಣೆ ನೀಡಿದವರ ಮೇಲೆ ಭೂಮಾಲೀಕ ಗೂಂಡಾಗಳು ಶಸ್ತ್ರಾಸ್ತ್ರಗಳಿಂದ ಗುಂಡಿಟ್ಟುಕೊಂಡು ಶವವನ್ನು ತೆಗೆದುಕೊಂಡು ಹೋದರು. ಇತರ 23 ಜನರನ್ನು ಗಾಯಗೊಳಿಸಿದರು

ಸುಳ್ಳು ಆಪಾದನೆಗಳು

ಸಂಬಂಧಪಟ್ಟ ಭೂಮಾಲೀಕ ಮತ್ತು ಆತನ ಗೂಂಡಾಗಲನ್ನು ಬಂಧಿಸುವ ಬದಲಿಗೆ ಪೋಲೀಸರು ಬಡ ಬುಡಕಟ್ಟು ಜನರು ಹಾಗೂ ಹರಿಜನರನ್ನು ಹಿಂಸುತ್ತಿರುವುದು ಆಶ್ಚರ್ಯಕರವಾಗಿದೆ ಎಂದು ಹಸನ್ ಮೊಲ್ಲಾ ಹೇಳಿದಾದರೆ. ಫಗು ಬಸ್ಕಿಯ ಕೊಲೆಗೆ ಸಂಬಂಧಿಸಿ ಆತನ ಅಣ್ಣ ಮರಾರಿಗ್ ಬಸ್ಕಿ ನೀಡಿದ ದೂರನ್ನು ಸ್ವೀಕರಿಸಲು ಪೋಲೀಸರು ನಿರಾಕರಿಸಿದ್ದಾರೆ.

ಬಡ ಭೂರಹಿತ ಕೃಷಿ ಕೂಲಿಕಾರರ ಮೇಲೆ ನಡೆದ ಹಲ್ಲೆಯನ್ನು ಎ.ಐ.ಎ.ಡಬ್ಲು.ಯು ತೀವ್ರವಾಗಿ ಖಂಡಿಸಿದೆ. ಪ್ರಕರಣದ ಬಗ್ಗೆ ಸ್ವತಂತ್ರ ತನಿಖೆ ನಡೆಸಬೇಕು, ಭೂಮಾಲಕ ಮತ್ತು ಆತನ ಗೂಂಡಾಗಳನ್ನು ಬಂಧಿಸಿ ಅವರ ಶಸ್ತ್ರಾಸ್ತ್ರಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು, ಮೃತರ ಕುಟುಂಬಕ್ಕೆ ಎರಡು ಲಕ್ಷ ರೂ ಪರಿಹಾರ ಒದಗಿಸಬೇಕು, ಯಾದವ್ ಟೋಲಿಯಲ್ಲಿ ನಾಶಪಡಿಸಲಾದ ಗುಡಿಸಲುಗಳನ್ನು ಸರಕಾರ ನಿರ್ಮಿಸಿಕೊಡಬೇಕು ಹಾಗೂ ಭೂರಹಿತ ಬಡವರು ಆಕ್ರಮಿಸಿಕೊಂಡಿರುವ ಜಮೀನಿನ ಹಕ್ಕುಗಳನ್ನು ಅವರಿಗೆ ಮಂಜೂರು ಮಾಡಬೇಕು ಎಂದು ಆಗ್ರಹಪಡಿಸಿದೆ.

ಕೋವ್ವೂರೂ ಕ್ಷೇತ್ರದಲ್ಲಿ ಸ್ಪರ್ಧೆಗೆ ನಿರ್ಧಾರ

ಆಂಧ್ರಪ್ರದೇಶದ ಕೋವ್ವೂರು ವಿಧಾನಸಭಾ ಕ್ಷೇತ್ರವಲ್ಲಿ ತೆಲುಗುದೇಶಂ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೂ ಆ ಕ್ಷೇತ್ರದಲ್ಲಿ ಸ್ಪರ್ಧಿಸುವ ತನ್ನ ನಿರ್ಧಾರವನ್ನು ಕೈ ಬಿಡದಿರಲು ಸಿಪಿಐ(ಎಂ) ನಿರ್ಣಯಿಸಿದೆ ಕಾಂ. ತಿಂಕಯ್ಯ ಈ ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ.

ಸಂಸತ್ತಿನಲ್ಲಿ ನಮ್ಮವರು | ವಿಶ್ವ

ಕೋಮುವಾದಿ ಸಂಘಟನೆಗಳ ನಿಷೇಧ ನಾಟಕ

-- ಸುಶೀಲಾಗೋಪಾಲನ್

ಎಪ್ರಿಲ್ 24 ರ ಶನಿವಾರ ನಡೆದ ವಿಮಾನ ಅಪಹರಣ ಪ್ರಕರಣ 26 ರಂದು ಸಂಸತ್ತಿನಲ್ಲಿ ಪ್ರತಿಧ್ವನಿಸಿತು. ಅಪಹರಣಕಾರನ ಹತ್ಯೆ ಸಂಬಂಧದಲ್ಲಿ ಉದ್ಭವಿಸಿರುವ ವಿವಾದದಸುತ್ತ ಲೋಕಸಭೆಯಲ್ಲಿ ಸಿಪಿಐ (ಎಂ) ನಾಯಕ ಸೋಮನಾಥ ಚಟರ್ಜೀ ಗಮನ ಸೆಳೆದರು. ಅಪಹರಣಕಾರನ ಹತ್ಯೆಗೆ ಕಾರಣವಾದ ಸನ್ನಿವೇಶಗಳ ಸಂಬಂಧದಲ್ಲಿ ಉದ್ಭವಿಸಿರುವ ಊಹಾಪೋಹಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು ಸರಕಾರ ಈ ಬಗ್ಗೆ ಹೇಳಿಕೆ ನೀಡಬೇಕೆಂದು ಒತ್ತಾಯಪಡಿಸಿದರು.

ಸಂಸತ್ತಿನ ಅಧಿವೇಶನ ನಡೆಯುತ್ತಿರುವ ಅವಧಿಯಲ್ಲಿ ಸರಕಾರ ಆಡಳಿತಾತ್ಮಕ ಕ್ರಮದ ಮೂಲಕ ದೂರವಾಣಿ ಸೇವೆಗಳ ದರವನ್ನು ಹೆಚ್ಚಿಸಿದೆ. ಸರಕಾರ ತನ್ನ ಮಾಮೂಲಿ ಧೋರಣೆಯನ್ನು ತೋರಿಸಿದೆ. ಇದನ್ನು ವ್ಯಾಪಕವಾಗಿ ಖಂಡಿಸಲಾಗಿದೆ.

ಸಂಸತ್ತು ಅಧಿವೇಶನ ನಡೆಸುತ್ತಿರುವಾಗ ಸದನದಲ್ಲಿ ಚರ್ಚಿಸದೆಯೇ ಇಂಥ ಪ್ರಮುಖ ನಿರ್ಧಾರಗಳನ್ನು ಪ್ರಕಟಿಸುವುದು ಸಂಸದೀಯ ನಿಯಮಗಳಿಗೆ ವಿರುದ್ಧವಾದುದು ಎಂದು ಲೋಕಸಭೆಯಲ್ಲಿ ಸುಶೀಲಾ ಗೋಪಾಲನ್ ಅಭಿಪ್ರಾಯಪಟ್ಟರು.

ಲಾಠಿ ಪ್ರಹಾರ ಖಂಡನೆ

ಎಪ್ರಿಲ್ 26 ರಂದು ರಾಜಧಾನಿಯಲ್ಲಿ ಪ್ರಧಾನಿ ಮನೆ ಮುಂದೆ ಮತಪ್ರದರ್ಶನ ನಡೆಸುತ್ತಿದ್ದಾಗ ಅಲೀಗಢ ಮುಸ್ಲಿಂ ವಿಶ್ವವಿದ್ಯಾನಿಲಯದ (ಎ.ಎಂ.ಯು) ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿದ ಲಾಠಿ ಪ್ರಹಾರವನ್ನು ಲೋಕಸಭೆಯಲ್ಲಿ ಬಹುತೇಕ ಎಲ್ಲಾ ಪ್ರತಿಪಕ್ಷಗಳು ಖಂಡಿಸಿದವು.

ಪೋಲೀಸರು ಲಾಠಿ ಪ್ರಹಾರ ಮಾಡಲು ವಿದ್ಯಾರ್ಥಿಗಳು ಮಾಡಿದ ಅಪರಾಧವಾದರೂ ಏನು ಎಂದು ಸೈಫುದ್ದೀನ್ ಚೌಧರಿ ಪ್ರಶ್ನಿಸಿದರು. ದೇಶದಲ್ಲಿ ಪ್ರಜಾಪ್ರಭುತ್ವವಿದೆಯೇ ಎಂದು ಕೇಳಿದ ಅವರು ಹೇಳಿಕೆ ನೀಡುವಂತೆ ಸರಕಾರವನ್ನು ಆಗ್ರಹ ಪಡಿಸಿದರು. ಸಂಬಂಧಪಟ್ಟ ಸಚಿವರು ಕೂಡಲೇ ಉತ್ತರ ನೀಡಬೇಕೆಂಬುದು ಚೌಧರಿಯವರ ಒತ್ತಾಯವಾಗಿತ್ತು.

ಎಪ್ರಿಲ್ 28 ರಂದು ಲೋಕಸಭೆಯಲ್ಲಿ ಗೃಹಖಾತೆಯ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡ ಸಿಪಿಐ(ಎಂ) ನಾಯಕಿ ಸುಶೀಲಾ ಗೋಪಾಲನ್ ಕೋಮುವಾದಿ ಸಂಘಟನೆಗಳ ನಿಷೇಧವನ್ನು ಅನುಷ್ಠಾನಕ್ಕೆ ತರುವಲ್ಲಿ ಸರಕಾರ ಗಂಭೀರ ಪ್ರಯತ್ನ ಮಾಡುತ್ತಿಲ್ಲ ಎಂದು ಆರೋಪಿಸಿದರು. ನಿಷೇಧಿತ ಕೋಮುವಾದಿ ಸಂಘಟನೆಗಳು ತಮ್ಮ ಚಟುವಟಿಕೆಗಳನ್ನು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಸುತ್ತಿವೆ ಎಂದು ಅವರು ಹೇಳಿದರು.

ಬಾಬರಿ ಮಸೀದಿಯನ್ನು ರಕ್ಷಿಸಲಿಕ್ಕಾಗಿ ಬಿಜೆಪಿಯೆತರ ಪಕ್ಷಗಳು ಸಹಾಯ ಹಸ್ತವನ್ನು ಚಾಚಿದ್ದರೂ ಮಸೀದಿಯನ್ನು ರಕ್ಷಿಸುವಲ್ಲಿ ಸರಕಾರ ವಿಫಲವಾಯಿತು ಎಂದು ಡಿಸೆಂಬರ್ ಆರರ ಅಯೋಧ್ಯೆ ಘಟನೆಗಳನ್ನು ಪ್ರಸ್ತಾಪಿಸಿದ ಸುಶೀಲಾ ಗೋಪಾಲನ್ ಹೇಳಿದರು.

ಅಯೋಧ್ಯೆಯಲ್ಲಿ ಬಾಕಿಯುಳಿದ ಎಲ್ಲಾ ಪ್ರಕರಣಗಳನ್ನು ಸಂವಿಧಾನದ 138 ನೇ ವಿಧಿಯನ್ವರ ಸುಪ್ರಿಂ ಕೋರ್ಟಿಗೆ ಒಪ್ಪಿಸಬೇಕು ಎಂದು ಅವರು ಸಲಹೆ ಮಾಡಿದರು. ಸಮಸ್ಯೆಯ ಶಾಶ್ವತ ಇತ್ಯಾರ್ಥಕ್ಕೆ ಇದರಿಂದ ನೆರವಾಗುತ್ತದೆ ಎಂದರು.

ಸಭಾತ್ಯಾಗ

ಭಯೋತ್ಪಾದನೆ ಮತ್ತು ಛಿದ್ರಕಾರಿ ಚಟುವಟಿಕೆ ತಡೆ (ಟಾಡಾ) ಕಾಯಿದೆ ವಿಸ್ತರಣೆಯನ್ನು ಪ್ರತಿಭಟಿಸಿ ಸಿಪಿಐ ಮತ್ತು ಸಿಪಿಐ(ಎಂ) ಸದಸ್ಯರು ಲೋಕಸಭೆಯಲ್ಲಿ ಸಭಾತ್ಯಾಗ ಮಾಡಿದರು.

ಪಿತೂರಿ

ಗೃಹಖಾತೆಯ ಅನುದಾನ ಬೇಡಿಕೆಗಳ ಮೇಲೆ ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ (ಎ. 29) ಭಾಗವಹಿಸಿ ಮಾತನಾಡಿದ ಸಿಪಿಐ(ಎಂ) ಸದಸ್ಯ ರಾಮಚಂದ್ರ ಘಂಗಾರೆ ಮುಂಬಾಯಿ ಸ್ಫೋಟಗಳ ಹಿಂದೆ ಪಿತೂರಿ ಇತ್ತು ಎಂದು ಹೇಳಿದರು. ದಾವೂದ್ ಇಬ್ರಾಹೀಂ ಮತ್ತು ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐ.ಎಸ್.ಐ. ಪಾತ್ರವಿತ್ತೆಂಬ ವರದಿಗಳಿವೆ ಎಂದರು.

ಸರಕಾರ ಸಕಾಲದಲ್ಲಿ ವರ್ತಿಸಿದ್ದರೆ ಅಯೋಧ್ಯೆಯಲ್ಲಿನ ವಿವಾದಾತ್ಮಕ ಕಟ್ಟಡ ಧ್ವಂಸವಾಗುವುದನ್ನು ತಡೆಯಬಹುದಿತ್ತು ಎಂದರು ಘಂಗಾರೆ ಹೇಳಿದರು.

ಸಂಸತ್ತಿನ ಕಲಾಪಗಳನ್ನು ವರದಿ ಮಾಡುವ ದೂರದರ್ಶನ ಹಲವು ತಪ್ಪುಗಳನ್ನು ಮಾಡುತ್ತಿದೆ ಎಂದು ರಾಜ್ಯಸಭೆಯಲ್ಲಿ ಎ. 29 ರಂದು ಸಿಪಿಐ(ಎಂ) ಸದಸ್ಯ ಸರಳಾ ಮಹೇಶ್ವರಿ ಹೇಳಿದರು. ಸಂಬಂಧಪಟ್ಟ ಅಧಿಕಾರಿಗಳು ಜಾಗ್ರತೆಯಿಂದ ಇರಬೇಕು ಎಂದರು.

---

3 ಲಕ್ಷ ಜನರ ಭವಿಷ್ಯ ಮತ್ತು 3 ನಿಮಿಷ 'ದರ್ಶನ'

ಮುಖ್ಯಮಂತ್ರಿ ವೀರಪ್ಪಮೊಯ್ಲಿಯುವರ ಕಾರ್ಯಾಲಯದಿಂದ ಮಾತುಕತೆಗೆ ಆಹ್ವಾನಿಸಿ ಬಂದ ಹಿನ್ನೆಲೆಯಲ್ಲಿ ಆಗಮಿಸಿದ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಬಲದಂಡೆ ಕಾಲುವೆ ಹೋರಾಟ ಸಮಿತಿಯ 25 ಜನ ಪ್ರತಿನಿಧಿಗಳ ಜೊತೆ ಮಾತನಾಡಲು ಸಮಯಾವಕಾಶವಿಲ್ಲದ ಮುಖ್ಯಮಂತ್ರಿಯವರು, ಕೃಷ್ಣ ಯೋಜನೆಯ ಎಲ್ಲಾ ಘಟ್ಟಗಳನ್ನು 2000 ಇಸವಿಯೊಳಗೆ ಪೂರ್ಣಗೊಳಿಸುವ ಪ್ರಶ್ನೆ ಕನಸಿನ ಕಗ್ಗಂಟಿದ್ದಂತೆ ಎಂದು ಹೋರಾಟ ಸಮಿತಿ ಭಾವಿಸಿದೆ.

ಎಪ್ರಿಲ್ ಹತ್ತರಂದು ರೈತರ ಸ್ವಾಭಿಮಾನ ಸಮಾವೇಶ ನಡೆದು ಹತ್ತಾರು ಸಾವಿರ ರೈತರು ಕೃಷ್ಣಾ ಮೇಲ್ದಂಡೆ ಯೋಜನೆ ನಾರಾಯಣಪುರ ಬಲದಂಡೆ ಕಾಲುವೆ ಹೋರಾಟ ಸಮಿತಿ ಮಂತ್ರಿಯವರಿಗೆ ಮನವಿ ಸಲ್ಲಿಸಲು ತೀರ್ಮಾನಿಸಲಾಗಿತ್ತು ರಾಜ್ಯಸಭಾ ಸದಸ್ಯರಾದ ಸಮ್ರಾಜ್ ಸಿದ್ಧಿಖಿ, ಸಂಚಾಲಕರಾದ ಚಂದ್ರಶೇಖರಬಾಳೆ, ಕೆ. ಸುರೇಶ್‌ರೆಡ್ಡಿ ಯವರು ಹೋರಾಟ ಸಮಿತಿಯ ಪರವಾಗಿ ಮುಖ್ಯಮಂತ್ರಿಯವರ ಭೇಟಿಗೆ ಸಮಯಾವಕಾಶ ಕೇಳಿದ್ದರು. ಮುಖ್ಯಮಂತ್ರಿಗಳು ಮೇ 3,1993 ರಂದು 1.30 ಘಂಟೆಗೆ ಕೃಷ್ಣಾದಲ್ಲಿ ಭೇಟಿಯಾಗಲು ಸಮಯ ಗೊತ್ತು ಮಾಡಿ ಮುಖ್ಯಮಂತ್ರಿ ಕಛೇರಿಯಿಂದ ಪತ್ರ ನೀಡಲಾಯಿತು.

ಹೋರಾಟ ಸಮಿತಿಯ ಪ್ರತಿನಿಧಿಗಳು ಮೇ 3,1993 ರಂದು ಸಂಪರ್ಕಿಸಲಾಗಿ ಸಮಯವನ್ನು ಬದಲಾವಣೆ ಮಾಡಿ ತಿಳಿಸುವುದೆಂದು ಹೇಳಲಾಯಿತು. ಹತ್ತಾರು ಬಾರಿ ಪ್ರಯತ್ನಿಸಿದರೂ ಫಲಕಾರಿಯಾಗದೇ ಹೋದಾಗ 2-30 ಘಂಟೆಗೆ ಪ್ರತಿನಿಧಿಗಳು ಕೃಷ್ಣಾಕ್ಕೆ ಹೋಗಲಾಗಿ ಅಲ್ಲಿಗೆ ಮುಖ್ಯಮಂತ್ರಿಗಳು ಬರುತ್ತಾರೆಂದು ಮೇಲಿನ ಸಭಾಂಗಣದಲ್ಲಿ ಕೂಡಿಸಲಾಯಿತು. ಒಂದು ಘಂಟೆಯ ನಂತರ ಡೆಪ್ಯೂಟಿ ಸೆಕ್ರೆಟರಿ ಗುರುಮೂರ್ತಿಯವರು ಬಂದು ಮುಖ್ಯಮಂತ್ರಿಗಳು ಬರಲಾಗುವುದಿಲ್ಲ, ವಿಧಾನಸೌಧಕ್ಕೆ 5-00 ಗಂಟೆಗೆ ಬರಬೇಕೆಂದು ತಿಳಿಸಿದರು. ತಾಳ್ಮೆಯನ್ನು ಕಳೆದುಕೊಳ್ಳದ ಪ್ರತಿನಿಧಿಗಳು 4-30ರಿಂದ 5-30ರವರೆಗೆ ಕಾಯ್ದು ನಂತರ ಮುಖ್ಯಮಂತ್ರಿಗಳೇನು ಬಂದರೂ, ನೂರಾರು ಜನ ಮುಖ್ಯಮಂತ್ರಿಗಳ ಭೇಟಿಗಾಗಿ ನೂಕು ನುಗ್ಗಲು, ಈ ನೂಕು ನುಗ್ಗಲಿನಲ್ಲಿ ಪ್ರತಿನಿಧಿಗಳು ಕಾಯಬೇಕಾಯಿತು. ಅಷ್ಟಾಗಿಯೂ ನೂರಾರು ಶಾಸಕರು ಒಳನುಗ್ಗಿ ಕಚೇರಿ ತುಂಬಿ ಹೋಯಿತು ಕೊನೆಯಲ್ಲಿ ಸಮ್ರಾಜ ಸಿದ್ಧಿಕಿ ರಾಜ್ಯಸಭಾ ಸದಸ್ಯರು ತೀವ್ರ ಒತ್ತಾಯ ಮಾಡಿದ ನಂತರ ಮುಖ್ಯಮಂತ್ರಿಗಳ ದರ್ಶನ ಭಾಗ್ಯ ಸಿಕ್ಕಿತು. ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಐದು ಕೋಟಿ ಕೊಡುವುದಾಗಿ ಹೇಳಿದ್ದೇನೆ, ಕೊಡುತ್ತೇನೆ, ಸರ್ವೆ ಮಾಡಿಸುತ್ತೇನೆ. ಸಮಯ ನಿಗದಿಯಿಲ್ಲ ಎಂಬ ಹೇಳಿಕೆಯೊಂದಿಗೆ ಮೂರು ನಿಮಿಷದಲ್ಲಿ ಮಾತುಕತೆಯನ್ನು ಮುಕ್ತಾಯಗೊಳಿಸಿದರು

ಮೂರು ಲಕ್ಷ ಜನತೆಯ ಭವಿಷ್ಯವನ್ನು ರೂಪಿಸುವ ನಾರಾಯಣಪುರ ಬಲದಂಡೆ ಕಾಲುವೆಯ ಕುರಿತು ಮೂರುನಿಮಿಷ ಕಾಟಾಚಾರಕ್ಕಾಗಿ ಮನವಿ ಪಡೆಯುವ ಸರಕಾರದ ಮುಂದಾಳುಗಳಿಗೆ ಎಷ್ಟರ ಮಟ್ಟಿಗೆ ರಾಜಕೀಯ ದೃಢ ನಿರ್ಧಾರವಿದೆಯೆಂಬುದು ಸ್ಪಷ್ಟವಾಗಿದೆ.

ಸರಕಾರದ ಧೋರಣೆಯನ್ನು ಬದಲಿಸಬೇಕಾದಲ್ಲಿ ತೀವ್ರ ಹೋರಾಟವೊಂದೇ ಉಳಿದ ದಾರಿ, ಪ್ರತಿನಿಧಿಗಳು ಸಾಯಂಕಾಲ ಶಾಸಕರ ಭವನದಲ್ಲಿ ಸೇರಿ ಮೇ ಕೊನೆ ವಾರದಲ್ಲಿ 48 ಘಂಟೆಗಳ ರಸ್ತಾರೋಕೋ ಚಳುವಳಿಯನ್ನು ನಡೆಸುವುದು, ಅದಕ್ಕಾಗಿ ವ್ಯಾಪಕವಾದ ಪ್ರಚಾರಾಂದೋಲನ ನಡೆಸುವುದೆಂದು ತೀರ್ಮಾನಿಸಿತು.

ಬಾವಿ ನಿರ್ಮಾಣಕ್ಕೆ ಡಿ.ವೈ.ಎಫ್.ಐ ನೇತೃತ್ವದಲ್ಲಿ ಶ್ರಮದಾನ

ಮಂಗಳೂರು : ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಾಗಲೀ, ಮಂಡಲ ಪಂಚಾಯತ್ ವತಿಯಿಂದಾಗಲೀ ಯಾವುದೇ ಕುಡಿಯುವ ನೀರಿನ ಸೌಲಭ್ಯ ದೊರಕದ ಸೋಮೇಶ್ವರ ಗ್ರಾಮದ ಪಲಾರ್ ಲಕ್ಷ್ಮಿ ಗುಡ್ಡೆಯಲ್ಲಿನ ಸರಕಾರೀ ನಿವೇಶನದಲ್ಲಿ ಕಳೆದ ಆರೇಳು ವರ್ಷಗಳಿಂದ ವಾಸವಾಗಿರುವ ನಿವಾಸಿಗಳು ಒಟ್ಟಾಗಿ ಶ್ರಮದಾನದ ಮೂಲಕ ಬಾವಿಯೊಂದನ್ನು ತೋಡಿದ್ದಾರೆ.

ಹತ್ತು ಅಡಿ ವೃತ್ತದ ನಲವತ್ತು ಅಡಿ ಆಳದ ಈ ಬಾವಿಯನ್ನು ದಿನಾಂಕ ಮೇ 2,1993 ರಂದು ಸಿಪಿಐ(ಎಂ) ಮುಂದಾಳು ಯು ಜನಾರ್ಧನ ನಾಕ್‌ರವರು ಉದ್ಘಾಟಿಸಿದರು.

ಸೋಮೇಶ್ವರ ಮಂಡಲದ ಮಾಜಿ ಉಪ ಪ್ರಧಾನರಾದ ಪರಮೇಶ್ವರ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಶ್ರಮದಾನದಲ್ಲಿ ಪಾಲ್ಗೊಂಡಿದ್ದ ಸೀತಾರಾಮ ಶೆಟ್ಟಿ, ಲೋಕಯ್ಯ ಗಟ್ಟಿ ಲಕ್ಷ್ಮಣ ದೇಳ್ವಾಡ, ದಿನೇಶ, ಸುಕುಮಾರ, ವಸಂತ ಪೂಜಾರಿ, ರಾಬರ್ಟ್ ರೋಡ್ರಿಗೋ, ಡ್ಯಾನಿಯಲ್, ಮಹಾಬಲ ಶೆಟ್ಟಿ ಫ್ರಾನ್ಸಿಸ್, ಕೆ. ಕೃಷ್ಣ ವಿಜಯ, ಶ್ರೀಮತಿ ಸುಂದರಿ. ಡೋರಾ ಲೋಬೋ, ಇಂದಿರಾ, ಜಾನಕಿ, ಇಂದಿರಾ ಶೆಟ್ಟಿ, ಗೀತಾ ಪ್ರಭಾವತಿಯವರನ್ನು ಗೌರವಿಸಲಾಯಿತು. ಡಿ.ವೈ.ಎಫ್.ಐ. ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಬಾಬು ಪಿಲಾರ್ ಶ್ರಮದಾನದ ನೇತೃತ್ವಹಿಸಿದ್ದರು.

ಹಿರಿಯರಾದ ಐತಪ್ಪದಾಸ್, ಕಾಂತಪ್ಪರವರು ವೇದಿಕೆಯಲ್ಲಿದ್ದರು. ಬಾಬು ಪಿಲಾರ್‌ರವರು ಧನ್ಯವಾದ ಸಮರ್ಪಿಸಿದರು.

ಮಾಸ್ಕೋದಲ್ಲಿ ಮೇದಿನ : ಕೆಂಪುಚೌಕ ಕೆಂಪಾಯಿತು

ಮಾಸ್ಕೋವಲ್ಲಿ ಮೇದಿನ. ಪ್ರಪಂಚದ ಎಲ್ಲಾ ಕಾರ್ಮಿಕವರ್ಗದ ಕಣ್ಣು ಸೆಳೆಯುತ್ತಿದ್ದ ಮೇದಿನ. ಕಾರ್ಮಿಕವರ್ಗದ ಸರ್ಕಾರವಿದು, ಜಗತ್ತಿನ ಕಾರ್ಮಿಕರೆಲ್ಲರ ಆದರ್ಶವಿದು ಎಂದು ಸಾರುತ್ತಿದ್ದ ಮೇದಿನ. ಇಂತಹ ಮೇದಿನ ಇನ್ನೆಲ್ಲಿ! ಇನ್ನೆಲ್ಲಿ!! ಎನ್ನುವಂತಾಗಿತ್ತು. ಕಾರ್ಮಿಕ ದ್ರೋಹಿ, ಬಂಡವಾಳಶಾಹಿಗಳ ಬಾಲಬುಡುಕ ಯೆಲ್ಟ್ಸಿನ್ ಆಡಳಿತವಲ್ಲಿ ಮೇದಿನ ಎಂದರೆ ಕಾರ್ಮಿಕರ ಸ್ಫೂರ್ತಿ ಚೈತನ್ಯಗಳನ್ನು ಬಡಿದೆಬ್ಬಿಸುವ ದಿನ ರಷ್ಯಾವಲ್ಲಿ ಅದು ಬಂಡವಾಳಶಾಹಿಯನ್ನು ತರಬಯಸುವ ತಮಗೆ ಮಾರಕ ಎಂದು ಅವರಿಗೆ ಅರಿವಾಗಿತ್ತು. ಇನ್ನು ಮುಂದೆ ಸರ್ಕಾರ ಮೇದಿನವನ್ನು ಸಂಘಟಿಸುವುದಿಲ್ಲ ಎಂದರು ಅವರು ಕಾರ್ಮಿಕರ ಸ್ಫೂರ್ತಿ ತನ್ನಿಂದ ತಾನೆ ತಣ್ಣಾಗಾಗುತ್ತವೆ ಎಂದು ಭ್ರಮಿಸಿದರು ಅವರು ಆದರೆ ಕಾರ್ಮಿಕರ ವಿದೇಯ ಸ್ಫೂರ್ತಿ ಗರಿ ಗಟ್ಟಿಕೊಳ್ಳಲಾರಂಭಿಸಿತ್ತು. 1992 ಮೇದಿನ ಅಲ್ಲಿ ಕಮ್ಯುನಿಸ್ಟ್ ಪಕ್ಷ ಚಿಗುರುವುದಕ್ಕೆ ಮಾರ್ಕ್ಸ್ ಲೆನಿನ್‌ವಾದದ ಪುನಸ್ಥಾಪನೆಗೆ ನಾಂದಿಹಾಕಿತ್ತು. ಮೇದಿನ ತಮ್ಮ ಬುಡಕ್ಕೆ ಬೀಳುತ್ತಿರುವ ಕೊಡಲಿ ಪೆಟ್ಟು ಎಂದು ಸರ್ವಾಧಿಕಾರಿ ಯೆಲ್ಟ್ಸಿನ್ ಬಾವಿಸಿದರು. ಮೊದಲು ಸರ್ಕಾರ ಮೇದಿನವನ್ನು ನಡೆಸುವುದಿಲ್ಲ ಎಂದವರು ಈ ಮೇದಿನ ಕೆಂಪುಚೌಕವಲ್ಲಿ- 71 ವರ್ಷಗಳ ಕಾಲ ಮೇ ದಿನ ವಿಜೃಂಭಿಸಿದ ಕೆಂಪುಚೌಕದಲ್ಲಿ, ಲೆನಿನ್ ಇನ್ನೂ ಮಲಗಿರುವ ಕೆಂಪುಚೌಕದಲ್ಲಿ ನಡೆಯಲು ಬಿಡುವುದಿಲ್ಲ ಎಂದರು. ಈ ಸಾಮ್ರಾಜ್ಯಶಾಹಿಗಳ ಏಜೆಂಟ್ ನಡೆಸಿಯೇತೀರುತ್ತೇವೆಂದಿತ್ತು. ಕಾರ್ಮಿಕರವಂಡು. ಆರಂಭವಾಯಿತು. ಮತ್ತೊಂದು ಸಂಘರ್ಷ ಕೆಂಪಾಯಿತು ಕೆಂಪು ಚೌಕ. ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಎಡಶಕ್ತಿಗಳ ನಾಯಕತ್ವವಲ್ಲಿ ಸಂಘಟಿಸಲಾಗಿದ್ದ ಸಾವಿರಾರು ಜನರು ಭಾಗವಹಿಸಿದ್ದ ರ‍್ಯಾಲಿ ಸಹ ಕೆಂಪು ಚೌಕ ಪ್ರವೇಶಿಸಿ ನಿಷೇಧ ಉಲ್ಲಂಘಿಸಿ ಸರ್ಕಾರದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲು ಅಷ್ಟೇ ದೃಢ ನಿರ್ಧಾರ ಮಾಡಿತ್ತು.

ನಿಷೇಧ ಉಲ್ಲಂಘಿಸಿ ರ‍್ಯಾಲಿ ಕೆಂಪುಚೌಕದತ್ತ ಹೋಗುತ್ತಿದ್ದಂತೆ ಭಾರಿ ದಮನ ಯಂತ್ರವನ್ನು ಪ್ರದರ್ಶನಕಾರರ ಮೇಲೆ ಹರಿಯಬಿಡಲಾಯಿತು. ಕುದುರೆ ಸವಾರಿ ಸೈನಿಕರು, ಇತರ ಸೈನಿಕರು ಭಾರಿ ಅಮಾನುಷ ಲಾಠಿ ಪ್ರಹಾರ, ಒತ್ತಡದಿಂದ ಬಿಡುವ ನೀರಿನ ಪ್ರಹಾರದಿಂದ ಪ್ರದರ್ಶನಕಾರರನ್ನು ಚದುರಿಸಲು ಪ್ರಯತ್ನಿಸಿದರು. ಈ ಪ್ರಮಾಣದ ದಮನ ಯೆಲ್ಟ್ಸಿನ್‌ರ ಇತ್ತೀಚಿನ ದಮನಕಾರಿ ತಂತ್ರಗಳಲ್ಲೂ ಅತ್ಯಂತ ಹಿಂಸಾತ್ಮಕವಾಗಿತ್ತು. 150 ಕ್ಕಿಂತಲೂ ಹೆಚ್ಚು ಜನ ತೀವ್ರವಾಗಿ ಗಾಯಗೊಂಡಿದ್ದಾರೆ ಎನ್ನಲಾಗಿದೆ.

ಈ ನಡುವೆ ಏಪ್ರಿಲ್ 25 ರಂದು ನಡೆದ ಜನಮತ ಸಂಗ್ರಹದ ಫಲಿತಾಂಶ ಬಂದಿದ್ದೆ. ರಶ್ಯಾದ 88 ಪ್ರದೇಶಗಳಲ್ಲಿ 79 ಪ್ರದೇಶಗಳ ಫಲಿತಾಂಶದ ಆಧಾರದ ಮೇಲೆ ಯೆಲ್ಟ್ಸಿನ್ನರಲ್ಲಿ ಶೇಕಡಾ 58 ಜನ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಶೇಕಡಾ 52 ಜನ ಮಾತ್ರ ಯೆಲ್ಟ್ಸಿನ್ನರ ಬಂಡವಾಳಶಾಹಿ ಪುನಃ ಸ್ಥಾಪಿಸುವ ಆರ್ಥಿಕ ಧೋರಣೆಯಲ್ಲಿ ವಿಶ್ವಾಸ ಮತ ವ್ಯಕ್ತಪಡಿಸಿದ್ದಾರೆ. ಈ ಎರಡು ವಿಷಯದಲ್ಲಿ ಜನಮತ ಬಹಳ ಸ್ವಲ್ಪ ಬಹುಮತಗಳಿಸಿದೆ. ಯೆಲ್ಟ್ಸಿನ್ ಸರ್ಕಾರ ಪಾರ್ಲಿಮೆಂಟು ನಿರ್ಧಾರದ ಪ್ರಕಾರ ಬಹುಮತ ಒಟ್ಟು ಮತದಾರರ ಸಂಖ್ಯೆಯಲ್ಲಿರಬೇಕು. ಗಮನಿಸಿದರೆ ಯೆಲ್ಟ್ಸಿನ್ ಸೋತಿದ್ದಾರೆ ಎನ್ನಬೇಕು. ಕೊನೆಯ ಗಳಿಗೆಯಲ್ಲಿ ಸಂವೈಧಾನಿಕ ಕೋರ್ಟ್ ಮತದಾನ ಮಾಡಿದ ಮತದಾರರ ಬಹುಮತ ಸಿಕ್ಕಿದರೆ ಸಾಕು ಎಂಬ ತೀರ್ಪಿನ ಪ್ರಕರಾ ಯೆಲ್ಟ್ಸಿನ್ ಪದಚ್ಯುತಿಯಿಂದ ಪಾರಾಗಿದ್ದಾರೆ.

ಆದರೂ ಉಳಿದ ಪ್ರಶ್ನೆಗಳ ಉತ್ತರ ಯೆಲ್ಟ್ಸಿನ್ನರ ವಿರುದ್ಧ ಹೋಗಿದೆ. ಪಾರ್ಲಿಮೆಂಟಿಗೆ ಚುನಾವಣೆ ಸದ್ಯದಲ್ಲೇ ಮಾಡದೇಕಿ ಎಂಬುದನ್ನು ಮತದಾರರು ತಿರಸ್ಕರಿಸಿದ್ದಾರೆ. ಅಧ್ಯಕ್ಷ ಯೆಲ್ಟ್ಸಿನ್ನರ ಸರ್ವಾಧಿಕಾರ ಹೇರುವ ಪ್ರಯತ್ನದಲ್ಲಿ ಮುಳ್ಳಾಗಿರುವ ಪಾರ್ಲಿಮೆಂಟನ್ನು ಬರ್ಖಾಸ್ತು ಮಾಡದೇಕೆಂಬ ಪ್ರಯತ್ನವನ್ನು ಮತದಾರರು ತಿರಸ್ಕರಿಸಿದ್ದಾರೆ.

ಮೊದಲೇ ನಿರೀಕ್ಷಿಸಿದಂತೆ ಈ ಜನಮತ ಸಂಗ್ರಹ ರಶ್ಯಾದ ರಾಜಕೀಯ ಅನಿಶ್ಚತೆಯನ್ನು ಯಾವುದೇ ರೀತಿಯಲ್ಲಿ ಕಡಿಮೆ ಮಾಡಿಲ್ಲ. ಯಾವುದೇ ಸಮಸ್ಯೆಯನ್ನು ಬಗೆಹರಿಸಿಲ್ಲ. ಹೆಚ್ಚಿನ ರಶ್ಯಾದ ಮತದಾರರು ಜನಮತಸಂಗ್ರಹದಲ್ಲಿ ಉತ್ಸಾಹ ತೋರರಿಲ್ಲ. ಮತದಾನದ ಶೇಕಡವಾರು ಸಂಖ್ಯೆ ಲಭ್ಯವಿಲ್ಲದಿದ್ದರೂ ಬಹಳ ಕಡಿಮೆ ಎಂದು ತಿಳಿದು ಬಂದಿದೆ.

ಯೆಲ್ಟ್ಸಿನ್ನರ ಕ್ಯಾಂಪು ಜನಮತ ಸಂಗ್ರಹ ತಮ್ಮ ಜನ ದೆಂಬಲ ಪ್ರದರ್ಶನ ಎಂದು ಹೇಳಿಕೊಂಡಿದೆ. ಅದರಿಂದಾಗಿ ಸಂವಿಧಾನ ಬದಲಾಯಿಸಿ ಪಾರ್ಲಿಮೆಂಟು ಬರ್ಖಾಸ್ತು ಮಾಡುವ ಅಧಿಕಾರ ತಮಗಿದೆ ಎಂದು ಹೇಳಲಾರಂಭಿಸಿದೆ. ಈ ಪ್ರಯತ್ನವನ್ನು ಪಾರ್ಲಿಮೆಂಟು ಪ್ರತಿರೋಧಿಸಲಿದೆ.

ರಶ್ಯಾದಲ್ಲಿ ಎರಡು ರೀತಿಯ ಅಧಿಕಾರ ಕೆಲಸ ಮಾಡುತ್ತಿದೆ. ಒಂದು ಕಡೆ ಅಧ್ಯಕ್ಷ, ಯೆಲ್ಟ್ಸಿನ್ ಮತ್ತು ಕಾರ್ಯಕಾರಿ ಅಂಗ ಇನ್ನೊಂದು ಕಡೆ ಪಾರ್ಲಿಮೆಂಟು ಪ್ರತಿನಿಧಿಸುವ ವಿಧಾಯಕ ಅಂಗ. ಸಂವಿಧಾನದ ಪ್ರಕಾರ ಅಧ್ಯಕ್ಷರಿಗೆ ಹಲವು ಅಧಿಕಾರವಿದ್ದರೂ, ಅವರ ಎಲ್ಲಾ ಕಾರ್ಯಾಚರಣೆಗಳಿಗೆ ಪಾರ್ಲಿಮೆಂಟಿನ ಅನುಮತಿ ಬೇಕು. ಅಧ್ಯಕ್ಷರು ಮತ್ತು ಪಾರ್ಲಿಮೆಂಟಿನ ನಡುವೆ ತಿಕ್ಕಾಟ ಮುಂದುವರೆಯುವವರೆಗೆ ರಶ್ಯಾದ ರಾಜಕೀಯ ಅನಿಶ್ಚತತೆ ಮುಂದುವರೆಯುತ್ತದೆ. ಯೆಲ್ಟ್ಸಿನ್ನರ ವಿರುದ್ಧ ಪಾರ್ಲಿಮೆಂಟಿನಲ್ಲಿ, ಬೀದಿಗಳಲ್ಲಿ ವ್ಯಕ್ತಗೊಳ್ಳುತ್ತಿರುವ ವಿರೋಧ ಪ್ರತಿಭಟನೆ ಗಮನಿಸಿದರೆ, ಯೆಲ್ಟ್ಸಿನ್ನರ ಸರ್ವಾಧಿಕಾರ ಬಹಳ ದಿನ ನಡೆಯಲಾರದು ಎಂದನಿಸುತ್ತದೆ.

ಶ್ರೀಲಂಕಾ ಅಧ್ಯಕ್ಷ ಪ್ರೇಮದಾಸರ ಹತ್ಯೆ

ಶ್ರೀಲಂಕಾದ ಅಧ್ಯಕ್ಷರಣಸಿಂಘ ಪ್ರೇಮದಾಸರ ಹತ್ಯೆಯಾಗಿದೆ. ಅವರು ಆಳುವ ಯುನೈಟೆಡ್ ನ್ಯಾಶನಲ್ ಪಾರ್ಟಿಯ ಮೇದಿನ ರ‍್ಯಾಲಿಯ ನಾಯಕತ್ವ ವಹಿಸಿ ಹೋಗುತ್ತಿದ್ದಾಗ ಅವರ ಹತ್ಯೆ ನಡೆದಿದೆ. ಅವರ ಜತೆ ಅವರ ರಕ್ಷಕ ದಳದ ಎಲ್ಲರೂ ಹತ್ಯೆಯಾಗಿದ್ದಾರೆ. ಒಟ್ಟು ಮೂವತ್ತು ಜನ ಸತ್ತಿದ್ದಾರೆ ಎಂದು ವರದಿಯಾಗಿದೆ. ಬಾಂಬನ್ನು ತನ್ನ ಶರೀರಕ್ಕೆ ಸುತ್ತಿಕೊಂಡು ಆತ್ಮಾಹುತಿ ಮಾಡಿಕೊಂಡ ಭಯೋತ್ಪಾದಕನ ಕೃತ್ಯದಿಂದ ಇದು ಆಗಿರಬೇಕು ಎಂದು ಶಂಕಿಸಲಾಗಿದೆ. ಹತ್ಯೆಯ ವಿಧಾನ ನೋಡಿದರೆ ಇದು ಎಲ್.ಟಿ.ಟಿ.ಇ.ನ ಕೃತ್ಯವಿರಬಹುದು ಎಂದು ಶಂಕಿಸಲಾಗಿದೆ. ಸಿಂಹಳೀ ಭಯೋತ್ಪಾದಕರೂ ಇದನ್ನು ಎಸಗಿರಬಹುದು ಎಂಬ ಶಂಕೆ ಸಹ ಇದೆ.

ಪ್ರಧಾನ ಮಂತ್ರಿ ವಿಜೆತುಂಗೆ ತಾತ್ಕಾಲಿಕವಾಗಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇಡೀ ದೇಶದಲ್ಲಿ ಕರ್ಫ್ಯೂ ವಿಧಿಸಲಾಗಿದೆ. ಈ ಹತ್ಯೆ ಶ್ರೀಲಂಕಾದಲ್ಲಿ ಈಗಾಗಲೇ ಇರುವ ರಾಜಕೀಯ ಅನಿಶ್ಚಯತೆಯನ್ನು ಇನ್ನಷ್ಟು ತೀವ್ರಗೊಳಿಸಲಿದೆ. ತಮಿಳು ಸಮಸ್ಯೆಗೆ ಪರಿಹಾರ ಇನ್ನಷ್ಟು ಕಷ್ಟವಾಗಲಿದೆ. ಶ್ರೀಲಂಕಾದ ಪ್ರಸಕ್ತ ಸಂವಿಧಾನದ ಪ್ರಕಾರ ಆರು ತಿಂಗಳೊಳಗೆ ಹೊಸ ಅಧ್ಯಕ್ಷರ ಆಯ್ಕೆ ನೇರ ಚುನಾವಣೆಗಳಿಂದ ಆಗಬೇಕು.

ಪ್ರೇಮದಾಸ ಹತ್ಯೆಗೀಡಾದ ಶ್ರೀಲಂಕಾದ ಎರಡನೇ ಅಧ್ಯಕ್ಷರು. ಮೊದಲನೆಯ ಅಧ್ಯಕ್ಷ ಭಂಡಾರ ನಾಯಕೆ ಸಹ ಹತ್ಯೆಯಾಗಿದ್ದರು. ಇತ್ತೀಚೆಗಂತೂ ಹಲವಾರು ರಾಜಕೀಯ ಮತ್ತು ಇತರ ನಾಯಕರ ಕೊಲೆ ನಡೆದಿತ್ತು. 1987 ರಲ್ಲಿ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿ ವಿರೋಧಪಕ್ಷದ ನಾಯಕ ವಿಜಯ ಕುಮಾರಣ ತುಂಗೆ, 1989 ರಲ್ಲಿ ಟುಲ್ಫ್ (TULF) ಪಕ್ಷದ ನಾಯಕ ಅಮೃತಲಿಂಗಂ, 1989ರಲ್ಲಿ ಆಗಿನ ರಕ್ಷಣಾ ಮಂತ್ರಿ ರಂಜನ್ ವಿಜಯರತ್ನೆ, ಇತ್ತೀಚೆಗೆ ಕೆಲವೇ ದಿನಗಳ ಹಿಂದೆ ಆಳುವ ಪಕ್ಷದಿಂದ ಸಿಡಿದು ಹೊಸ ಪಕ್ಷ ಕಟ್ಟಿದ ಲಲಿತ್ ಅತುಲತ್ ಮೊದಲಿ ಕೊಲೆ ನಡೆದಿದೆ. 1992 ರಲ್ಲಿ ಉತ್ತರ ವಿಭಾಗದ ಮಿಲಿಟರಿ ಕಮಾಂಡರ್ ಹಾಗೂ ನೌಕಾ ಸೇನಾ ಮುಖ್ಯಸ್ಥರ ಕೊಲೆ ನಡೆದಿತ್ತು.

80ರ ದಶಕದಿಂದೀಚೆಗೆ ತಮಿಳು-ಸಿಂಹಳಿ ಜನಾಂಗೀಯ ಸಮಸ್ಯೆಗೆ ಪ್ರಜಾಸತ್ತಾತ್ಮಕ ಪರಿಹಾರ ಹುಡುಕುವುದರಲ್ಲಿ ವಿಫಲತೆ, ಆಳುವ ವರ್ಗ ಮಿಲಿಟರಿ ಪರಿಹಾರ ಹುಡುಕ ಹೊರಟಿದ್ದು ಶ್ರೀಲಂಕಾದ ಈಗಿನ ಎಲ್ಲಾ ಸಮಸ್ಯೆಗಳ ಮೂಲ. ಶ್ರೀಲಂಕಾದ ಆಳುವ ವರ್ಗ ಜನತೆಯ ನಿಜವಾದ ಸಮಸ್ಯೆಗಳಿಂದ ಗಮನ ಬೇರೆಡೆ ಹರಿಸಲು ಜನಾಂಗೀಯ ಸಮಸ್ಯೆಯನ್ನು ಬಳಸಲು ಆರಂಭಿಸಿದ್ದು, ಸಿಂಹಳಿ ಹಾಗೂ ತಮಿಳು ಎರಡೂ ಜನಾಂಗಗಳಲ್ಲೂ ಪ್ರತ್ಯೇಕತಾವಾದಿ ಭಯೋತ್ಪಾದಕರ ಗುಂಪುಗಳಿಗೆ ಉತ್ತೇಜನ ನೀಡಿದಂತಾಯಿತು. ಈಗಿನ ಹತ್ಯೆಗಳ ಭಯೋತ್ಪಾದಕ ರಾಜಕೀಯ ಇದರ ನೇರ ಫಲ.

ಇಟಲಿ ಹೊಸ ಸರ್ಕಾರ ಪುನಃ ಬಿಕ್ಕಟ್ಟಿನಲ್ಲಿ

ಇಟಲಿಯಲ್ಲಿ ಸಂವಿಧಾನ ತಿದ್ದುಪಡಿ ಮಾಡಿ ಹೊಸ ಚುನಾವಣೆ ಪದ್ಧತಿ ತರುವ ಕೆಲಸ ಮಾಡಬೇಕಾದ ತಾತ್ಕಾಲಿಕ ಸರ್ಕಾರ ಸಹ ಬಿಕ್ಕಟ್ಟಿನಲ್ಲಿದೆ. ಇಟಲಿಯನ್ನು ಕಳೆದ 50 ವರ್ಷ ಆಳಿದ ಪಕ್ಷಗಳ ನಾಯಕರಿಗೆ ಅಂಟಿದ ಕಳಂಕ ಅದನ್ನು ಬಿಟ್ಟಿಲ್ಲ.

ಇಟಲಿಯಲ್ಲಿ ಚುನಾವಣಾ ಪದ್ಧತಿ ಬದಲಾಯಿಸಲು ನಡೆಸಿದ ಜನಮತಸಂಗ್ರಹ ನಂತರ ಅಧ್ಯಕ್ಷರು ಹೊಸ ಪ್ರಧಾನ ಮಂತ್ರಿಯನ್ನು ನೇಮಿಸಿದರು. ಯಾವ ಪಕ್ಷಕ್ಕೂ ಸೇರಿರದ, ಇಟಲಿಯ ಕೇಂದ್ರೀಯ ಬ್ಯಾಂಕ್ ಗವರ್ನರ್ ಕಾಲೇಶಾಕ ಸಿಯಾಂಪಿ ಅವರನ್ನು ಹೊಸ ಪ್ರಧಾನಿಯಾದಾಗ ಹೊಸ ಚುನಾವಣೆ ನಡೆಯುವವರೆಗಿನ ತಾತ್ಕಾಲಿಕ ಅವಧಿಯಲ್ಲಿ ಆರ್ಥಿಕ ಅಲ್ಲೋಲಕಲ್ಲೋಲ, ರಾಜಕೀಯ ಅರಾಜಕತೆ ಎಡೆಕೊಡದಂತೆ ಕಾಯ್ದುಕೊಳ್ಳುವುದು ಈ ಸರ್ಕಾರದ ಜವಾಬ್ದಾರಿಯಾಗಿತ್ತು.

ಇದು ಸರ್ವಪಕ್ಷೀಯ ರಾಷ್ಟ್ರೀಯ ಸರ್ಕಾರದಂತೆ ಕೆಲಸ ಮಾಡುತ್ತಿತ್ತು. ಇದರಲ್ಲಿ ಮಾಜಿ ಕಮ್ಯುನಿಸ್ಟ್ ಪಕ್ಷ ಹಾಗೂ ಹಸಿರು ಪಕ್ಷದ ಪ್ರತಿನಿಧಿಗಳು ಮಂತ್ರಿಗಳಾಗಿದ್ದರು. ಈ ಎರಡು ಪಕ್ಷಗಳು ಸರಕಾರದಲ್ಲಿ ಭಾಗವಹಿಸುತ್ತಿರುವುದು ಕಳೆದ ಐವತ್ತು ವರ್ಷಗಳಲ್ಲಿ ಇದೇ ಮೊದಲು. ಈ ವರೆಗೆ ನಡೆಯುತ್ತಿದ್ದ ಎಲ್ಲಾ ಸಮ್ಮಿಶ್ರ ಸರಕಾರಗಳ ಮುಖ್ಯ ಉದ್ದೇಶ ಕಮ್ಯುನಿಸ್ಟರನ್ನು ಅಧಿಕಾರದಿಂದ ಹೊರಗಿಡುವುದಾಗಿತ್ತು.

ಆದರೆ ಪಾರ್ಲಿಮೆಂಟು ಮಾಫಿಯಾ ಜತೆ ಸಂಬಂಧವಿಟ್ಟುಕೊಂಡು ಹಲವುರೀತಿಯ ಭ್ರಷ್ಟಚಾರದ ಆಪಾದನೆಗೆ ಗುರಿಯಾಗಿರುವ ಮಾಜಿ ಸೋಶಲಿಸ್ಟ್ ಪ್ರಧಾನಿ ಬೆಟ್ಟಿನೋ ಕ್ರಾಕ್ಸಿ ಅವರ ಮೇಲಿರುವ ಎರಡು ಸಣ್ಣ ಆಪಾದನೆ ಬಿಟ್ಟು ಉಳಿದೆಲ್ಲ ಆಪಾದನೆಗಳಿಂದ ಅವರನ್ನು ಮುಕ್ತ ಮಾಡುವ ನಿರ್ಣಯವನ್ನು ಪಾಸು ಮಾಡಿತು. ಇದಕ್ಕೆ ಹಿಂದೆ ಆಳುವ ಪಕ್ಷಗಳಾಗಿದ್ದ ಸೋಶಲಿಸ್ಟ್ ಹಾಗೂ ಕ್ರಿಶ್ಚಿಯನ್ ಡೆಮೋಕ್ರಾಟರು ದೆಂಬಲಿಸಿದರು. ಇದರ ವಿರುದ್ಧ ಮಾಜಿ ಕಮ್ಯುನಿಸ್ಟ್ ಪಕ್ಷದ ಹಾಗೂ ಹಸಿರು ಪಕ್ಷ ಮತ ನೀಡಿತು. ಭ್ರಷ್ಟಾಚಾರ, ಕ್ರಿಮಿನಲ್ ಅಪರಾಧಗಳನ್ನು ಮುಚ್ಚಿ ಹಾಕುವ ಈ ನಾಚಿಕೆಗೇಡು ಕೃತ್ಯದ ವಿರುದ್ಧ ಕಮ್ಯುನಿಸ್ಟ್ ಪಕ್ಷ ಹಾಗೂ ಹಸಿರು ಪಕ್ಷದ ಪ್ರತಿನಿಧಿಗಳು ಸರ್ಕಾರದಿಂದ ರಾಜಿನಾಮೆ ನೀಡಿದ್ದಾರೆ. ಇದು ಇಟಲಿಯ ತಾತ್ಕಾಲಿಕ ಸರ್ಕಾರವನ್ನು ಬಿಕ್ಕಟ್ಟಿಗೆ ಸಿಕ್ಕಿಸಿದೆ. ●



ಮೇ ದಿನದ ಮೆರವಣಿಗೆಯ ಒಂದು ದೃಶ್ಯ

ಬೆಂಗಳೂರಿನಲ್ಲಿ ವಿಶಾಲ ಐಕ್ಯತೆಯ ಮೇ ದಿನಾಚರಣೆ

ದುಡಿಯುವ ಜನಗಳ ನಡುವೆ ಹೆಚ್ಚೆಚ್ಚು ಐಕ್ಯತೆ ಇರಬೇಕೆಂಬ ಬಂಡವಾಳಶಾಹಿ ಪದ್ಧತಿ ದೇಶದ, ವಿಶ್ವದ ಸಮಸ್ಯೆಗಳಿಗೆ ಪರಿಹಾರ ನೀಡಲಾರದೆಂಬ ಅರಿವು ಬಾರಿಯ ಮೇ ದಿನಾಚರಣೆಯಲ್ಲಿ ಎದ್ದು ಕಾಣುತ್ತಿತ್ತು. ಬೆಂಗಳೂರಿನಲ್ಲಿ ಈ ಬಾರಿ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್., ಮತ್ತಿತರ ಒಟ್ಟು 14 ಸಂಘಟನೆಗಳಿರುವ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಮೇ ದಿನಾಚರಣೆ ನಡೆಯಿತು. ಸಿ.ಐ.ಟಿ.ಯು ರಾಜ್ಯ ಅಧ್ಯಕ್ಷ, ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು. ಎ.ಐ.ಟಿ.ಯು.ಸಿ. ಮುಖಂಡ ಮಹದೇವನ್, ಹೆಚ್.ಎಂ.ಎಸ್.ನ ರಾಮದೇವ್ ಜೆ.ಎ.ಎಫ್ ಮುಖಂಡರು, ಹೆಚ್. ಎಂ.ಕೆ.ಪಿ. ರಾಮೇಗೌಡ, ಸಿ.ಐ.ಟಿ.ಯು. ಪರವಾಗಿ ವಿ.ಜೆ.ಕೆ. ನಾಯರ್ ಹಾಗೂ ಯುಟಿಯುಸಿ (ಲೆನಿನ್ ಸರಣಿ) ಪರವಾಗಿ ಸಿಂಹಾದ್ರಿ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ರ‍್ಯಾಲಿಯ ಮೊದಲು ಕಾರ್ಮಿಕರು ಭವ್ಯಮೆರವಣಿಗೆ ನಡೆಸಿದರು.

ಸಮಾಜವಾದಿ ವ್ಯವಸ್ಥೆಯ ಬಗ್ಗೆ ಅಪಪ್ರಚಾರದಲ್ಲಿ ತೊಡಗಿರುವ ಬಂಡವಾಳಶಾಹಿ ರಾಷ್ಟ್ರಗಳು ಆರ್ಥಿಕರಂಗದಲ್ಲಿ ತೀವ್ರ ರೀತಿಯಲ್ಲಿ ಹಿಂಜರಿಯುತ್ತಿವೆ. ಮುಂದುವರೆದ ದೇಶಗಳಲ್ಲಿ ನಿರುದ್ಯೋಗ, ಭ್ರಷ್ಟಚಾರ, ಬಡವ-ಶ್ರೀಮಂತ ನಡುವಿನ ಅಂತರವೂ ಹೆಚ್ಚುತ್ತಿದೆ. ಮುಕ್ತ ಮಾರುಕಟ್ಟೆ ನೀತಿ ಜನಗಳ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ ಎಂಬ ಮತ್ತೊಮ್ಮೆ ಸಿದ್ಧವಾಗುತ್ತಿದೆ. ಸಮಾಜವಾದಿ ವ್ಯವಸ್ಥೆಯಿಂದ ಮಾತ್ರ ದುಡಿಯುವ ವರ್ಗದ ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂಬುದೂ ಕಾರ್ಮಿಕರ ಅರಿವಿಗೆ ಮತ್ತೆ ಬರಲಾರಂಭಿಸಿದೆ. ವಿಶ್ವದ ಎಲ್ಲೆಡೆ ದುಡಿಯುವ ವರ್ಗದ ಮರುಸಂಘಟನೆಯಾಗುತ್ತಿದೆ ಎಂದ ಕಾಂ. ಸೂರಿ ಈ ಪರಿಸ್ಥಿತಿಯಲ್ಲಿ ಅಮೆರಿಕಾದ ಹತೋಟಿಯಿರುವ ಐ.ಎಂ.ಎಫ್- ವಿಶ್ವಬ್ಯಾಂಕ್‌ಗಳು ಹೇಳಿದಂತೆ ಕುಣಿಯುವ ನರಸಿಂಹರಾವ್ ಸರಕಾರ ಸ್ವಾವಲಂಬನೆಯ ನೀತಿ ಬದಿಗಿಟ್ಟು ದೇಶವನ್ನು ಅಪಾಯದ ಅಂಚಿಗೆ ತಳ್ಳಿದೆಯೆಂದರು. ಅತ್ತ ಕೋಮುವಾದಿ ಶಕ್ತಿಗಳೂ ಜನತೆಯನ್ನು ಒಡೆಯಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಸಂಘಟಿತ ಕಾರ್ಮಿಕರ ಜವಾಬ್ದಾರಿ ದೊಡ್ಡದಾಗಿದೆ, ಮುಂಬರುವ ಭಾರತ್‌ಬಂದ್, ಕೈಗಾರಿಕಾ ಮುಷ್ಕರ ಕಾರ್ಯಾಚರಣೆಗಳನ್ನು ಯಶಸ್ವಿಗೊಳಿಸಬೇಕು ಎಂದು ಅವರು ಕರೆನೀಡಿದರು.

ಒಂದು ಶತಮಾನ ಕಳೆದರೂ ಮೇ ದಿನ ಬೇಡಿಕೆ ಭಾರತದ ಬಹುಪಾಲು ಅಸಂಘಟಿತ ಕಾರ್ಮಿಕರ ಮಟ್ಟಿಗೆ ಇನ್ನೂ ಈಡೇರಿಲ್ಲ ಎಂದು ಎ.ಐ.ಟಿ.ಯು.ಸಿ. ಮಹದೇವನ್ ಹಾಗೂ ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ನೆನಪಿಸಿದರು. ಮೇದಿನ ರ‍್ಯಾಲಿಗಳಲ್ಲಿ ಅಸಂಘಟಿತ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವಂತೆ ಎಲ್ಲಾ ಪ್ರಯತ್ನ ಅಗತ್ಯ ಎಂದು ವಿ.ಜೆ.ಕೆ. ನಾಯರ್ ಒತ್ತಿ ಹೇಳಿದರು. ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಹೋರಾಟದಲ್ಲಿ ದುಡಿಯುವ ವರ್ಗದ ಐಕ್ಯತೆ ಮೂಡಿದೆ. ಇದನ್ನು ಬಲಗೊಳಿಸಬೇಕು ಎಂದು ಹೆಚ್.ಎಂ.ಎಸ್. ಹಾಗೂ ಜೆ.ಎ.ಎಫ್ ಮುಖಂಡರು ಆಶಿಸಿದರು. ದುಡಿಯುವ ಜನಗಳ ಐಕ್ಯತೆಯನ್ನು ಒಡೆಯುತ್ತಿರುವ ಹಿಂದುತ್ವವಾದಿಗಳ ತಂತ್ರವನ್ನು ರ‍್ಯಾಲಿಯಲ್ಲಿ ಎಲ್ಲಾ ಭಾಷಣಕಾರರು ಬಯಲಿಗೆಳೆದರು. ಹಿಂದುತ್ವ ಮುಸ್ಲಿಂ-ವಿರೋಧಿಯಷ್ಟೇ ಅಲ್ಲ. ಅದು ಶೂದ್ರ ವಿರೋಧಿ ಕೂಡಾ, ಅದನ್ನು ಒಪ್ಪುವುದೆಂದರೆ ಶೂದ್ರ ಗುಲಾಮಿಕೆಯನ್ನು ಮತ್ತೆ ಮುಂದುವರೆಸುವುದೆಂದೇ ಅರ್ಥ ಎಂದು ಹೆಚ್.ಎಂ.ಕೆ.ಪಿ. ಮುಖಂಡರು ಎಚ್ಚರಿಸಿದರೆ, ಹಿಂದೂ ಬಂಡವಾಳಶಾಹಿಗಳ ಹಿಂದೂ ಕಾರ್ಮಿಕರ ಹಿತಾಸಕ್ತಿಗಳು ಬೇರೆ-ಬೇರೆಯಾದದ್ದು, ಹಿಂದೂ-ಮುಸ್ಲಿಂ ಕಾರ್ಮಿಕರ, ದುಡಿಯುವ ಜನಗಳ ಹಿತಾಸಕ್ತಿ ಒಂದೇ ಎಂದು ಯು.ಟಿ.ಯು.ಸಿ.(ಲೆನಿನ್ ಸರಣಿ) ಮುಖಂಡರು ಹೇಳಿದರು.

ಕೇಂದ್ರದ ರಾಷ್ಟ್ರ-ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ದುಡಿಯುವ ವರ್ಗ-ಎಲ್ಲ ದೇಶಪ್ರೇಮಿ ಶಕ್ತಿಗಳ ಜತೆಗೂಡಿ ಹೋರಾಡುವ ಮೂಲಕ ಪರ್ಯಾಯ ಆರ್ಥಿಕ ಮತ್ತು ಕೈಗಾರಿಕಾ ನೀತಿ ರೂಪಿಸಿ ಸ್ವಾವಲಂಬನೆಯ ಭಾರತ ಕಟ್ಟುವ ಕಡೆಗೆ ಹೆಜ್ಜೆ ಇಡಬೇಕು, ದುಡಿಯುವ ವರ್ಗದ ಐಕ್ಯತೆಯನ್ನು ಮುರಿಯುವವರನ್ನು ಮೂಲೆ ಗುಂಪು ಮಾಡಬೇಕು ಎಂಬ ಮೇದಿನ ಪ್ರತಿಜ್ಞೆ ಈ ರ‍್ಯಾಲಿಯಲ್ಲಿ ಕೇಳಬಂತು.

ರ‍್ಯಾಲಿಯ ಆರಂಭದಲ್ಲಿ ಸಿ.ಐ.ಟಿ.ಯು ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಎಸ್. ಸುಬ್ರಮಣ್ಯ ಸ್ವಾಗತಿಸಿದರು. ಎ.ಐ.ಟಿ.ಯು.ಸಿ. ಮುಖಂಡ ಬಾಲಕೃಷ್ಣ ಕೊನೆಯಲ್ಲಿ ವಂದಿಸಿದರು. ●

ಇರಾಕ್‌ನಲ್ಲಿ ಕಾಂ.ಸೂರಿ

ಪುಟ 8 ರಿಂದ

ದ್ದಾರೆ. ವಿಶ್ವಸಂಸ್ಥೆ ನಿರ್ಬಂಧ ಹೋಗಬೇಕೆಂದು ಬಹಳ ಒತ್ತು ನೀಡಿದರು.

ಪ್ರಶ್ನೆ: ಜರ್ಮನಿಯಲ್ಲೂ ಎರಡು ದಿನಗಳಿದ್ದಿರಲ್ಲಾ! ಈಗ ಹೇಗಿದೆ.

ಸೂರಿ : ಹೆಚ್ಚಿಗೆ ಏನೂ ನೋಡಲಾಗಲಿಲ್ಲ. ಆರೋಗ್ಯ ತಪಾಸಣೆಗೆ ಮಾತ್ರ ಇದ್ದದ್ದು ಆದರೂ ಬಂಡವಾಳಶಾಹಿ ವ್ಯವಸ್ಥೆಯ ಫಲಗಳು, ದುರ್ನಾತ ರಾಚುತ್ತದೆ. ದಾರಿದ್ರ್ಯತೆ ಕಾಣುತ್ತಿದೆ. ನಿರುದ್ಯೋಗ ವಿಪರೀತವಾಗಿ ಹೆಚ್ಚುತ್ತಿದೆ. ಹಣದುಬ್ಬರವಿದೆ. ಅಲ್ಲಿಯ ಪತ್ರಿಕೆಗಳಲ್ಲಿ ನಿರುದ್ಯೋಗದ ಧಾರಣ ಸ್ಥಿತಿಯ ಬಗ್ಗೆ ವರದಿಗಳು ಪ್ರಕಟವಾಗುತ್ತವೆ. ಬಹಳ ಬೃಹತ್ ಉದ್ದಿಮೆಯಾದ 'ಓಕ್ಸ್ ವ್ಯಾಗನ್' ಕಾರ್ಖಾನೆಯ 20 ಸಾವಿರ ಕಾರ್ಮಿಕರನ್ನು ಕೆಲಸದಿಂದ ತೆಗೆಯಲಾಗಿದೆ (ರಿಟ್ರೆಂಚ್), ಅವರು ಹೋರಾಟಕ್ಕೆ ಅಣಿಯಾಗುತ್ತಿದ್ದರು. ಬಂಡವಾಳಶಾಹಿಯೇ ಮಾನವ ಸಮುದಾಯದ ಅಂತಿಮ ಫಲ, ಸ್ವರ್ಗ ನೀಡುತ್ತದೆ ಎಂಬ ಹೊಸ ಪ್ರಚಾರ ಬಯಲಾಗುತ್ತಿದೆ. ಬಂಡವಾಳಶಾಹಿ ಎಂದಿಗೂ ಪರಿಹಾರವೇ ಅಲ್ಲ.

ಬೆಳೆಯುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕೊಡಲು ಆಳುವ ವರ್ಗ ವಿಫಲವಾಗಿದೆ. ಮುಖ್ಯವಾಗಿ ನಿರುದ್ಯೋಗದ ಪ್ರಶ್ನೆ ಅಪಾಯಕಾರಿಯಾದ ಬೆಳವಣಿಗೆಯೆಂದರೆ ನಿರುದ್ಯೋಗಿಗಳ ನಡುವೆ ನವ ನಾಜಿಗಳು ತಲೆಎತ್ತಿದ್ದಾರೆ. ಜನಾಂಗ ದ್ವೇಷ ಹುಟ್ಟು ಹಾಕಲಾಗುತ್ತಿದೆ. ಜನರನ್ನು ಒಡೆಯಲು ದ್ವೇಷ ಬಳಸಲಾಗುತ್ತಿದೆ. ಇದರ ವಿರುದ್ಧವಾಗಿ ಹೋರಾಟಗಳು ಬೆಳೆಯುತ್ತಿವೆ.

ಪ್ರಶ್ನೆ: ಮೂರನೆಯ ಜಗತ್ತಿನ ರಾಷ್ಟ್ರವಾಗಿ ಭಾರತ ಇರಾಕ್‌ಗೆ ಹೇಗೆ ಸಹಕಾರ ನೀಡುತ್ತಿದೆ?

ಸೂರಿ: ಈ ಬಗ್ಗೆ ಅಲ್ಲಿಯ ಉಪಾಧ್ಯಕ್ಷರು ತುಂಬಾ ಕಟುವಾಗಿ ಹೇಳಿದರು. "ಭಾರತ ಸರಕಾರವು ಒಂದು ಅಧಿಕಾರಯುತವಾದ ನಿಯೋಗವನ್ನು ಇರಾಕ್ ಸ್ಥಿತಿ ವೀಕ್ಷಿಸಲು ಕಳಿಸಿ ಎಂದು ಕೇಳಿಕೊಂಡದ್ದಕ್ಕೆ ಅನುಕೂಲಕರವಾದ ಉತ್ತರವೇ ಬರಲಿಲ್ಲ. ಭಾರತ ನಮಗೆ ಸಹಾಯ ನೀಡಲು ತುಂಬಾ ಹಿಂಜರಿಕೆ ತೋರುತ್ತಿದೆ. ಅಮೇರಿಕಾ ಒತ್ತಡ ವಿರಬೇಕು. ಅಮೇರಿಕಾ ದೇಶದ ಒತ್ತಡಕ್ಕೆ ಒಳಗಾದರೆ ಆಗುವ ದುಷ್ಪರಿಣಾಮಗಳ ಬಗ್ಗೆ ನಿಮ್ಮ ಸರ್ಕಾರಕ್ಕೆ ಅರಿವಿಲ್ಲವೇ ಎಂದು ಕೇಳಿದರು."

ಭಾರತ ದೇಶದ ಜನ ಸಾಮ್ರಾಜ್ಯಶಾಹಿ ವಿರುದ್ಧ ಎದ್ದು ನಿಲ್ಲಬೇಕು. ಇರಾಕ್ ಜನರಲ್ಲಿರುವ ಕಾಲು ಭಾಗದಷ್ಟು ದೇಶಪ್ರೇಮ ಕಾರ್ಯಾಚರಣೆಗೆ ಇಳಿದರೆ ಇಂದಿನ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಬಹುದು ಎಂದು ಕೊನೆಯದಾಗಿ ಹೇಳಬಯಸುತ್ತೇನೆ.

ಹೌದು ಭಾರತ ಸರಕಾರ ಸಾಮ್ರಾಜ್ಯಶಾಹಿಗೆ ಶರಣಾಗುತ್ತಿದೆ. ಜನರ ಮೇಲಿನ ದುಷ್ಪರಿಣಾಮಗಳ ಅರಿವಿಲ್ಲವೇ ಎಂದರೆ ಖಂಡಿತ ಇದೆ. ನಿದ್ದೆ ಮಾಡುವವರನ್ನು ಎಬ್ಬಿಸಬಹುದು ಆದರೆ ನಿದ್ದೆ ಮಾಡಿದಂತೆ ನಟಿಸುವವರನ್ನು ಎಬ್ಬಿಸಲಾಗದು. ಅದನ್ನು ಅಂಕೆ ತಪ್ಪಿದಾಗ [illegible] ಬೇಕಾದದ್ದು ಜನತೆಯೇ ತಾನೆ.

KRNM/BGS-405 MAG(2) PRB DECR 319-78/79

ಇರಾಕ್‌ನಲ್ಲಿ ಕಾಂ. ಸೂರಿ

"ಸಾಮ್ರಾಜ್ಯಶಾಹಿಗಳ ವಿರುದ್ಧ ಸೆಟೆದು ನಿಂತಿರುವ ಜನತೆ"

ಸಂದರ್ಶನ: ಎಸ್. ವೈ. ಗುರುಶಾಂತ್

ಇರಾಕ್, ಇರಾಕ್, ಎಂಬ ಹೆಸರಿಂದು ಜಗತ್ತಿನಲ್ಲೆಲ್ಲಾ ಇರಾಕ್ ಮನೆಮಾತಿಗೆ. ಅಮೇರಿಕಾದ ಅಂತರರಾಷ್ಟ್ರೀಯ ದರೋಡೆಕೋರತನದ ವಿರುದ್ಧ ಹೋರಾಟದ ಸಂಕೇತವಾಗಿದೆ. ಸಮಾಜವಾದಿ ರಷ್ಯಾದ ಕುಸಿತದ ನಂತರ ಅರರೆ, ಎನ್ನಯ ಸಮಾನರಾರಿಹರು ಎಂದು ಅರ್ಭಟಿಸುತ್ತಿದ್ದ ಅಮೇರಿಕಾದ ವರ್ಚಕ್ಕೆ ಬಲವಾದ ಪೆಟ್ಟಾಗಿದೆ. ಸಾಮ್ರಾಜ್ಯಶಾಹಿಗಳ ವಿರುದ್ಧ ಅರೇಬಿಯಾದಜನರ ಕೋಪಕ್ಕೆ ಸ್ಫೂರ್ತಿ ಕೇಂದ್ರವಾಗಿದೆ.

ಅಮೇರಿಕಾದ ತಾರಾಯುದ್ಧ ತಂತ್ರಗಳ ಧಾಳಿಯಲ್ಲಿ ನುಜ್ಜುಗಜ್ಜಾಗಿದ್ದರೂ ಸೆಟೆದುನಿಂತಿದೆ. ಇಂದಿಗೂ ಅಮೇರಿಕಾಪ್ರೇರಿತ ಅಂತರರಾಷ್ಟ್ರೀಯ ಬಹಿಷ್ಕಾರಕ್ಕೆ ಈಡಾಗಿ ಕಡುಕಷ್ಟದಲ್ಲಿದೆ.

ಇಂತಹ ಇರಾಕಿಗೆ ನಾವು ನಿಮ್ಮೊಂದಿಗಿದ್ದೇವೆ ಎಂದು ಸಾರಲು ಭೇಟಿ ನೀಡಿದ ಸೂರಿಯವರ ಸಂದರ್ಶನ.

'ಜನರಲ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ ಇರಾಕ್' ವತಿಯಿಂದ ಸಿ.ಐ.ಟಿ. ಯುವಿನ ನಿಯೋಗಕ್ಕೆ ಆಹ್ವಾನಬಂದಿತ್ತು. ಆರು ತಿಂಗಳ ಹಿಂದೆಯೇ ಈ ನಿಯೋಗಕ್ಕೆ ಇರಾಕ್‌ಗೆ ಭೇಟಿ ನೀಡಬೇಕಿತ್ತು. ಆದರೆ ಹಲವಾರು ಕುಂಟು ನೆಪ ಹೇಳಿ ಭಾರತ ಸರ್ಕಾರ ಅನುವು ಮಾಡಿರಲಿಲ್ಲ. ಈ ನಿಯೋಗ ಎಪ್ರಿಲ್ 8ರಿಂದ 15 ರವರೆಗೆ ಇರಾಕ್‌ನಲ್ಲಿದ್ದು ವಾಪಾಸಾಯಿತು. ಸಿ.ಐ.ಟಿ.ಯು ಅಖಿಲ ಭಾರತ ಉಪಾಧ್ಯಕ್ಷರೂ, ರಾಜ್ಯದ ಅಧ್ಯಕ್ಷರೂ ಆದ ಕಾಂ. ಎಸ್. ಸೂರ್ಯನಾರಾಯಣ ರಾವ್ ನೇತೃತ್ವದ ನಿಯೋಗದಲ್ಲಿ ಪ.ಬಂಗಾಳದ ಕಾಂ. ಸುಖೋಮಯ್ ಪಾಲ್, ಕಾಂ. ಘಟಕ್ ಅಮಲೇಂದು ಇದ್ದರು.

ಪ್ರಶ್ನೆ: ಏಕೀಕೃತ ಜಗತ್ತಿನ ಬಗ್ಗೆ ಭಾರಿ ಪ್ರಚಾರ ಎಲ್ಲೆಡೆ ನಡೆದಿದೆ. ಈ ಸಂದರ್ಭದಲ್ಲಿ ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲೊಂದಾಗಿರುವ ಇರಾಕ್‌ಗೆ ನಿಮ್ಮ ನಿಯೋಗದ ಭೇಟಿಯ ಮಹತ್ವವೇನು?

ಸೂರಿ: ಅಮೇರಿಕಾ ಇರಾಕ್ ಮೇಲೆ ನಿರ್ಬಂಧ ಹೇರಿದೆ. ಸಮಾಜವಾದಿ ಸೋವಿಯತ್ ಯೂನಿಯನ್ ಕುಸಿದ ಬಳಿಕ ಜಗತ್ತಿನ ಪೋಲೀಸನಂತೆ ಅಮೇರಿಕಾ ವರ್ತಿಸತೊಡಗಿದೆ. ಈ ಉದ್ದೇಶದಿಂದಲೇ ಅಮೇರಿಕಾ ಮತ್ತು ಇತರ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕೆಲವು ಕೈಗೊಂಬೆ ಅರಬ್ ರಾಷ್ಟ್ರಗಳ ಸಹಾಯದಿಂದ ಇರಾಕ್ ಮೇಲೆ ಅಮಾನುಷವಾದ ಯುದ್ಧ ಮಾಡಿತು. ಅತ್ಯಾಧುನಿಕ ಮಾರಕಾಸ್ತ್ರಗಳನ್ನು ಪ್ರಯೋಗಿಸಿ ಸೇತುವೆ, ವಿದ್ಯುತ್‌ಚ್ಛಕ್ತಿ ಸ್ಥಾವರ, ತೈಲ ಉತ್ಪಾದನಾ ಕೇಂದ್ರ, ಶಾಲಾ ಕಾಲೇಜ್, ಆಸ್ಪತ್ರೆ, ಮುಂತಾಗಿ ನಾಶಪಡಿಸಿತು. ನಾಗರೀಕರ ಮೇಲೆ ಬರ್ಬರ ಬಾಂಬ್ ಧಾಳಿ ನಡೆಸಿ ಸಾವಿರಾರು ಜನರನ್ನು ಕೊಂದಿತು. ಉದ್ದೇಶ ಇಷ್ಟೇ. ಸ್ವಾಭಿಮಾನಿಯಾದ ಇರಾಕ್‌ನ್ನೂ ತನ್ನ ಕೈಗೊಂಬೆಯನ್ನಾಗಿಸಿ ಕೊಳ್ಳಬೇಕು. ಲೂಟಿಮಾಡಲು ಮುಕ್ತ ಅವಕಾಶವಿರಬೇಕು ಎಂಬುದಾಗಿದೆ. ಅದಕ್ಕಾಗಿಯೇ ಸದ್ದಾಂ ಹುಸೇನನ್ನು ಪದಚ್ಯುತಿಗೊಳಿಸಲು ಮಸಲತ್ತು ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಇರಾಕ್‌ನ ನಿಜವಾದ ಸ್ಥಿತಿ, ಅಲ್ಲಿಯ ಜನರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ, ಮತ್ತು ಸೌಹಾರ್ದತೆ ವ್ಯಕ್ತಪಡಿಸಲು ನಮ್ಮ ನಿಯೋಗವನ್ನು 'ಜನರಲ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್' ಅಧ್ಯಕ್ಷರಾದ ಹೈದರ್ ಗಾಲಿಬ್‌ರವರು ಆಹ್ವಾನಿಸಿದ್ದರು.

ಪ್ರಶ್ನೆ: ಸದ್ದಾಂನನ್ನು ಪದಚ್ಯುತಿಗೊಳಿಸಲಾಗುತ್ತಿದೆ ಎಂದಿರಿ. ಎಂತಹ ಮಸಲತ್ತು ಅದು?

ಸೂರಿ: ಕುವೈತ್ತನ್ನು ಬಿಡುಗಡೆಗೆಂದು ಘೋರ ಯುದ್ಧವಾಯ್ತು. ಅನಂತರವೂ ವಿವಿಧ ರೀತಿಯಲ್ಲಿ ಅಮೇರಿಕಾ ಯುದ್ಧವನ್ನು ಮುಂದುವರಿಸಿದೆ ಷಿಯಾ-ಸುನ್ನಿಗಳಿಗೆ ಘರ್ಷಣೆ ಉಂಟುಮಾಡುವುದು, ಷಿಯಾ ಖುರ್ದಿಷ್ ಜನಾಂಗಗಳಿಗೆ ಕಿರುಕುಳ ನೀಡಲಾಗಿತ್ತದೆಯೆಂದು ನೆಪವೊಡ್ಡಿ ಆ ಪ್ರದೇಶದಲ್ಲಿ ವಿಮಾನ ಹಾರಾಟ ನಿಷೇಧಿತ ಪ್ರದೇಶವೆಂದು ವಿಶ್ವಸಂಸ್ಥೆಯಿಂದ ಘೋಷಿಸಲಾಗಿದೆ. ಇದು ದೇಶವೊಂದರ ಸಾರ್ವಭೌಮತ್ವಕ್ಕೆ ದೊಡ್ಡ ಪೆಟ್ಟು. ಅಮೇರಿಕಾದ ಆದೇಶಗಳು ವಿಶ್ವಸಂಸ್ಥೆಯ ಮೂಲಕ ಬರುತ್ತಿವೆಯಷ್ಟೆ. ಆ ಪ್ರದೇಶದಲ್ಲಿ ಅಮೇರಿಕಾ, ಫ್ರಾನ್ಸ್ ಮುಂತಾಗಿ ಸ್ವತಃ ಧಾಳಿ ನಡೆಸಲಾಗಿದೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಸೈನ್ಯ ಇಡಲಾಗಿದೆ. ಇರಾಕ್, ಮೇಲೆ ನಿರ್ಬಂಧ ಹೇರಿ ಆರ್ಥಿಕ ಬೆಳವಣಿಗೆಗೆ ಆರೋಗ್ಯಕ್ಕೆಧಕ್ಕೆ ತರಲಾಗುತ್ತಿದೆ. ಕೆಲವು ಜನಾಂಗಗಳನ್ನು ಎತ್ತಿ ಕಟ್ಟಿ ಶಸ್ತ್ರ ನೀಡಿ ಆಕ್ರಮಣ ಕೈಗೊಳ್ಳಲು ಪ್ರಚೋದಿಸೀರುವುದು.

ಪ್ರಶ್ನೆ: ನಿರ್ಬಂಧ ಅಂದರೆ ಯಾವ ರಂಗಗಳಲ್ಲಿ

ಸೂರಿ: ಇರಾಕ್‌ನೊಂದಿಗೆ ಯಾವುದೇ ದೇಶಗಳು ವ್ಯಾಪಾರ ಮಾಡುವಂತಿಲ್ಲ. ಈ ನಿರ್ಬಂಧ ಎಷ್ಟು ಅಮಾನವೀಯವಾಗಿದೆಯೆಂದರೆ ಉದಾಹರಣೆ ಇದರಂತೆ ಮಕ್ಕಳಿಗೆ ಹಾಲು ಕುಡಿಸುವ ಬಾಟಲು, ರಕ್ತದ ಒತ್ತಡ ಪರೀಕ್ಷಿಸುವ ಸಲಕರಣೆ ನಿರ್ಬಂಧದಲ್ಲಿ ಸೇರಿದೆ. ಇದೆಲ್ಲಾ ತೀರಾ ಅನ್ಯಾಯದ್ದು. ಇಂತಹ ಆಕ್ರಮಣಗಳಿಂದ ಇರಾಕ್‌ನ ಕುತ್ತಿಗೆ ಹಿಸುಕಬಹುದೆಂಬುದು ಅವರ ಲೆಕ್ಕಾಚಾರ. ಈ ಎಲ್ಲಾ ಸ್ಥಿತಿ ಜಗತ್ತಿನ ಜನರಿಗೆ ತಿಳಿಯಪಡಿಸಬೇಕೆಂಬುದು ಇರಾಕ್ ಜನರ ಆಶೆ.

ಆಕ್ರಮಣ ಈಗಲೂ ಸಹ ನಡೆಯುತ್ತಿರುವುದು ಮಿಲಿಟರಿ ಪ್ರದೇಶದಲ್ಲಲ್ಲ. ನಾಗರೀಕರು ವಾಸವಾಗಿರುವ ಪ್ರದೇಶದಲ್ಲಿ. ನಾವು ಬಾಸ್ರಾಕ್ಕೆ ಸಂದರ್ಶಿಸಬೇಕೆಂದಿತ್ತು ಆದರೆ ಅಲ್ಲಿನ ಸೇತುವೆಗಳ ಮೇಲೆ ಬಾಂಬ್ ಧಾಳಿ ನಡೆಯಿತು. ಹೀಗಾಗಿ ಅಲ್ಲಿಗೆ ಹೋಗುಲು ಆಗಲಿಲ್ಲ. ಸದಾ ಯುದ್ಧವಾತಾವರಣ ಅಲ್ಲಿದೆ.

ಪ್ರಶ್ನೆ: ಅಂದರೆ ನಿಮ್ಮ ಪ್ರಯಾಣ ಅಷ್ಟೇನೂ ಸುಸೂತ್ರವಾಗಿರಲಿಲ್ಲ.

ಸೂರಿ: ನಮ್ಮ ನಿಯೋಗ ಜೋರ್ಡಾನ್‌ನ ರಾಜಧಾನಿ ಅಮಾನನ್ನುರಂದು ತಲುಪಿತು ಅಲ್ಲಿಂದ ವಿಮಾನದಲ್ಲಿ ಹೋಗಲು ಸಾಧ್ಯವಿಲ್ಲದ್ದರಿಂದ ನಿರ್ಬಂಧಕೊಳಗಾದ ಪ್ರದೇಶ, ಕಾರ್‌ನಲ್ಲಿ ಕರೆದೊಯ್ದರು. ಜೋರ್ಡಾನ್ ಗಡಿಯಿಂದ ಬಾಗ್ದಾದ್‌ಗೆ 520 ಕಿ. ಮಿ. ಅಮಾನ್‌ನಿಂದ ಜೋರ್ಡಾನ್ ಗಡಿ 450 ಕಿ. ಮಿ. ಇದೆ. ಈ ಕಾರು ಪ್ರಯಾಣ ದಟ್ಟವಾದ ಮರಳುಗಾಡಿನ ನಡುವೆ 8ರ ಬೆಳಿಗ್ಗೆ ಬಿಟ್ಟು 9 ರ ಬೆಳಿಗ್ಗೆ ಬಾಗ್ದಾದ್ ತಲುಪಿದೆವು. ವಿಶಾಲವಾದ ರಸ್ತೆಗಳಲ್ಲಿ ನಮ್ಮ ಪ್ರಯಾಣ ಗಂಟೆಗೆ 180 ಕಿ.ಮೀ ಹೋಗಬೇಕಾಗಿತ್ತು.. ನಮ್ಮ ಕಾರಿನ ಡ್ರೈವರ್ 110 ಮಾತ್ರ ಓಡಿಸಿದ ನಡುವೆ ಪ್ಯಾಲೀಸ್ತೀನಿಯನ್‌ನಲ್ಲಿ ತಂಗುವ ವ್ಯವಸ್ಥೆ ಇತ್ತು.

ಪ್ರಶ್ನೆ: ಇರಾಕ್‌ನಲ್ಲಿ ನೀವು ಸಂದರ್ಶಿಸಿದ ಸ್ಥಳಗಳಾವುವು? ಒಟ್ಟು ಕಾರ್ಯಕ್ರಮವೇನಿತ್ತು?

ಸೂರಿ: ಒಂದು ವಾರ ಬಾಗ್ದಾದ್‌ನಲ್ಲಿದ್ದೆವು ಆ ದಿನಗಳಲ್ಲಿ ಕಾರ್ಖಾನೆಗಳಿಗೆ ಭೇಟಿ, ಬಾಂಬ್‌ಧಾಳಿಗೊಳಗಾದ ಜಾಗಗಳ ಪರೀಶೀಲನೆ, ವಾಯುಧಾಳಿಗೊಳಗಾದ ಜಾಗಗಳ ಪರೀಶೀಲನೆ, ವಾಯುಧಾಳಿ ರಕ್ಷಣದ ಸ್ಥಳಗಳ ನಾಶವಾದದ್ದು ಶಿಕ್ಷಣ ಸಂಸ್ಥೆ, ಆಸ್ಪತ್ರೆ ಮುಂತಾದೆಡೆ ಭೇಟಿ. ಅಲ್ಲದೇ ಕಾರ್ಮಿಕ ಸಂಘದ ಪದಾಧಿಕಾರಿಗಳ ಜೊತೆ ಚರ್ಚೆ, ಇರಾಕ್‌ನ ಉಪಾಧ್ಯಕ್ಷ ರಮಾಧ್ವಾನ್‌ರ ಭೇಟಿ, ಸೋಶಿಯಲಿಸ್ಟ್ ಪಾರ್ಟಿಯ ಮುಖಂಡರೊಂದಿಗೆ ವಿಚಾರ ವಿನಿಮಯ, ಹೀಗೆ ಹಲವಾರು ಕಾರ್ಯಕ್ರಮಗಳಿದ್ದವು

ಪ್ರಶ್ನೆ: ಆ ಸಂಧರ್ಭದಲ್ಲಿ ಕಂಡು ಬಂದ ಅಂಶಗಳೇನು?

ಸೂರಿ: ಒಂದನೆಯದಾಗಿ ಅಮೇರಿಕನ್ ಸಾಮ್ರಾಜ್ಯವಾದಿಗಳ ಕೂಟದ ಧಾಳಿ ಮತ್ತು ನಿರ್ಬಂಧದ ವಿನಾಶಕಾರಿ ಪರಿಣಾಮಗಳು. ಎರಡನೆಯದಾಗಿ ಅವೆಲ್ಲವನ್ನೂ ಎದುರಿಸಿ ಎದ್ದು ನಿಲ್ಲುವ ಅದ್ಯಮ್ಯ ಉತ್ಸಾಹದ ಹೋರಾಟ ನಿರತ ಜನತೆ. ನಾವು ನದಿ, ಆಸ್ಪತ್ರೆ, ಕೃಷಿರಂಗ, ಕಾರ್ಖಾನೆ, ಮುಂತಾದೆಡೆ ಭೇಟಿ ನೀಡಿದಾಗ ಇರಾಕ್ ಎಷ್ಟೊಂದು ಧಾಳಿಗೆ ಒಳಗಾಗಿದೆ ಎಂಬುದು ನಿಚ್ಚಳವಾಗಿ ಕಂಡಿತು. ಅಲ್ಲಿ ಕುಡಿಯುವ ಶುದ್ಧ ನೀರಿಗೆ, ಔಷಧಿಗಳಿಗೆ ಅಭಾವವಿದೆ. ಕಾರ್ಖಾನೆಗಳಿಗೆ ಕಚ್ಚಾ ಮಾಲು ಹೊರಗಿನಿಂದ ಸರಬರಾಜು ಆಗುತ್ತಿಲ್ಲ. ಎಷ್ಟೋ ಕೈಗಾರಿಕೆಗಳು ನಿಂತಿವೆ. ಅಥವಾ ಭಾಗಶಃ ಮಾತ್ರ ಕೆಲಸ ಮಾಡುತ್ತಿವೆ. ಕಾರ್ಖಾನೆಗಳಿಗೆ ಬಿಡಿಭಾಗಗಳ ಪೂರೈಕೆ ಇಲ್ಲ. ಉತ್ಪಾದನೆ ಸ್ಥಗಿತವಾಗಿ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಉದಾಹರಣೆಗೆ ಯುದ್ಧ ಪೂರ್ವದಲ್ಲಿ 50,000 ಭಾರತೀಯರು ಕೆಲಸ ಮಾಡುತ್ತಿದ್ದರು. ಆದರೆ ಈಗ ಕೇವಲ 4,000 ಮಾತ್ರ.

ಪೌಷ್ಟಿಕ ಆಹಾರ, ಔಷಧಿ ಅಭಾವದಿಂದ ನೂರಾರು ಜನರ, ಸಣ್ಣ ಮಕ್ಕಳ ಸಾವಿನ ಸಂಖ್ಯೆ ಹೆಚ್ಚಿದೆ. ಮಕ್ಕಳ ಆಸ್ಪತ್ರೆಗೆ ಹೋಗಿದ್ದೆವು ತುಂಬಾ ಚೊಕ್ಕಟವಾದ ಆಸ್ಪತ್ರೆಗಳು ಅಪೌಷ್ಟಿಕತೆಯಿಂದ ಮಕ್ಕಳು ನರಳುತ್ತಿದ್ದರು. ಹಲವಾರು ಮಕ್ಕಳಿಗೆ ರಕ್ತ ನೀಡಲಾಗುತ್ತಿತ್ತು. ಮೂರುವರೆ ವರ್ಷದ ಮಗು ಸಾಮಾನ್ಯವಾಗಿ ಹದಿನೈದು ಕೆ.ಜಿ. ಇರಬೇಕು. ಆದರೆ ಅದು ಎಳು ಕೆ.ಜಿ. ಇದೆ. ಇಂತಹ ಅಸಹಜ ಸ್ಥಿತಿ ಮತ್ತು ವೈದ್ಯಕೀಯ ಕೊರತೆಯಿಂದಾಗಿ ಸಾವಿನ ಸಂಖ್ಯೆ 8 ರಿಂದ 10 ಪಟ್ಟು ಹೆಚ್ಚಿದೆಯೆಂದು ಆಸ್ಪತ್ರೆ ಅಧಿಕಾರಿಗಳು ತಿಳಿಸಿದರು. ಬಾಂಬ್ ಧಾಳಿಯಿಂದಾಗಿ ಎಷ್ಟೋ ಸೇತುವೆ, ಕಟ್ಟಡಗಳು, ವಿದ್ಯುತ್ ಘಟಕಗಳು ಮುಂತಾದವು ಹಾನಿಯಾಗಿವೆ.

ಪ್ರಶ್ನೆ: ಬಾಂಬ್ ಧಾಳಿಗೆ ಒಳಗಾಗಿರುವ ಸ್ಥಳಗಳಿಗೆ ಭೇಟಿ ನೀಡಿದ್ದೀರಾ!

ಸೂರಿ: ಹೌದು ನೋಡಿದೆವು ಈ ಧಾಳಿ ಎಷ್ಟು ಬರ್ಬರವಾಗಿದೆಯೆಂಬುದಕ್ಕೆ ಒಂದು ಉದಾಹರಣೆ ನೀಡುತ್ತೇನೆ. ಬಾಗ್ದಾದ್ ಜನಗಳು, ವಾಸಮಾಡುವ ಪ್ರದೇಶದಲ್ಲಿ ಬಾಂಬ್ ದಾಳಿಯಿಂದ ಜನರನ್ನು ರಕ್ಷಿಸಲೆಂದು ನಿರ್ಮಿಸಲಾಗಿದ್ದ ಪ್ರದೇಶಗಳಲ್ಲಿವೊಂದಕ್ಕೆ ಹೋಗಿದ್ದೆವು 10 ಮೀಟರ್ ಅಗಲವಾದ ಕಂದಕದಲ್ಲಿ 709 ಜನ ವಾಸಮಾಡಬಹುದು. ಅಮೇರಿಕಾ ಬಾಂಬ್ ಧಾಳಿ ಮಾಡಿದಾಗ ಜನ, ಮಕ್ಕಳು ಅದರೊಳಗೆ ಅವಿತಿದ್ದರು. ಬಾಗಿಲುಗಳನ್ನು ಮುಚ್ಚಿದ್ದರು ಆದರೆ ಬಾಂಬ್ ಧಾಳಿಯಿಂದಾಗಿ ಬಿಡುಗಡೆಯಾದ 4000 ಕಿಲೋ ವ್ಯಾಟ್ ಶಾಖದಿಂದಾಗಿ ಮೂರುವರೆ ದಿನಗಳಲ್ಲಿ ಒಳಗಿದ್ದವರೆಲ್ಲರ ರಕ್ತ ಉರಿದು ಕರಕಾಗಿ ಹೋದರು. ಈಗಲೂ ಗೋಡೆಗಳಿಗೆ ಊರಿದ ಅಂಗೈಗಳು, ರಕ್ತದ ಕಲೆ ಹಾಗೇ ಅಂಟಿಕೊಂಡಿದೆ. ದೇಹದ ಛಾಪುಗಳಿವೆ. ಅಲ್ಲಿ ಸತ್ತ ಮಕ್ಕಳು, ಮಹಿಳೆ ಮತ್ತು ಜನರ ಫೋಟೋಗಳನ್ನು ಹಾಕಲಾಗಿದೆ. ಇದನ್ನು ನೋಡಿದರೆ ಅಮೇರಿಕಾಕ್ಕೆ ಮನುಷ್ಯತ್ವ ಇದೆಯೇ ಎಂದು ಪ್ರಶ್ನಿಸಬೇಕಾಗುತ್ತದೆ.

'ಮ್ಯುಸಿಯಂ ಆಫ್ ಡಾಕ್ಯುಮೆಂಟೇಶನ್'ಗೆ ಭೇಟಿ ನೀಡಿದ್ದೇವೆ. ಮೂರು ಅಂತಸ್ತಿನ ಮ್ಯುಸಿಯಂ ಅದು, ಮೊದಲ ಮಹಡಿಯಲ್ಲಿ ಆಸ್ಪತ್ರೆ, ಶಾಲಾ-ಕಾಲೇಜ್, ಮನೆಗಳು ನಾಶವಾದ ಬಗ್ಗೆ ಫೋಟೋಗಳಿವೆ. ಎರಡನೆಯ ಅಂತಸ್ತಿನಲ್ಲಿ ಸೇತುವೆಗಳದು, ಮೂರರಲ್ಲಿ ವಿದ್ಯುತ್ ಸ್ಥಾವರ, ತೈಲಗಾರ, ನಾಶವಾದ ಬಗ್ಗೆ ಇವೆ. ಇದರೊಂದಿಗೆ ಮತ್ತೆ ಅವೆಲ್ಲವುಗಳನ್ನು ದುರಸ್ತಿ ಮಾಡಿದ ಚಿತ್ರಗಳು ಇವೆ. ಒಂದು ತುಲಾನಾತ್ಮಕ ಚಿತ್ರ ಸಿಗುತ್ತದೆ. ಅಲ್ಲಿಯ ಜನರ ಪರಿಶ್ರಮ, ದೇಶ ಪ್ರೇಮ, ಹಠ ಮೆಚ್ಚುವಂತಹದ್ದೇ ಆಗಿದೆ.

ಪ್ರಶ್ನೆ : ಜನರಲ್ಲಿ ದೇಶಪ್ರೇಮ, ಹಠವಿದೆಯೆಂದಿರಿ ಹೌದು ಅಭಿವ್ಯಕ್ತಿಯಾದ ಇನ್ನೂ ಕೆಲವು ಉದಾಹರಣೆ ಇರಬಹುದಲ್ಲ.

ಸೂರಿ: ವ್ಯವಸಾಯಕ್ಕೆಂದೆ ಯುಫ್ರೆಟಿಸ್ ನದಿಯಿಂದ ಒಂದು ಉಪನದಿಯನ್ನು ತೋಡಿದ್ದಾರೆ. 560 ಕಿ.ಮೀ ಉದ್ದ, 50 ಮೀಟರ್ ಅಗಲ, 30 ಮೀಟರ್ ಆಳವಿದೆ. ಈ ಉಪ ನದಿಯನ್ನು ಕೇವಲ ಆರು ತಿಂಗಳಲ್ಲೇ ನಿರ್ಮಿಸಿದ್ದಾರೆ. ಇದಕ್ಕೆ 'ಸದ್ದಾಂ ರಿವರ್' (ನದಿ) ಎಂದು ಹೆಸರಿಸಿದ್ದಾರೆ. ಹೀಗೆಯೇ ಇನ್ನೊಂದು ಸಾಹಸದಿಂದ 'ಸದ್ದಾಂ ಟವರ್'ನ್ನು ಕಟ್ಟಿದ್ದಾರೆ. ಸಾಮ್ರಾಜ್ಯಶಾಹಿ ನಾಶಮಾಡಿದ್ದನ್ನೆಲ್ಲ ಪುನರ್ ನಿರ್ಮಾಣ ಮಾಡುತ್ತಿದ್ದಾರೆ. ಬಾಗ್ದಾದ್ ಸಂದರ್ಶಿಸಿದವರಿಗೆ ಹಿಂದೆ ಬಾಂಬ್ ಧಾಳಿ ನಡೆದಿತ್ತೇ ಎಂದು ಅನುಮಾನ ಬರುತ್ತದೆ. ಇದೀಗ ಒಂದು ಬೃಹತ್ ಸೇತುವೆ ಕಾರ್ಯ ನಡೆದಿದೆ. ನಾನು ಕಾರ್ಮಿಕ ಮುಖಂಡರೊಬ್ಬರಿಗೆ ಕೇಳಿದೆ. ಇಷ್ಟೊಂದು ತ್ವರಿತ ವೇಗದಲ್ಲಿ ಪುನರ್ ನಿರ್ಮಾಣ ಹೇಗೆ ಸಾಧ್ಯವಾಯಿತು, ಎಂದಾಗ ಅವರು ಹೇಳಿದರು. "ಜನರ ಅಪ್ಪಟ ದೇಶ ಪ್ರೇಮ, ಅಮೇರಿಕಾ ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸುವ ಛಲ, ಈ ಕಾರ್ಯಕ್ಕೆ ಜನರೆಲ್ಲರನ್ನು ಅಣಿನೆರೆಸಿ ಸ್ಫೂರ್ತಿ ತುಂಬುವ ಸದ್ದಾಂ ಹುಸೇನರ ನಾಯಕತ್ವ"

ಪ್ರಶ್ನೆ: ಸದ್ದಾಂ ಹುಸೇನ್‌ರಿಗೆ ಈಗಲೂ ಜನಪ್ರಿಯತೆ ಇದೆಯೇ? ಆತ ಮಣ್ಣು ಮುಕ್ಕುತ್ತಿರುವ ಸರ್ವಾಧಿಕಾರಿ ಮುಂತಾದ ಭಯಂಕರ ಪ್ರಚಾರವಿದೆಯಲ್ಲಾ?

ಸೂರಿ: ಅದು ಸೃಷ್ಟಿಸಿದ ಅಪಪ್ರಚಾರ ಸದ್ದಾಂ ಜನಪ್ರಿಯತೆ ಅಪಾರವಾಗಿದೆ. ಅಲ್ಲಿಯ ಜನತೆಯ ಹೋರಾಟ, ದೇಶ ಪ್ರೇಮದ ಬಗ್ಗೆ ಹಲವಾರು ನಿದರ್ಶನಗಳನ್ನು ಅಲ್ಲಿಯ ಮುಖಂಡರು ನೀಡಿದರು.

ಪ್ರಶ್ನೆ: ಷಿಯಾ, ಖುರ್ದಿಷ್ ಜನಾಂಗದವರಿಗೆ ವಿಪರೀತ ಕಿರುಕುಳ, ಹಿಂಸೆ, ತಾರತಮ್ಯ ಮಾಡಲಾಗುತ್ತದೆಯೆಂಬ ಮಾತುಗಳು ಕೇಳುತ್ತವೆಯಲ್ಲಾ ನಿಜ ಸ್ಥಿತಿ ಏನು?

ಸೂರಿ: ಇದು ನಿಜವಲ್ಲ. ನಮ್ಮೊಂದಿಗಿದ್ದ ಇರಾಕ್‌ನ ಕ್ರಾಂತಿಕಾರಿ, ಮಂಡಳಿ ಸದಸ್ಯ ಮಿಸ್‌ಬಾನ್ ರವರು ಒಬ್ಬ 'ಷಿಯಾ' ಆಗಿದ್ದರು. ಈ ಬಗ್ಗೆ ಅವರನ್ನು ಕೇಳಿದೆವು ಸಹ. ಅವರು ಹಲವಾರು ಮಂತ್ರಿಗಳು 'ಷಿಯಾಬ್' ಎಂದು ವಿವರಿಸಿದರು. ವಿದೇಶಾಂಗ ವ್ಯವಹಾರ ಸಚಿವ ಖಲೀಂರವರು 'ಷಿಯಾಬ್' ಎಂದು ತಿಳಿಯಿತು. ಅಲ್ಲದೇ ಖುರ್ದಿಷ್ ಪ್ರದೇಶದ ಹಲವಾರು ನಾಯಕರನ್ನು ಪರಿಚಯಿಸಿದರು. ಹಾಗೆ ನೋಡಿದರೆ ಇರಾಕ್ ಒಂದು ಧರ್ಮನಿರಪೇಕ್ಷತ (ಸೆಕ್ಯುಲರ್) ರಾಷ್ಟ್ರವೆನಿಸುತ್ತದೆ. ಇರಾಕ್ ಮೇಲ್ ಅಧಿಪತ್ಯ ಸಾಧಿಸಲು ಅಮೇರಿಕಾ ಸಾಮ್ರಾಜ್ಯಶಾಹಿ ಕೂಟ ಜನರಲ್ಲಿ ಗೊಂದಲ ಹುಟ್ಟಿಸಲು ನಡೆಸುತ್ತಿರುವ ವ್ಯವಸ್ಥಿತ ಅಪಪ್ರಚಾರವಿದು. ಆ ಪ್ರದೇಶವನ್ನು ವಿಮಾನ ಹಾರಾಟ ನಿಷೇಧಿತ ಪ್ರದೇಶವೆಂದು ಸಾರಿ ಅಲ್ಲಿಂದ ಕುತಂತ್ರ ಸಾಧಿಸಬಹುದೆಂದು ಅಮೇರಿಕಾ ಬಗೆದಿದೆ.

ಪ್ರಶ್ನೆ: ಕಾರ್ಖಾನೆಗಳು ಮತ್ತು ಕಾರ್ಮಿಕ ಬಾಂದವ್ಯ ಹೇಗಿದೆ?

ಸೂರಿ: ಹಲವಾರು ಕಾರ್ಖಾನೆಗಳಿಗೆ ಭೇಟಿ ಕೊಟ್ಟೆವು ಅತ್ಯಾಧುನಿಕ ಸೇಯ್ಗೆ ಕಾರ್ಖಾನೆಗೆ ಹೋಗಿದ್ದೇವು ಜರ್ಮನಿಯ ಯಂತ್ರವದು. ಹಿಂದೆ 200 ಜನ ಕೆಲಸಗಾರರಿದ್ದರು. ಈಗ 20 ಮಾತ್ರ ಕಾರಣ ದಿಗ್ಬಂಧನದಿಂದಾಗಿ ಕಚ್ಚಾ ಮಾಲು ಪೂರೈಕೆಯಿಲ್ಲ, ಬಿಡಿ ಭಾಗಗಳೂ ಸಿಗುತ್ತಿಲ್ಲ. ಇಷ್ಟಾಗಿದ್ದಾಗ್ಯೂ ಕೆಲವು ತಿಂಗಳು ಸಂಬಳ ನೀಡುತ್ತಿದ್ದೆವು ಈಗ ಸ್ವಲ್ಪ ಸಹಾಯ ಮಾತ್ರ ಮಾಡುತ್ತಿದ್ದೇವೆ. ಕಷ್ಟದ ದಿನಗಳು ಕಾರ್ಮಿಕರು ದುಡಿದ್ದಾರೆ. ಮುಂದೆಯೂ ದುಡಿಯುವರು. ಈ ಬಾಂಧವ್ಯ ಉಳಿಯಬೇಕು. ಅವರಿಗೆ ಸಹಾಯ ಮಾಡುವುದ ದೇಶ ಪ್ರೇಮಿಗಳ ಕರ್ತವ್ಯ ಎಂದರು. ಸಾಫ್ಟ್ ಡ್ರಿಂಕ್ಸ್ ಕೋಕಾ ಕೋಲಾ ಕಾರ್ಖಾನೆಗಳಿಗೆ ಹೋಗಿದ್ದೆವು ಹಿಂದೆ 2,500 ಜನ ಕೆಲಸಗಾರರಿದ್ದರು. 120 ಸಾಗಾಣಿಕಾ ಗಾಡಿಗಳನ್ನು ಕಾರ್ಖಾನೆಯನ್ನು ಕಂಪನಿ ವ್ಯವಸ್ಥಾಪಕ ನಿರ್ದೇಶಕರು ತೋರಿಸಿದರು. ಈಗ ಕೆಲಸಗಾರರು 300 ಜನ ಮಾತ್ರ ಅಲ್ಲಿ ಸೋಡಾ ಮಾತ್ರ ತಯಾರಿಸಲಾಗುತ್ತಿದೆ. ಅಲ್ಲಿಯ ಎಂ.ಡಿ. ಯವರು ಸ್ಥಿತಿ ವಿವರಿಸಿ ಅಮೇರಿಕಾದ ಕೆಲಸದಿಂದಲೇ ಇದೆಲ್ಲಾ ಎಂದು ಹೇಳಿದರು. ಹೊಸೈರಿ ಮತ್ತು ಡೈಯಿಂಗ್ 'ಉಡುಪು ಕಾರ್ಖಾನೆಗಳು ಕೇವಲ ಶೇ. 20 ರಷ್ಟು ಮಾತ್ರ ನಡೆಯುತ್ತಿದೆ.

ಪ್ರಶ್ನೆ: ಕುಸಿದ ಆರ್ಥಿಕ ಸರಿಪಡಿಸಿಕೊಂಡು ಮುಂದೆ ಹೋಗಲು ಅವರ ಪ್ರಯತ್ನಗಳೇನು?

ಸೂರಿ: ಗೋಧಿ ಬಾರ್ಲಿಯನ್ನು ಅಗತ್ಯಕ್ಕೆ ತಕಷ್ಟು ಬೆಳೆಯಲಾಗುತ್ತಿದೆ. ಮೂಸಂಬಿ, ಕಿತ್ತಳೆ, ಖರ್ಜೂರ ಮುಂತಾದ ಹಣ್ಣುಗಳ ಬೆಳೆಯೂ ಉತ್ತಮವಾಗಿದೆ. ಯುಪ್ರಿಟಸ್ ನದಿಯಲ್ಲಿ ಒಂದು ದ್ವೀಪವಿದೆ. ಸುಂದರವಾದ ಉದ್ಯಾನವನ, ತಂಗು ಸುವ್ಯವಸ್ಥೆ ಇರುವ ಪ್ರವಾಸಿ ಕೇಂದ್ರ. ಬಾಗ್ದಾದ್‌ನಿಂದ 50 ಕಿ.ಮೀ. ದೂರವಿರುವ ಈ ಪ್ರವಾಸಿ ಕೇಂದ್ರಕ್ಕೆ ಹಿಂದೆ ಪ್ರವಾಸಿಗರು ತುಂಬಾ ಬರುತ್ತಿದ್ದರು. ದಿಗ್ಬಂಧನದಿಂದಾಗಿ ಈಗ ಕಮ್ಮಿ ಕಟ್ಟಡದ ನಿರ್ಮಾಣದಲ್ಲಿ 5-6 ಸಾವಿರ ವರ್ಷಗಳಷ್ಟು ಹಳೆಯದಾದ ಬಾಬಿಲೋನಿಯಾದ ನಾಗರೀಕತೆಯಲ್ಲಿ ಬಳಸುತ್ತಿದ್ದ ಸ್ಥಳೀಯ ತಂತ್ರಜ್ಞಾನದ ಆಧಾರದಲ್ಲಿ ಅವರದೇ ಸ್ವಯಂ ವಿಶಿಷ್ಟ ಶೈಲಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಅಲ್ಲಿ ಮಿನರಲ್ ವಾಟರ್ (ನೀರು) ಒಂದು ಬಾಟಲ್‌ಗೆ 7 ರಿಂದ 8 ರೂಪಾಯಿಗಳು. ಆದರೆ ಪೆಟ್ರೋಲ್ ಲೀಟರ್‌ಗೆ 7 ಪೈಸೆ ಇದು ಯಥೇಚ್ಛವಾಗಿದೆ. ದಿಗ್ಬಂಧನ ತೆಗೆದಲ್ಲಿ ವಿದೇಶಗಳೊಂದಿಗೆ ವ್ಯಾಪಾರ ಮಾಡಬಹುದು ಎನ್ನುತ್ತಾರೆ.

ಪ್ರಶ್ನೆ: ಇರಾಕ್ ಆಡಳಿತ ಬಗ್ಗೆ ಏನನ್ನಿಸಿತು?

ಸೂರಿ: ಜೀವನಾವಶ್ಯಕ ವಸ್ತುಗಳು 'ಸಾರ್ವಜನಿಕ ವಿತರಣಾ ವ್ಯವಸ್ಥೆ ತುಂಬಾ ಸಮರ್ಥವಾಗಿ ಪರಿಣಾಮಕಾರಿಯಾಗಿದೆ. ಆಡಳಿತದಲ್ಲಿ ಶಿಸ್ತು, ದಕ್ಷತೆಗೆ ಹೆಚ್ಚು ಗಮನವಿದೆ. ಭ್ರಷ್ಟಚಾರಿಗಳನ್ನು ಬಹಿರಂಗ ನೇಣು ಹಾಕಲಾಗುತ್ತದೆ ಎಂದು ಭಾರತೀಯ ಇಂಜನೀಯರೊಬ್ಬರು ತಿಳಿಸಿದರು.

ಪ್ರಶ್ನೆ: ಇರಾಕ್‌ನಿಂದ ಏನಾದರೂ ಸಾಹಿತ್ಯ ತಂದೀರಾ?

ಸೂರಿ: ಇಲ್ಲ, ಕಾಗದದ ಅಭಾವವಿದೆ ನಮ್ಮ ಜಂಟಿ ಹೇಳಿಕೆಯನ್ನು ಕೇವಲ 2 ಪ್ರತಿ ಮಾತ್ರ ಮಾಡಿದೆವು

ಪ್ರಶ್ನೆ: ಬಾಂಧವ್ಯ ಬೆಳೆಸುವುದರಲ್ಲಿ ಈ ಭೇಟಿ ಯಶಸ್ವಿಯಾಯಿತಾ? ಅಲ್ಲಿನ ಕಾರ್ಮಿಕ ಸಂಘಟನೆಗಳು ಎಷ್ಟಿವೆ? ಸುಧಾರಣವಾದಿ, ಇತ್ಯಾದಿ....

ಸೂರಿ: ಇರಾಕ್‌ನಲ್ಲಿ ಕಾರ್ಮಿಕ ಸಂಘ



ಇರುವುದು ಒಂದೇ. ಅದು ಜನರಲ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್, ಇರಾಕ್ (GFTUI). ಅತೀ ದೊಡ್ಡದು ಇದು ಸರ್ಕಾರದ ಮತ್ತು ಅರಬ್ ಬಿಯಾತ್ ಸೋಶಲಿಸ್ಟ್ ಪಾರ್ಟಿಯಾಗಿದೆ ಅದರಲ್ಲಿ ಕೈಗಾರಿಕಾವಾರು ಆರು ವಿಭಾಗಗಳಿವೆ. 9 ಮಹಡಿಯ ಸ್ವಂತ ಕಟ್ಟಡ, ಸುವ್ಯವಸ್ಥಿತ ಕಛೇರಿ ಇದೆ.

ಸಿ.ಐ.ಟಿ.ಯು. ಮತ್ತು ಜಿ. ಎಫ್.ಟಿ.ಯು.ಐ. ನಡುವೆ ಸೌಹಾರ್ದ ಸಂಬಂಧ ಬೆಳೆಸುವಲ್ಲಿ ಯಶಸ್ವಿಯಾದ ಭೇಟಿ ಇದು. ಹಲವಾರು ವಿಷಯಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡೆವು ಅನುಭವಗಳು ತುಂಬಾ ಮುಖ್ಯವಾದವುಗಳು. ಎರಡು ದೇಶಗಳ ಕಾರ್ಮಿಕ ವರ್ಗದ ಭಾವನೆಗಳನ್ನು ಹಂಚಿಕೊಂಡೆವು ಇರಾಕ್ ಮೇಲಿನ ನಿರ್ಬಂಧ ಅನ್ಯಾಯದ್ದೆಂದು, ಧಾಳಿಯನ್ನು ಸಿ.ಐ.ಟಿ.ಯು ಖಂಡಿಸಿತು. ಅಮೇರಿಕಾ ಸಾಮ್ರಾಜ್ಯಶಾಹಿ ಧೋರಣೆ, ಸ್ಪುಟವಿದ್ದು ಹೋರಾಟವನ್ನು ಭಾರತದಲ್ಲಿ ನಾವು ನಡೆಸುತ್ತಿರುವ ಬಗ್ಗೆ ತಿಳಿಸಿದೆವು ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಶರತ್ತಿನ ಸಾಲ, ದುಷ್ಪರಿಣಾಮಗಳ ವಿರುದ್ಧ ಹಲವಾರು ಹಂತಗಳ ಹೋರಾಟ ವಿವರಿಸಿದೆವು 'ಭಾರತ್‌ಬಂದ್' ಮಾಡಲು ತಯಾರಿ ಪ್ರಸ್ತಾಪಿಸಿದೆವು ಅಂತಿಮವಾಗಿ ಒಂದು ಜಂಟಿ ಹೇಳಿಕೆ ಬಿಡುಗಡೆಮಾಡಿ ದಿಗ್ಬಂಧನ ತೆಗೆಯಬೇಕೆಂದು ವಿಶ್ವಸಂಸ್ಥೆಯನ್ನು ಒತ್ತಾಯಿಸುವುದು, ಔಷಧಿ, ಆಹಾರ, ಪೂರೈಕೆ ಆಗಬೇಕು, ಇರಾಕ್‌ಗೆ ಸೌಹಾರ್ದತಾ ವ್ಯಕ್ತಪಡಿಸಿ ಕಾರ್ಯಕ್ರಮ ನಡೆಸುವುದೆಂದು ಅಭಿಪ್ರಾಯಕ್ಕೆ ಬರಲಾಗಿದೆ.

ಈ ಭೇಟಿಯು ಅರಬ್ ರಾಷ್ಟ್ರಗಳೊಂದಿಗ ಸಿ.ಐ.ಟಿ.ಯುಗೆ ಇನ್ನೂ ಹೊಸ ಬಾಂಧವ್ಯದ ಅವಕಾಶ ಕಲ್ಪಿಸಿದೆ. ಅದೇ ಸಂದರ್ಭದಲ್ಲಿ ಜೋರ್ಡಾನ್ ದೇಶದ 'ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್' ಆಹ್ವಾನ ಬಂದು ಅಮಾನ್‌ನಲ್ಲಿ 2 ದಿನ ಇದ್ದು ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಮತ್ತಿತರ ಪದಾಧಿಕಾರಿಗಳೊಂದಿಗೆ ಚರ್ಚಿಸಿದೆವು ಸಿ.ಐ.ಟಿ.ಯು ನೊಂದಿಗೆ ಬಾಂಧವ್ಯ ಬೆಳೆಸಲು ಅವರು ಉತ್ಸುಕರಾಗಿ

ಪುಟ 7 ಕ್ಕೆ

- ಇರಾಕ್ ವಿಸ್ತೀರ್ಣ : 4 ಲಕ್ಷ ಚ. ಮೈ.
- 60% ಮರಳುಗಾಡು, ಬೆಟ್ಟಗಳು.
- 2 ನದಿ, ಟೈಗ್ರಿಸ್, ಯುಪ್ರಿಟಿಸ್,
- ಜನಸಂಖ್ಯೆ 19 ಮಿಲಿಯನ್.
- ಸಾವಿರ 'ಪಿಲಾರ್'ಗೆ ಒಂದು 'ದಿನಾರ್'
- 70 ಪಿಲಾರ್ ಒಂದು ಲೀಟರ್ ತೈಲ
- (ನಮ್ಮಲ್ಲಿ 7 ಪೈಸೆ ಎನ್ನಬಹುದು.)

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ವಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು - 560 027, ಫೋನ್ : 236462 ಸಂಪಾದಕರು : ವಿ.ರಾಮಚಂದ್ರರಾವ್